ಸಂಪುಟ: 13 Volume | ಸಂಚಿಕೆ: 298 Issue | ಪುಟಗಳು 08 Pages | ಗುರುವಾರ 15 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲ ಪ್ರೀತಿ ಇದ್ದೇ ಇರುವುದು.
–ಸಂತ ಕಬೀರ

ಪಟಾಕಿಯ ಕಿಡಿ: ಗಡಿಯಾರ ಕಂಬದಲ್ಲಿ ಬೆಂಕಿ 6
ಸಂಕ್ರಾಂತಿಯ ಸಂಭ್ರಮ 7
ಬಸವಣ್ಣನವರ ಮೂರ್ತಿ ಅನಾವರಣ 8



ವಿವಿಧ ಸಮುದಾಯದ ಧರ್ಮ ಗುರುಗಳು ಜನಪ್ರತಿನಿಧಿಗಳು ಗಣ್ಯರು ಹಾಗೂ ಸಾರ್ವಜನಿಕರು, ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಇಂದು ಭಾಲ್ಕೀಯ ಭೀಮಣ್ಣ ಖಂಡ್ರೆ ಅವರ ನಿವಾಸಕ್ಕೆ ಆಗಮಿಸಿ ಅವರ ಯೋಗ ಕ್ಷೇಮ ವಿಚಾರಿಸಿದರು.

## ಅಪಘಾತದಲ್ಲಿ ಮೂವರ ಸಾವು

ಶಿವಮೊಗ್ಗ: ತೀರ್ಥಹಳ್ಳಿಯ ಭಾರತಿಪುರ ಕ್ರಾಸ್ ಬಳಿ ಏಖಖಖಿಅ ಬಸ್ ಮತ್ತು ಕಾರಿನ ನಡುವೆ ಭೀಕರ ಅಪಘಾತ ಆಗಿ ಮೂವರು ಮೃತಪಟ್ಟಿದ್ದಾರೆ. ರಿಯಾಜ್ ಅಹಮದ್ ಹಾಗೂ ಫಾತಿಮಾ ಮೃತರು. ಮಗು, ಕಾರಿನ ಚಾಲಕ ಮತ್ತು ಪಕ್ಕದ ಸೀಟಿನಲ್ಲಿದ್ದ ಮಹಿಳೆ ಮೃತಪಟ್ಟಿದ್ದು ಕಾರಿನಲ್ಲಿದ್ದ ಉಳಿದ ಮೂವರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರೆಲ್ಲರೂ ಚನ್ನಗಿರಿಯಲ್ಲಿ ಮದುವೆ ಕಾರ್ಯಕ್ರಮ ಮುಗಿಸಿ, ವಾಪಸ್ ಕಿಗ್ಗಾಕ್ಕೆ ಹೋಗುತ್ತಿದ್ದರು. ಮಂಗಳೂರಿನಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದ ಬಸ್ ಡಿಕ್ಕಿಯಾಗಿದೆ. ಸ್ಥಳಕ್ಕೆ ತೀರ್ಥಹಳ್ಳಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಕೇಸ್ ದಾಖಲಿಸಿಕೊಂಡಿದ್ದಾರೆ.

## ಸರ್ಕಾರ ಜತೆ ಚರ್ಚಿಸಿ ಸೂಕ್ತ ಕ್ರಮ



**ಬೆಂಗಳೂರು:** ಶಾಲಾ ಕಾಲೇಜುಗಳಲ್ಲಿ ಪತ್ರಿಕೆಗಳ ಪ್ರಮುಖ ಸುದ್ದಿಗಳನ್ನು ಓದುವುದು ಮತ್ತು ನೋಟೀಸ್ ಬೋರ್ಡ್‌ನಲ್ಲಿ ಹಾಕುವುದನ್ನು ಕಡ್ಡಾಯ ಮಾಡುವ ನಿಟ್ಟಿನಲ್ಲಿ ಸರ್ಕಾರದಿಂದ ಆದೇಶ ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ತಿಳಿಸಿದ್ದಾರೆ. ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಉಪಾಧ್ಯಕ್ಷರಾದ ಎಚ್.ಬಿ.ಮದನಗೌಡ ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ಸಲ್ಲಿಸಿದ ಮನವಿ ಸ್ವೀಕರಿಸಿದ್ದಾರೆ.



ಮುದಗಲ್: ಸಮೀಪದ ತೊಂಡಿಹಾಳ ಗ್ರಾಮದಲ್ಲಿ ಜರುಗಲಿರುವ ಹುಲಿಗೆಮ್ಮ ದೇವಿ ದೇವಸ್ಥಾನ ಜಾತ್ರ ಮಹೋತ್ಸವ ಕಾರ್ಯಕ್ರಮದ ಸ್ಥಳವನ್ನು ಜಿಲ್ಲಾ ಹೆಚ್ಚುವರಿ 1. ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಅವರು ಜಾತ್ರಾ ಕಾರ್ಯಕ್ರಮದ ಸ್ಥಳವನ್ನು ಮುಂಚಿತವಾಗಿ ಬುಧುವಾರ ಪರಿಶೀಲಿಸಿದರು.

## ವಿಜಯೇಂದ್ರನೇ ಬಿಜೆಪಿ ಸಾರಥಿ...?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಮತ್ತು ರಾಜ್ಯ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಜ. 20ರಂದು ಚುನಾವಣೆ ನಡೆಸಲು ಸಿದ್ಧತೆ ನಡೆ–ಯುತ್ತಿದೆ. ಆದರೆ, ಕರ್ನಾಟಕದ ಮಟ್ಟಿಗೆ ಬದಲಾವಣೆಗಳು ಇರುವುದಿಲ್ಲ. ಆ ಮೂಲಕ 2028ರ ವಿಧಾನಸಭಾ ಚುನಾವಣೆವರೆಗೂ ವಿಜಯೇಂದ್ರ ಅವರೇ ರಾಜ್ಯ ಬಿಜೆಪಿಯ ಸಾರಥಿ ಎನ್ನಲಾಗುತ್ತಿದೆ. ಕರ್ನಾಟಕದಲ್ಲಿ ಒಂದೆಡೆ ಸಿಎಂ ಬದಲಾವಣೆ ಚರ್ಚೆ ಕಾಂಗ್ರೆಸ್ನಲ್ಲಾದರೆ, ಇನ್ನು ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ಬದಲಾವಣೆ ಬಗ್ಗೆ ಒಳಗೊಳಗೆ ಗುದ್ದಾಟ ನಡೆಯುತ್ತಲೇ ಇದೆ. ವಿಜಯೇಂದ್ರ ಅವರು ಹಿರಿಯ ನಾಯಕರನ್ನು ಗಣನೆಗೆ ತೆಗೆದುಕೊಳ್ಳೋದಿಲ್ಲ ಎಂದು ಯತ್ನಾಳ್ ಅವರು ಆರೋಪಿಸುತ್ತಲೇ ಇದ್ದರು. ಈ ಮಧ್ಯೆ ಅಧ್ಯಕ್ಷ ಸ್ಥಾನ ಬದಲಾವಣೆ ಬಗ್ಗೆ ಭರವಸೆ ಹೊತ್ತಿದ್ದ ರೆಬಲ್ ನಾಯಕರ ತಂಡಕ್ಕೆ ಸದ್ಯ ಬಿಜೆಪಿ ಹೈಕಮಾಂಡ್ ತಣ್ಣೀರೆರಚಿದೆ. ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಮಾತ್ರ ನಾಯಕತ್ವದ ಬದಲಾವಣೆ ಮಾಡದಿರಲು ಹೈಕಮಾಂಡ್ ನಿರ್ಧರಿಸಿರುವುದು ಮುಂದಿನ ದಿನಗಳಲ್ಲಿ ಮತ್ತಷ್ಟು ಗುದ್ದಾಟಕ್ಕೆ ಕಾರಣವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

## ಅಯ್ಯಪ್ಪ ಭಕ್ತರಿಗೆ ಅಗತ್ಯ ರಕ್ಷಣೆ

**ಬೆಂಗಳೂರು:** ಕರ್ನಾಟಕದಿಂದ ಕೇರಳದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ತೆರಳುವ ಭಕ್ತರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಕೇರಳದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಜ್ಯಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಸಾರಿಗೆ ಇಲಾಖೆ ನಿರ್ದೇಶಕ ರಾಜೇಂದ್ರ ಕಟಾ–ರಿಯ ಸೇರಿದಂತೆ ಮತ್ತಿತರ ಅಧಿಕಾರಿಗಳಿಗೆ ಕೇರಳ ಅಧಿಕಾರಿಗಳ ಜೊತೆಯೂ ಸಂಪರ್ಕ ಸಾಧಿಸುವಂತೆ ಸೂಚನೆ ಕೊಟ್ಟಿದ್ದಾರೆ.



ನ್ಯಾಯಾಲಯದ ನಿರ್ದೇಶನ ಪಾಲನೆ ಮಾಡುವುದರ ಜೊತೆಗೆ ಆಗಮಿಸುವ ಭಕ್ತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿರುವ ಸಚಿವ ರಾಮಲಿಂಗಾ ರೆಡ್ಡಿ ಅವರು, ಅಯ್ಯಪ್ಪ ಸ್ವಾಮಿ ಭಕ್ತರು ಅನಗತ್ಯವಾಗಿ ಗೊಂದಲಗಳಿಗೆ ಕಿವಿಗೊಡಬಾರದು. ಅಲ್ಲಿನ ಸರ್ಕಾರ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುತ್ತಿದೆ ಆದರೂ ಸರ್ಕಾರ ಅಯ್ಯಪ್ಪ ಭಕ್ತರ ರಕ್ಷಣೆಗೆ ಸಿದ್ಧವಿದೆ ಎಂದು ತಿಳಿಸಿದ್ದಾರೆ.

# ಕೇಂದ್ರಕ್ಕೆ ರಾಜ್ಯ ಕಾಂಗ್ರೆಸ್ ಸಡ್ಡು

### ಮನರೇಗಾ ಬದಲಿಗೆ ಜಿ ರಾಮ್‌ಜಿ ಜಾರಿಗೆ ತಂದ ಬಿಜೆಪಿ | ಹೆಸರು ಬದಲಾವಣೆಗೆ ವ್ಯಾಪಕ ವಿರೋಧ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮನರೇಗಾ ರದ್ದುಗೊಳಿಸಿ ಜಿ ರಾಮ್‌ಜಿ ಜಾರಿಗೆ ತಂದಿರುವ ಕೇಂದ್ರ ಸರ್ಕಾರದ ನಡೆಗೆ ರಾಜ್ಯ ಸರ್ಕಾರ ಸಡ್ಡುಹೊಡೆಯಲು ನಿರ್ಧರಿಸಿದೆ. ಈ ಬಗ್ಗೆ ಚರ್ಚಿಸಲು ಉಭಯ ಸದನಗಳ ಜಂಟಿ ಅಧಿವೇಶನ ಕರೆಯಲು ತೀರ್ಮಾನಿಸಿದೆ. ಈ ಅಧಿವೇಶನದಲ್ಲಿ ಮನರೇಗಾ ಹಾಗೂ ಜಿ ರಾಮ್ ಜಿ ಕುರಿತಾಗಿ ವಿಶೇಷ ಚರ್ಚೆ ನಡೆಯಲಿದೆ.

**ಗೆಹ್ಲೋಟ್ ಭಾಷಣ:** ಜಂಟಿ ಅಧಿವೇಶನ ಜನವರಿ 22ರಿಂದ ಆರಂಭಗೊಳ್ಳಲಿದೆ. ಉಭಯ ಸದನವನ್ನು ಉದ್ದೇಶಿಸಿ ಜನವರಿ 22ರಂದು ರಾಜ್ಯಪಾಲ ಥಾವರ್ಚಂದ್ ಗೆಹ್ಲೋಟ್ ಭಾಷಣ ಮಾಡಲಿದ್ದಾರೆ

**ಸಿಎಂ ಮಹತ್ವದ ನಿರ್ಣಯ:** ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್ಕೆ ಪಾಟೀಲ್ ಈ ವಿವರ ನೀಡಿದರು. ಸಚಿವ ಸಂಪುಟ ಸಭೆಯಲ್ಲಿ ಈ ಕುರಿತಾಗಿ ಮೂರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದಿದ್ದಾರೆ.

### ಜಿರಾಮ್‌ಜಿ ವಿರುದ್ಧ ನಿರ್ಣಯ?

- ವಿಶೇಷ ಅಧಿವೇಶನ. ಬೆಳಗ್ಗೆ 11 ಗಂಟೆಗೆ ಅಧಿವೇಶನ ಆರಂಭ. ಭಾಷಣ ಮಾಡುವಂತೆ ರಾಜ್ಯಪಾಲರನ್ನು ಕೋರಲು ನಿರ್ಣಯ. ರಾಜ್ಯಪಾಲರು ಮಾಡಲಿರುವ ಭಾಷಣ ಅನುಮೋದಿಸಲು ಸಿಎಂಗೆ ಅಧಿಕಾರ ನೀಡಿದ ಸಂಪುಟ.
- ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜಿ ರಾಮ್ ಜಿ ಯೋಜನೆಯಿಂದ ಸಮಾಜದ ಮೇಲೆ ಬೀರಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳ ಬಗ್ಗೆ ವಿಧಾನಮಂಡಲ ಜಂಟಿ ಅಧಿವೇಶನದಲ್ಲಿ ಚರ್ಚೆಗೆ ನಿರ್ಧಾರ.
- ಜಿರಾಮ್ ಜಿ ಜಾರಿಯಿಂದ ಪಂಚಾಯತಿಗಳ ಅಧಿಕಾರ ಕಸಿದುಕೊಳ್ಳಲಾಗಿದೆ. ಯಾವ ಪಂಚಾಯತ್ಗಳಿಗೆ ಯೋಜನೆ ಅವಕಾಶ ಸಿಗಬೇಕು ಎಂಬುವುದನ್ನು ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ. ಸಾರ್ವಜನಿಕ ಆಸ್ತಿ ನಿರ್ಮಾಣಕ್ಕೆ ಇದರಿಂದ ಹಿನ್ನಡೆ ಆಗುತ್ತದೆ.

### ಅಧಿವೇಶ 22ರಿಂದ 31ವರೆಗೆ



ವಿಧಾನಮಂಡಲದ ಜಂಟಿ ಅಧಿವೇಶನ ಜ. 22 ರಿಂದ 31 ರವರೆಗೆ ನಡೆಸಲು ರಾಜ್ಯಸರ್ಕಾರ ತೀರ್ಮಾನಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ತುರ್ತು ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದು ಕೊಳ್ಳಲಾಯಿತು. ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಸಚಿವ ಎಚ್.ಕೆ.ಪಾಟೀಲ್ ಅಧಿವೇಶನವನ್ನು ನಡೆಸುವ ಬಗ್ಗೆ ವಿವರ ನೀಡಿದ್ದಾರೆ.







### ಹೆಸರಿನ ಬಗ್ಗೆ ವ್ಯಾಪಕ ಚರ್ಚೆ

ಕೇಂದ್ರ ಸರ್ಕಾರ ಮಹಾತ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾವಣೆ ಮಾಡಿರುವುದರ ವಿರುದ್ಧ ವ್ಯಾಪಕ ಚರ್ಚೆಗಳಾಗುತ್ತಿವೆ. ಕೇಂದ್ರಸರ್ಕಾರ ಮಹಾತ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೆಸರನ್ನು ವಿಕಸಿತ ಭಾರತ ಗ್ರಾಮೀಣ ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ ಎಂದು ಬದಲಾವಣೆ ಮಾಡಿದೆ.

### ಮನರೇಗಾ ಕಾಯ್ದೆಯೇ ಬೇಕು

ಕೇಂದ್ರ ಸರ್ಕಾರ ಮನರೇಗಾ ಯೋಜನೆ ಹೆಸರು ಬದಲಾವಣೆ ಮಾಡಿದ್ದು, ಈ ಬಗ್ಗೆ ವಿಶೇಷ ಅಧಿವೇಶನದಲ್ಲಿ ಚರ್ಚಿಸಲು ನಿರ್ಧರಿಸಲಾಗಿದೆ. ವಿಬಿಜಿ ರಾಮ್ಜಿ ಕಾಯ್ದೆಯನ್ನು ಹಿಂಪಡೆದು ಮನರೇಗಾ ಕಾಯ್ದೆಯನ್ನೇ ಮರು ಸ್ಥಾಪಿಸುವಂತೆ ಕೇಂದ್ರವನ್ನು ಒತ್ತಾಯಿಸಿ ನಿರ್ಣಯ ಅಂಗೀಕರಿಸುವ ಸಾಧ್ಯತೆ ಇದೆ. ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಬಿಜಿ ರಾಮ್‌ಜಿ ವಿರೋಧಿಸಿ ನಿರ್ಣಯ ಕೈಗೊಳ್ಳಲಾಗಿತ್ತು.

### ಇದು ಗೋಡ್ಸೆ ಯೋಜನೆ: ಕಾಂಗ್ರೆಸ್

ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಮನರೇಗಾ ಯೋಜನೆ ರದ್ದುಗೊಳಿಸಿ ಜಿ ರಾಮ್ ಜಿ ಯೋಜನೆ ಜಾರಿಗೆ ತರಲಾಗಿದೆ. ಇದಕ್ಕೆ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಇದು ನಾಥುರಾಮ್ ಗೋಡ್ಸೆ ಯೋಜನೆ ಎಂದು ವಾಗ್ದಾಳಿ ನಡೆಸಿದೆ. ಹೀಗಾಗಿ ಇದರ ವಿರುದ್ಧ ದೊಡ್ಡ ಮಟ್ಟದಲ್ಲಿ ಜನಾಭಿಪ್ರಾಯ ರೂಪಿಸಲು ಕಾಂಗ್ರೆಸ್ ಮುಂದಾಗಿದೆ.

## ಪ್ರಯತ್ನ ಫಲಿಸದಿದ್ರೂ ಪ್ರಾರ್ಥನೆ ವಿಫಲವಾಗದು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿಗೆ ನಡೆಯುತ್ತಿರುವ ಹೋರಾಟದ ಊಹಾಪೋಹಗಳಿಗೆ ಮತ್ತಷ್ಟು ಪುಷ್ಟಿ ನೀಡುವ ರೀತಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ಬುಧವಾರ ಸೋಷಿಯಲ್ ಮೀಡಿಯಾದಲ್ಲಿ ಮಾರ್ಮಿಕ ಪೋಸ್ಟ್ ಹಾಕಿದ್ದಾರೆ. ತಮ್ಮ ಫೋಟೋದೊಂದಿಗೆ ಕನ್ನಡದಲ್ಲಿ ಪೋಸ್ಟ್ ಮಾಡಿರುವ ಶಿವಕುಮಾರ್, "ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತನ್ನು ಡಿ.ಕೆ ಶಿವಕುಮಾರ್ ಈ ಹಿಂದೆ ಕೂಡ ಸಾಕಷ್ಟು ಬಾರಿ ಹೇಳಿದ್ದರು. ತಮಿಳು ನಾಡಿಗೆ ಕಾರ್ಯಕ್ರಮಕ್ಕೆ ಹೋಗುವ ಮಧ್ಯೆ ಮೈಸೂರಿಗೆ ಸಂಕ್ಷಿಪ್ತ ಭೇಟಿ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯನ್ನು ನಿನ್ನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಭೇಟಿ ಮಾಡಿ ಪ್ರತ್ಯೇಕವಾಗಿ ಕೆಲ ಕ್ಷಣ ಮಾತುಕತೆ ನಡೆಸಿದ್ದರು.

## ಬಳ್ಳಾರಿಯಲ್ಲಿ ಬೃಹತ್ ರ್‍ಯಾಲಿ 17ಕ್ಕೆ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದನ್ನು ವಿರೋಧಿಸಿ ಜನವರಿ 17 ರಂದು ಬಳ್ಳಾರಿಯಲ್ಲಿ ಬೃಹತ್ ರ್‍ಯಾಲಿಯನ್ನು ಬಿಜೆಪಿ ಆಯೋಜಿಸಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಈ ತಿಂಗಳ ಆರಂಭದಲ್ಲಿ ಬಳ್ಳಾರಿಯಲ್ಲಿ ಶಾಸಕರಾದ ಭರತ್ ರೆಡ್ಡಿ ಮತ್ತು ಜಿ. ಜನಾರ್ದನ ರೆಡ್ಡಿ ಅವರ ಗುಂಪುಗಳ ನಡುವಿನ ರಾಜಕೀಯ ಘರ್ಷಣೆಯಲ್ಲಿ ರಾಜಶೇಖರ ಎಂಬ ಕಾರ್ಯಕರ್ತರು ಮೃತಪಟ್ಟಿದ್ದರು.

ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದರಿಂದ ಬಳ್ಳಾರಿಯಲ್ಲಿ ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಕಾಂಗ್ರೆಸ್ ಶಾಸಕರೊಬ್ಬರು ತಮ್ಮ ಗೂಂಡಾಗಿರಿಯಿಂದ ಭಯದ ವಾತಾವರಣವನ್ನು ಸೃಷ್ಟಿಸಿದ್ದಾರೆ ಎಂದು ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಯಲ್ಲಾಪುರದಲ್ಲಿ ದಲಿತ ಮಹಿಳೆಯ ಹತ್ಯೆ ಮತ್ತು ಸುಳ್ಯದ ಬಿಜೆಪಿ ಶಾಸಕಿ ಭಾಗೀರಥಿ ಮುರುಳ್ಯ ಅವರ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಪೋಸ್ಟ್ ನ್ನು ಸಹ ಅವರು ಉಲ್ಲೇಖಿಸಿದ್ದಾರೆ.

## ಶ್ರೀಗಳಿಂದ ಶಿವದೀಕ್ಷೆ ಜನ ಜಾಗೃತಿ



• ಮಲ್ಲಮ್ಮ ನುಡಿ ವಾರ್ತೆ ಕೆಂಗೇರಿ

ಶ್ರೀ ಕ್ಷೇತ್ರ ಏಕದಳ ಬಿಲ್ವ ಬಂಡೆ ಮಠದ ಆವರಣದಲ್ಲಿ ಆಯೋಜಿಸಿದ್ದ ಇಷ್ಟಲಿಂಗ ಪೂಜೆ ಮತ್ತು ಶಿವ ದೀಕ್ಷೆ ಹಾಗೂ ಜನ ಜಾಗೃತಿ ಧರ್ಮ ಸಮಾರಂಭವನ್ನು ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರ ಸೋಮೇಶ್ವರ ರಾಜ ದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಯವರು ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದ್ದಾರೆ. ಶ್ರೀ ಕ್ಷೇತ್ರ ಏಕದಳ ಬಂಡೆಮಠ ಮಠ ಕೆಂಗೇರಿ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯಶವಂತಪುರ ವಿಧಾನಸಭಾ ಕ್ಷೇತ್ರ ಘಟಕ ಇವರ ಸಹಯೋಗದಲ್ಲಿ ಸಮಾರಂಭ ನಡೆಯಿತು. ಶ್ರೀ ಏಕದಳಬಂಡೆ ಮಠದ ಪೀಠಾಧಿಪತಿ ಸಚ್ಚಿದಾನಂದ ಮಹಾಸ್ವಾಮಿ. ಕನಕಪುರ ಚಿಕ್ಕ ಕಲ್ಲುಬಾಳು ಮಠದ ಶಿವಾನಂದ ಶಿವಾಚಾರ್ಯ ಸ್ವಾಮಿ, ಶಾಸಕ ಎಸ್.ಟಿ. ಸೋಮಶೇಖರ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ. ಡಿ. ಲಕ್ಷ್ಮೀನಾರಾಯಣ್, ಕೆ.ಆರ್.ಡಿ. ಐಲ್. ಮಾಜಿ ಅಧ್ಯಕ್ಷ ಎಂ ರುದ್ರೇಶ್, ಬೆಂಗಳೂರು ನಗರ ಜಿಪಂ. ಮಾಜಿ ಅಧ್ಯಕ್ಷ ಮರಿಸ್ವಾಮಿ, ಮತ್ತಿತರರು ಉಪಸ್ಥಿತರಿದ್ದರು.

## ಗೂಂಡಾ ಕಾಯ್ದೆಯಡಿ ಜಪ್ತಿಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಳ್ಳಾರಿ ವಿಷಯ ರಾಜ್ಯದಲ್ಲಿ ದೊಡ್ಡ ಸದ್ದು ಮಾಡುವ ಸಂದರ್ಭದಲ್ಲೇ ಶಿಡ್ಲಘಟ್ಟದಲ್ಲೂ ಬ್ಯಾನರ್ ಹಾಕಿದ್ದಾರೆ. ಬ್ಯಾನರ್ ಹಾಕಲು ಅನುಮತಿ ಪಡೆದಿದ್ದೀರಾ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಪ್ರಶ್ನಿಸಿದ್ದಾರೆ. ಪತ್ರವನ್ನೂ ನೀಡಿಲ್ಲ ಹಣ ಕಟ್ಟಿಲ್ಲ; ಅನುಮತಿ ಪಡೆದಿಲ್ಲ ಎಂದು ಕಮೀಷನರ್ ಹೇಳಿದ್ದಾಗಿ ಗಮನ ಸೆಳೆದರು. ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು. ಕಾಂಗ್ರೆಸ್ ನಾಯಕರ ಅಟ್ಟಹಾಸ ರಾಜ್ಯದಲ್ಲಿ ಹೆಚ್ಚಾಗಿದೆ. ದರ್ಪ ಹೆಚ್ಚಾಗಿದೆ. ಮುಖ್ಯಮಂತ್ರಿಗಳು ರಾಜೀವ್ ಗೌಡರನ್ನು ಬಂಧಿಸಬೇಕು. ಕಾನೂನು ಕೈಗೆತ್ತಿಕೊಳ್ಳುವ ಮಾತನಾಡಿದ ಇವರನ್ನು ಗೂಂಡಾ ಕಾಯ್ದೆ ಅಡಿಯಲ್ಲಿ ತಕ್ಷಣ ಬಂಧಿಸಬೇಕು. ಇಲ್ಲವಾದರೆ, ಇದನ್ನು ನಾವು ರಾಜ್ಯಮಟ್ಟದ ವರೆಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಎಚ್ಚರಿಸಿದ್ದಾರೆ.

### ಕ್ಷಮೆಯಾಚಿಸಿದ ರಾಜೀವ್ ಗೌಡ

**ಬ್ಯಾನರ್ ತೆರವುಗೊಳಿಸಿದ್ದಕ್ಕೆ ಪೌರಾಯುಕ್ತೆಗೆ ಅಶ್ಲೀಲವಾಗಿ ನಿಂದನೆ ಮಾಡಿ, ಬೆದರಿಕೆ ಹಾಕಿರುವ ಆಡಿಯೋ ವೈರಲ್ ಕುರಿತಂತೆ ಮಾತನಾಡಿರುವ ರಾಜೀವ್ ಗೌಡ, ನಾನು ಅಧಿಕಾರಿಯ ಜೊತೆ ಕೆಟ್ಟದಾಗಿ ಮಾತನಾಡಿಲ್ಲ. ಅಧಿಕಾರಿಗೆ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ. ಉದ್ದೇಶ ಪೂರಕವಾಗಿ ನಾನು ಮಾತನಾಡಿಲ್ಲ. ಆಡಿಯೋದಲ್ಲಿ ಮಾತನಾಡಿರುವುದು ನಾನೇ. ನನ್ನದು ತಪ್ಪಾಗಿದ್ದರೆ ಏನೇ ಕ್ರಮ ತೆಗೆದುಕೊಂಡರು ಎದುರಿಸುತ್ತೇನೆ ಎಂದು ಸಮಜಾಯಿಷಿ ನೀಡಿದ್ದಾರೆ.**

## ಸಿದ್ಧರಾಮೇಶ್ವರರ ತತ್ವ ದಾರಿದೀಪ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಸೊನ್ನಲಗಿಯ ಕರ್ಮಯೋಗಿ ಸಿದ್ಧರಾಮೇಶ್ವರರ ವಚನಗಳು ಇಂದಿನ ಸಮಾಜಕ್ಕೆ ದಾರಿದಿಪವಾಗಿದ್ದು, ಅವರ ತತ್ವ ಸಿದ್ಧಾಂತಗಳು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮರಲಿಂಗ ಹೊನಗುಂಟಿಕರ್ ಅಭಿಪ್ರಾಯಟ್ಟಿದ್ದಾರೆ. ನಿಗಮದ ಜಿಲ್ಲಾ ಕಚೇರಿಯಲ್ಲಿ ಏರ್ಪಡಿಸಿದ್ದ ಕರ್ಮಯೋಗಿ ಸಿದ್ಧರಾಮೇಶ್ವರರ ಅವರ ಜಯಂತಿ ನಿಮಿತ್ಯ ಪೂಜೆ ಸಲ್ಲಿಸಿ ಅವರು ಮಾತನಾಡಿ, ಸಿದ್ಧರಾಮ ಕಲ್ಯಾಣಕ್ಕೆ ಹೋಗಿ ಚನ್ನಬಸವಣ್ಣನವರಿಂದ ದೀಕ್ಷೆ ತೆಗೆದುಕೊಂಡು ಮರಳಿ ತನ್ನ ಊರಾದ ಸೊನ್ನಲಿಗೆಗೆ ಬಂದಾಗ ಸಿದ್ಧರಾಮನ ತಾಯಿ ಸುಗ್ಗವ್ವೆ ಹಿರಿಹಿರಿ ಹಿಗ್ಗುತ್ತಾಳೆ. ಕಳೆದು ಹೋಗಿದ್ಧ ಮಗ ಜೀವಸಹಿತ ಊರಿಗೆ ಬಂದು ದೇಗುಲವೊಂದರಲ್ಲಿ ವಾಸ್ತವ್ಯ ಹೂಡಿರುವನೆಂಬುದನ್ನು ತಿಳಿದಾಗ ಆಕೆ ಮಗನನ್ನು ಕಾಣಲು ಬರುತ್ತಾಳೆ. ಹೀಗೆ ಸಿದ್ದರಾಮೇಶ್ವರರ ಜೀವನ ಪ್ರಾರಂಭವಾಗುತ್ತದೆ. ಬದುಕಿಗೆ ಸಂಬಂಧಿಸಿದ ಅನೇಕ ವಚನಗಳನ್ನು ಸಿದ್ಧರಾಮೇಶ್ವರರು ರಚಿಸಿದ್ದಾರೆ ಎಂದರು. ಶರಣರಲ್ಲಿ ಕರ್ಮಯೋಗಿ ಎಂದೆನಿಸಿಕೊಂಡ ಶರಣ ಇವರಾಗಿದ್ದು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು ಎಂದು ವಿವರಿಸಿದ್ದಾರೆ. ತಾಲೂಕ ಅಭಿವೃದ್ಧಿ ಅಧಿಕಾರಿ ಸತೀಶ ಕುಮಾರ, ಲಗಮಣ್ಣ ಸಿಬ್ಬಂದಿಗಳಾದ ಸಂಜೀವಕುಮಾರ, ಮಹೇಶ ಗುತ್ತೇದಾರ, ಸುನೀಲ ಸೇರಿದಂತೆ ಇತರರಿದ್ದರು.

## ನಮ್ಮ ಪಕ್ಷದ ನಾಯಾಕರ ಜೊತೆ ನಡೆಸಿದ ಚರ್ಚೆಗಳ ಬಗ್ಗೆ ಬಹಿರಂಗ ಒಡಿಸುವುದಿಲ್ಲ: ಡಿಸಿಎಂ ಡಿಕೆ ಶಿವ ಕುಮಾರ್

# ಸಮಾಜಸೇವೆ ಮಾಡಿದ ಮಹಾನ್ ಶರಣರು:ಮಾರುತಿ ಮಾಸ್ಟರ್



• **ಮಲ್ಲಮ್ಮ ನುಡಿ ವಾರ್ತೆ**
**ಬೀದರ್:**

12ನೇ ಶತಮಾನದ ಶ್ರೇಷ್ಠ ವಚನಕಾರರಾದ ಶಿವಯೋಗಿ ಸಿದ್ಧಾರಾಮೇಶ್ವರಶರಣರುಕೇವಲ ಕಾಯಕಯೋಗಿಯಾಗಿಯಷ್ಟೇ ಅಲ್ಲ, ಕರ್ಮಯೋಗಿಯಾಗಿ ಸಮಾಜಸೇವೆಯಲ್ಲಿತೊಡಗಿಸಿಕೊಂಡ ಮಹಾನ್ ಶರಣರಾಗಿದ್ದರು ಎಂದು ಕಾಂಗ್ರೇಸ್ ಮುಖಂಡ ಮಾರುತಿ ಮಾಸ್ಟರ್ ಹೇಳಿದರು.

ಇಂದು ಬೀದರ್ ತಾಲೂಕಿನ ಸಿರ್ಸಿ(ಎ) ಗ್ರಾಮದಲ್ಲಿ ಭೋವಿ (ವಡ್ಡರ) ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಕಾಯಕಯೋಗಿ ಶರಣ ಶ್ರೀ ಶಿವಯೋಗಿ ಸಿದ್ಧಾರಾಮೇಶ್ವರರಜಯಂತೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಶರಣರು ಕುರಿಕಾಯುವ ಕಾಯಕವನ್ನು ಕೈಗೊಳ್ಳುತ್ತಾ, ಸಾರ್ವಜನಿಕರ ಅನುಕೂಲಕ್ಕಾಗಿ ನೀರಿನಕೊರತೆಯಿದ್ದ ಪ್ರದೇಶಗಳಲ್ಲಿ ಕೆರೆ–ಕಟ್ಟೆಗಳನ್ನು ನಿರ್ಮಿಸಿದರು. ಜೊತೆಗೆ ಅನೇಕ ಲಿಂಗಗಳನ್ನು ಕೆತ್ತಿಸಿ, ಸೊಲಾಪುರದ ಸೊನ್ನಲಿಗೆ ಪ್ರದೇಶವನ್ನು ಐತಿಹಾಸಿಕ ಕ್ಷೇತ್ರವನ್ನಾಗಿ ರೂಪಿಸಿದರು ಎಂದು ತಿಳಿಸಿದರು.

12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳ ಪ್ರಭಾವಕ್ಕೆ ಒಳಗಾಗಿ, ಕಲ್ಯಾಣದಲ್ಲಿ ಚನ್ನಬಸವಣ್ಣನವರಿಂದ ಅಷ್ಟಲಿಂಗ ದೀಕ್ಷೆ ಪಡೆದ ಸಿದ್ಧಾರಾಮೇಶ್ವರರು "ಕಾಯಕವೇ ಕೈಲಾಸ" ಎಂಬ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು ಕಾಯಕ–ಕರ್ಮಯೋಗಿಯಾಗಿ ಹೆಸರುವಾಸಿಯಾದರು ಎಂದು ಮಾರುತಿ ಮಾಸ್ಟರ್ ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಗ್ರಾಮದ ಮುಖಂಡರಾದ ಬಾಬುರಾವ ಹೈಬತ್ತಿ ಅವರು ಶಿವಯೋಗಿ ಸಿದ್ಧಾರಾಮೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಯುವ ಮುಖಂಡರಾದ ವಾಸುದೇವ ಜಾಣ್, ಅಂಬ್ರುತ ಭೋವಿ, ಶಿಕ್ಷಕರಾದ ಭೀಮಸೇನ, ರಾಮಕೃಷ್ಣ ಚಿಲಂಪಳ್ಳಿ, ಅಶೋಕ ಹೈಬತ್ತಿ, ಸಿಜಾವುದ್ದಿನ್ ಹೊಸಹಳ್ಳಿ, ಈಶ್ವರ ಮಾಸ್ಟರ್, ಶಿವಕುಮಾರ ಭೋವಿ, ಮುಕೇಶ್ ಭೋವಿ, ಬಕ್ಕಪ್ಪ ಈರಕಾರ ಹಾಗೂ ಕಿರಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜ.18ರಂದು ಅಂತರ್‌ರಾಜ್ಯ ಚೆಸ್ ಪಂದ್ಯಾವಳಿ: ನಿತೀನ ಕರ್ಪೂರ್

• **ಮಲ್ಲಮ್ಮ ನುಡಿ ವಾರ್ತೆ**
**ಬೀದರ್ :**




ಜನೆವರಿ 18ರಂದು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ಬೀದರ್ ಚೆಸ್ ಅಸೋಶಿಯಶನ್ ಹಾಗೂ ರೋಟ್ರಿ ಕ್ಲಬ್ ಆಫ್ ಬೀದರ್ ನ್ಯುಸೆಂಚ್ಯುರಿ ಇವರ ಸಹಯೋಗದೊಂದಿಗೆ ನಗರದ ಶಿವನಗರದಲ್ಲಿರುವ ರಾಮ ಸಮರ್ಥ ಫಂಕ್ಷನ್ ಹಾಲ್‌ನಲ್ಲಿ ಅಂತರ್ ರಾಜ್ಯ ವಿದ್ಯಾರ್ಥಿಗಳಿಗೆ ಹಾಗೂ 80 ವರ್ಷದೊಳಗಿರುವ ಹಿರಿಯರಿಗೂ ಮುಕ್ತ ಚೆಸ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಚೆಸ್ ಅಸೋಶಿಯಶನ್ ಅಧ್ಯಕ್ಷರಾದ ನಿತೀನ್ ಕರ್ಪೂರ್ ತಿಳಿಸಿದರು.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8.30 ಗಂಟೆಗೆ ಸ್ಪರ್ಧಾಳುಗಳು ವರದಿ ಮಾಡಿಕೊಳ್ಳಬೇಕು. ಬೆಳಿಗ್ಗೆ 10 ಗಂಟೆಯಿಂದ ಪಂದ್ಯಾಟ ಆರಂಭವಾಗುವುದು. ಸ್ಥಳಿಯ ವಿದ್ಯಾರ್ಥಿಗಳಿಗೆ 300 ರೂಪಾಯಿ ಹಾಗೂ ಉಳಿದವರಿಗೆ ಮುಕ್ತ ಪಂದ್ಯಾವಳಿ ಇರುವ ಕಾರಣ ರು.500 ನಿಗದಿಪಡಿಸಲಾಗಿದೆ ಎಂದರು.

ಮುಕ್ತ ಪಂದ್ಯಾವಳಿಯಲ್ಲಿ ಮೊದಲನೆ ಬಹುಮಾನ 4 ಸಾವಿರ, ದ್ವಿತೀಯ ಬಹುಮಾನ 3 ಸಾವಿರ, ತೃತೀಯ ಬಹುಮಾನ 2 ಸಾವಿರ, 60 ವರ್ಷ ಮೇಲ್ಪಟ್ಟ ಸ್ಪರ್ಧಾಳುಗಳಿಗೆ ಮೊದಲನೇ ಬಹುಮಾನ 3 ಸಾವಿರ, ದ್ವಿತಿಯ 2 ಸಾವಿರ ಹಾಗೂ 1 ಸಾವಿರ ತೃತೀಯ ಬಹುಮಾನ ಹೀಗೆ ವಿವಿಧ ಏಳು ಕೆಟೆಗರಿಗಳಿಗೆ ಈ ಸ್ಪರ್ಧೆ ಹಮ್ಮಿಕೊಳ್ಳಲಾಗುವುದು. ಎಂದರು.

ಕಳೆದ ವರ್ಷ ಜನೆವರಿ 12ರಂದು ಸ್ವಾಮಿ ವಿವೇಕಾನಂದರ ಜಯಂತಿ ದಿನದಂದೆ ಬೀದರ್ ಜನರ ಕೋರಿಕೆ ಮೇರೆಗೆ ಚೆಸ್ ಕೋಚಿಂಗ್ ಸೆಂಟರ್ ತೆರೆಯಲಾಗಿದೆ. ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಪ್ರತಿ ಶನಿವಾರ ಸಾಯಂಕಾಲ 4 ಗಂಟೆಯಿಂದ 6 ಗಂಟೆ ವರೆಗೆ ಹಾಗೂ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆ ವರೆಗೆ ನಡೆಸಲಾಗುತ್ತದೆ. ಬೇಸಿಗೆ ರಜಾದಿನಗಳಲ್ಲಿ ವಾರಪೂರ್ತಿ ಕೋಚಿಂಗ್ ತರಬೇತಿ ನಡೆಸಲಾಗುವುದು ಎಂದವರು ಹೇಳಿದರು.

ಈ ವರ್ಷದ ಪಂದ್ಯಾವಳಿಯ ಅಧ್ಯಕ್ಷರಾದ ಡಾ.ಚಂದ್ರಕಾಂತ ಕುಲಕರ್ಣಿ ಮಾತನಾಡಿ, ಈಗಾಗಲೇ 100 ಜನ ಸ್ಪರ್ಧಾಳುಗಳ ನೊಂದಣಿಯಾಗಿದೆ. ಈ ತಿಂಗಳ 16ರಂದು ನೊಂದಣಿಯ ಕೊನೆ ದಿನವಾಗಿದೆ. ಕೇವಲ ಬೀದರ್ ಅಷ್ಟೆ ಅಲ್ಲ ಬೇರೆ ಜಿಲ್ಲೆಗಳು ಹಾಗೂ ನೆರೆ ಹೊರೆ ರಾಜ್ಯಗಳ ಸ್ಪರ್ಧಾಳುಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವರು ಎಂದರು.

ರೋಟ್ರಿ ಕ್ಲಬ್ ಆಫ್ ಬೀದರ್ ನ್ಯು ಸೆಂಚ್ಯುರಿ ಅಧ್ಯಕ್ಷ ನಾಗೇಶ ಪಾಟೀಲ ಮಾತನಾಡಿ, ಚೆಸ್ ಆಡುವುದರಿಂದ ವಿದ್ಯಾರ್ಥಿಗಳ ಬುದ್ಧಿಮತ್ತೆ ಹೆಚ್ಚಾಗುತ್ತದೆ, ಏಕಾಗ್ರತೆ ಜಾಗೃತವಾಗುತ್ತದೆ,

ಜೀವನ ಕೌಶಲ್ಯ ಸುಧಾರಿಸುತ್ತದೆ, ಸ್ಪರ್ಧಾ ಮನೋಭಾವ ಹೆಚ್ಚಳವಾಗಿಸಲು ಇದು ಸಹಾಯ ಮಾಡುತ್ತದೆ. ಇದು ಮುಕ್ತ ಪಂದ್ಯಾವಳಿ ಇರುವ ಕಾರಣ ಗ್ರಾಮೀಣ ಪ್ರತಿಭೆಗಳು ಇಂಥದರಲ್ಲಿ ಭಾಗವಹಿಸಲು ಪ್ರೋತ್ಸಾಹ ದೊರೆತಂತಾಗುತ್ತದೆ ಎಂದರು.

ಡಾ.ರಘು ಕೃಷ್ಣಮೂರ್ತಿ ಮಾತನಾಡಿ, ಚದುರಂಗದಾಟವು ನಮ್ಮ ಎಡ ಹಾಗೂ ಬಲ ಎರಡು ಮೆದುಳುಗಳ ಮೇಲೆ ಉತ್ತಮ ಪರಿಣಾಮ ಬಿರುತ್ತದೆ. ಮೊಬೈಲ್‌ಗಳಿಗೆ ಮಾರು ಹೋಗಿ ವಿಡಿಯೊ ಗೇಮ್‌ನಲ್ಲಿ ಕಾಲಹರಣ ಮಾಡುವುದಕ್ಕಿಂತ ಇಂಥ ಪಂದ್ಯಾಟದಲ್ಲಿ ಭಾಗವಹಿಸುವಂತೆ ಕರೆ ಕೊಟ್ಟರು. ಡಾ.ಆರತಿ ರಘು ಮಾತನಾಡಿದರು.

ಚೆಸ್ ಅಸೋಶಿಯಶನ್ ಕಾರ್ಯದರ್ಶಿ ಸತೀಶ ಸ್ವಾಮಿ, ರೋಟ್ರಿಗಳಾದ ರಾಜಕುಮಾರ ಅಳ್ಳೆ, ವಿಕ್ರಮ ತಗಾರೆ, ರಾಹುಲ ಅಟ್ಟಲ್, ಡಾ.ಮಲ್ಲಿಕಾರ್ಜುನ್ ಚಟನಳ್ಳಿ, ಸಚ್ಚಿದಾನಂದ ಚಿದ್ರೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಪುಸ್ತಕ ಸಂತೆಯ ಸದುಪಯೋಗವಾಗಲಿ : ಡಾ.ಬಸವಲಿಂಗ ಪಟ್ಟದ್ದೇವರು




ಮಲ್ಲಮ್ಮ ನುಡಿ ವಾರ್ತೆ

ಬೀದರ ಜ 14: ವೀರಲೋಕ ಪುಸ್ತಕ ಸಂತೆಯು ಗಡಿಜಿಲ್ಲೆ ಬೀದರನಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪಸರಿಸುವ ಉದ್ದೇಶದಿಂದ ಪುಸ್ತಕ ಸಂತೆಯ 4ನೇ ಆವೃತ್ತಿಯನ್ನು ಜನವರಿ 24 ರಿಂದ 26 ರವರೆಗೆ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದು ಅತ್ಯಂತ ಸಂತಸವಾಗಿದೆ, ಈ ದಿಶೇಯಲ್ಲಿ ಆಯೋಜಕರು ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಯೋಜಿಸಲು ಶ್ರಮಿಸುತಿದ್ದಾರೆ ಜಿಲ್ಲೆಯ ಜನರು ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅನುಭವ ಮಂಟಪ ಟ್ರಸ್ಟ್ ಬಸವಕಲ್ಯಾಣದ ಅದ್ಯಕ್ಷರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಬೀದರ ನಗರದ ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯದಲ್ಲಿ ಹಮ್ಮಿಕೊಂಡ ಪುಸ್ತಕ ಸಂತೆ–ಯ ಪೂರ್ವಭಾವಿ ಸಭೆಯಲ್ಲಿ ಅವರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಬೆಂಗಳೂರಿನಲ್ಲಿ ನಡೆದ ಪುಸ್ತಕ ಸಂತೆಯು ಐತಿಹಾಸಿಕ ದಾಖಲೆಯನ್ನು ಮಾಡಿದೆ ಅದಕ್ಕು ಒಂದು ತೂಕ ಹೆಚ್ಚಾಗಿ ಬೀದರನಲ್ಲಿ ನಡೆಯಲಿರುವ ಪುಸ್ತಕ ಸಂತೆಯನ್ನು ಯಶಸ್ವಿಗೊಳಿಸುವ ಸಂಕಲ್ಪ ನಮ್ಮದಾಗಿದೆ ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಠದ ಸದ್ಭಕ್ತರು ಹಾಗೂ ಜಿಲ್ಲೆಯ ಓದುಗರು ಸಂತೆಗೆ ಕುಟುಂಬ ಸಮೇತವಾಗಿ ಬರಬೇಕು ಮತ್ತು ಕಡ್ಡಾಯವಾಗಿ ಪುಸ್ತಕಗಳನ್ನ ಖರೀದಿಸಬೇಕೆಂದರು.

ಪುಸ್ತಕ ಸಂತೆಯ ರೂವಾರಿಗಳು ವೀರಲೋಕ ಪ್ರಕಾಶನದ ಮುಖ್ಯಸ್ಥರಾದ ವೀರಕಪುತ್ರ ಶ್ರೀನಿವಾಸ ಮಾತನಾಡಿ ರಾಜಧಾನಿ ಬೆಂಗಳೂರಿನಿಂದ ನೂರಾರು ಜನ ಸಾಹಿತಿಗಳು, ಪ್ರಕಾಶಕರು, ಚಲನಚಿತ್ರ ನಟ, ನಟಿಯರು ಪುಸ್ತಕ ಸಂತೆಗೆ ಬರುತಿದ್ದಾರೆ ಇದೊಂದು ರಾಜ್ಯಮಟ್ಟದ ಸಾಹಿತಿಗಳ, ಪ್ರಕಾಶಕರ ಹಾಗೂ ಓದುಗರ ಸಂಗಮವಾಗಲಿದೆ ಎಂದರು.

ಬರಗೂರು ರಾಮಚಂದ್ರಪ್ಪ, ವಿಶ್ವೇಶ್ವರ ಭಟ್, ವಸುಧೇಂದ್ರ, ಎಸ್.ಜಿ.ಸಿದ್ಧರಾಮಯ್ಯ ಮತ್ತು ಚಲನಚಿತ್ರ ನಟ ಪ್ರೇಮ್, ಶ್ರೀನಗರ ಕಿಟ್ಟಿ, ಅಶ್ವಥ್ ನೀನಾಸಮ್ ಸೇರಿದಂತೆ ಹಲವು ಖ್ಯಾತನಾಮರು ಈ ಸಂತೆಗೆ ಸಾಕ್ಷಿಯಾಗಲಿದ್ದು ಇವರೆಲ್ಲರು ಸಂತೆಯ ಜೊತೆಗೆ ಬೀದರ ಜಿಲ್ಲೆಯ ಪ್ರವಾಸ ಮಾಡಲಿದ್ದಾರೆ ಇದರಿಂದ ಪುಸ್ತಕಕ್ಕು ಹಾಗೂ ಜಿಲ್ಲೆಯ ಪ್ರವಾಸೋದ್ಯಮಕ್ಕು ಹೊಸ ಉತ್ತೇಜನ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಹಿರಿಯ ಸಂಶೋಧಕ ಡಾ.ಸಂತೋಷ ಹಾನಗಲ ಅವರು ಮಾತನಾಡಿ ಇಂತಹ ದೊಡ್ಡ ಪುಸ್ತಕ ಸಂತೆ ಬೀದರನಲ್ಲಿ ನಡೆಯಲಿಕ್ಕೆ ಗಟ್ಟಿಯಾಗಿ ನಿಂತಿದ್ದು ಭಾಲ್ಕಿಯ ಹಿರೇಮಠ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಂಘಟಕ ಗುರುನಾಥ ರಾಜಗೀರಾ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಭಾಗದಲ್ಲಿ ಅಕ್ಷರ ಕ್ರಾಂತಿಗೆ ಮತ್ತು ಕನ್ನಡದ ಉಳಿವಿಗೆ ಹಿರೇಮಠದ ಕೊಡುಗೆ ಅಪಾರವಾಗಿದೆ ಮಠಗಳು ಇಂತಹ ಸಮಾಜಮುಖಿ ಕಾರ್ಯಗಳನ್ನು ಮಾಡಿದರೆ ಭಕ್ತರ ಹಾಗೂ ಕನ್ನಡಿಗರ ಮನಸ್ಸಲ್ಲಿ ಈ ಕಾರ್ಯ ಶಾಶ್ವತವಾಗಿ ಉಳಿಯುತ್ತದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅದ್ಯಕ್ಷರಾದ ಸುರೇಶ ಚನ್ನಶೆಟ್ಟಿ ಮಾತನಾಡಿ ಸಂತೆಯಲ್ಲಿ ಪ್ರಮುಖ ಐವತ್ತು ಪುಸ್ತಕ ಮಳಿಗೆಗಳು, ಒಂದು ಲಕ್ಷಕ್ಕೂ ಅಧಿಕ ಪುಸ್ತಕಗಳು, ಏಕಕಾಲಕ್ಕೆ ನೂರಕ್ಕು ಹೆಚ್ಚು ಜನ ಸಾಹಿತಿಗಳು ಜಿಲ್ಲೆಗೆ ಆಗಮಿಸುತ್ತಿರುವುದು ಓದುಗರಿಗೆ ದೊರೆತ ಬಹುದೊಡ್ಡ ಸೌಭಾಗ್ಯವಾಗಿದೆ, ಆದರೆ ಜಿಲ್ಲೆಯಲ್ಲಿ ಓದುಗರಿಲ್ಲ ಪುಸ್ತಕ ಮಾರಾಟವಾಗಲ್ಲ ಎಂಬ ಮಾತನ್ನ ಸುಳ್ಳಾಗಿಸಬೇಕಿದೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪುಸ್ತಕ ಖರೀದಿಸಬೇಕೆಂದರು.

ಬೀದರನಲ್ಲಿ ನಡೆಯಲಿರುವ ಪುಸ್ತಕ ಸಂತೆಯಲ್ಲಿ ಸ್ಥಳಿಯ ಲೇಖಕರ ಪುಸ್ತಕ ಬಿಡುಗಡೆ, ಪ್ರದರ್ಶನ ಹಾಗೂ ಮಾರಾಟಕ್ಕು ಕಸಾಪ ವತಿಯಿಂದ ವ್ಯವಸ್ಥೆ ಮಾಡಲಾಗಿದೆ ಹೆಚ್ಚಿನ ಮಾಹಿತಿಗಾಗಿ ಚಿಕ್ಕಪೇಟನಲ್ಲಿರುವ ಕನ್ನಡ ಭವನಕ್ಕೆ ಭೇಟಿ ನೀಡಬಹುದೆಂದು ತಿಳಿಸಿದರು. ಪುಸ್ತಕ ಸಂತೆಯ ಆಯೋಜಕ ಹಾಗೂ ಕಸಾಪ ಯುವ ಘಟಕದ ಅದ್ಯಕ್ಷ ಗುರುನಾಥ ರಾಜಗೀರಾ ಮಾತನಾಡಿ ಈ ಪುಸ್ತಕ ಸಂತೆಯು ಬೀದರ ಜಿಲ್ಲೆಯ ಇತಿಹಾಸದಲ್ಲಿ ದಾಖಲಾಗಲಿದೆ ಸಾರ್ವಜನಿಕರು, ಓದುಗರು, ವಿದ್ಯಾರ್ಥಿಗಳು ಮತ್ತು ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂತೆಯಲ್ಲಿ ಪಾಲ್ಗೊಂಡು ಪುಸ್ತಕಗಳನ್ನ ಖರೀದಿಸಬೇಕೆಂದು ಮನವಿ ಮಾಡಿದರು. ಪುಸ್ತಕ ಸಂತೆ–ಯು ಬೀದರ ನಗರದ ನೇಹರು ಕ್ರೀಡಾಂಗಣದ ಹತ್ತಿರದ ಸಾಯಿ ಸ್ಕೂಲ್ ಗ್ರೌಂಡ್ ನಲ್ಲಿ ಜನವರಿ 24, 25, 26 ಮೂರು ದಿನಗಳ ಕಾಲ ಬೆಳಿಗ್ಗೆ 10:00 ರಿಂದ ರಾತ್ರಿ 9:00 ರವರೆಗೆ ನೆರವೇರಲಿದೆ ಸಂತೆಯಲ್ಲಿ ಪುಸ್ತಕ ಮಳಿಗೆಗಳ ಜೊತೆಗೆ ವಾಣಿಜ್ಯ ಮಳಿಗೆಗಳು ಮತ್ತು ಮಕ್ಕಳ ಮನರಂಜನಾ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿರಲಿದೆ ಎಂದು ತಿಳಿಸಿದರು.

ಪೂರ್ವಭಾವಿ ಸಭೆಗು ಮುನ್ನ ಇತ್ತಿಚಿಗೆ ಅಗಲಿದ ಪತ್ರಕರ್ತ ನಾಗಶೆಟ್ಟಿ ದರ್ಮಪರೆ ಹಾಗೂ ಬೆಂಗಳೂರಿನ ಹಿರಿಯ ಸಾಹಿತಿ ಆಶಾ ರಘು ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸರಕಾರಿ ನೌಕರರ ಸಂಘದ ಜಿಲ್ಲಾದ್ಯಕ್ಷ ಸೋಮಶೇಖರ ಬಿರಾದಾರ, ಮಾಜಿ ಜಿಲ್ಲಾ ಪಂಚಾಯತ ಅದ್ಯಕ್ಷರಾದ ಕುಶಾಲ ಪಾಟೀಲ ಗಾದಗಿ, ಬುಡಾ ಮಾಜಿ ಅದ್ಯಕ್ಷರಾದ ಬಾಬು ವಾಲಿ ಪ್ರಮುಖರಾದ ಜೈರಾಜ ಖಂಡ್ರೆ, ಶರಣಪ್ಪಾ ಮೀಠಾರೆ, ಬಾಬುರಾವ ದಾನಿ, ವೀರಪಾಕ್ಷ ಗಾದಗಿ, ಮಂಗಲಾ ಭಾಗವತ್, ಶಿವಶಂಕರ್ ಟೋಕರೆ, ರಾಮಕೃಷ್ಣ ಸಾಳೆ, ಡಾ.ಬಸವರಾಜ ಬಲ್ಲೂರ, ಗುರುನಾಥ್ ಅಕ್ಕಣ್ಣ, ಟಿ.ಎಂ. ಮಚ್ಚೆ, ಸಂಜುಕುಮಾರ್ ಅತಿವಾಳೆ, ವಿಜಯಕುಮಾರ ಸೋನಾರೆ, ವಿನಯ ಮಾಳಗೆ, ಮಹೇಶ ಗೋರನಾಳಕರ್, ಭಾರತಿ ವಸ್ತ್ರದ, ವಿಜಯಲಕ್ಷ್ಮಿ ಕೌಟಗೆ, ರಮೇಶ ಬಿರಾದಾರ, ಉಮೇಶ ಸಲಗರ, ಹಣ್ಮು ಪಾಜಿ, ಚನ್ನಬಸವ ಹೇಡೆ, ಜಯದೇವಿ ಯದಲಾಪುರೆ, ಉಮಾಕಾಂತ ಮೀಸೆ, ಎಸ್.ಎಸ್ ಹೊಡಮನಿ, ಶರತ್ ಅಭಿಮಾನ್, ಸತ್ಯಮೂರ್ತಿ, ಜಯ ಸ್ವಾಮಿ, ಡಾ.ಚನ್ನಪ್ಪಗೌಡ, ಪರಮೇಶ ಗಾಂಧಿ, ಶಿವಕುಮಾರ ಕೋತಮಿರ, ಕಲ್ಯಾಣರಾವ ಚಳ್ಕಾಪುರೆ, ಬಸವರಾಜ ಚಾಮರೆಡ್ಡಿ, ಸಂಜುಕುಮಾರ, ಸಿದ್ದಾರೂಢ ಭಾಲ್ಕೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸೊಂತ ಆಶ್ರಮದಲ್ಲಿ ಹಾಲು ಉಕ್ಕಿಸುವ ಕಾರ್ಯಕ್ರಮ ಇಂದು

ಮಲ್ಲಮ್ಮ ನುಡಿ ವಾರ್ತೆ



ಚಿಟಗುಪ್ಪ: ಮಕರ ಸಂಕ್ರಮಣ ಹಬ್ಬದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕೂಡ ಕಲ್ಬುರ್ಗಿ ಜಿಲ್ಲೆಯ ಕಮಲಾಪುರ ತಾಲೂಕಿನ ಸೊಂತ ಗ್ರಾಮದ ಹೊರವಲಯದಲ್ಲಿರುವ ಶ್ರೀ ದತ್ತ ದಿಗಂಬರ ಮಾಣಿಕೇಶ್ವರ ದೇವಸ್ಥಾನ ಹಾಗೂ ಶ್ರೀ ಶರಣ ಶಂಕರಲಿಂಗ ಮಹಾರಾಜರ ಆಶ್ರಮದಲ್ಲಿ ಪರಮ ಪೂಜ್ಯ ಶ್ರೀ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರ ನೇತೃತ್ವದಲ್ಲಿ ಇಂದು ಬೆಳಿಗ್ಗೆ 10 ಘಂಟೆಗೆ ಸೊಂತ ಆಶ್ರಮದಲ್ಲಿ ಸಾಯಂಕಾಲ 5 ಘಂಟೆಗೆ ಗುರುದೇವ ದತ್ತ ದಿಗಂಬರ ಮಾಣಿಕೇಶ್ವರ ದೇವಸ್ಥಾನ ಕಲಮುಡದ ಪರುಷ ಗುಡ್ಡದಲ್ಲಿ ಹಾಲು ಉಕ್ಕಿಸುವ ಕಾರ್ಯಕ್ರಮ ಜರುಗಲಿದೆ. ಆದ ಕಾರಣ ಸಮಸ್ತ ಭಕ್ತಾದಿಗಳು ಆಗಮಿಸಿ ದರ್ಶನ ಪಡೆದು ಪುನೀತರಾಗಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಾಳಿಪಟದ ನೈಲಾನ್ ಕುತ್ತಿಗೆಗೆ ಸಿಲುಕಿ ಸ್ಥಳದಲ್ಲೇ ವ್ಯಕ್ತಿ ಸಾವು

ಮಲ್ಲಮ್ಮ ನುಡಿ ವಾರ್ತೆ



ಚಿಟಗುಪ್ಪ: ತಾಲ್ಲೂಕಿನ ತಾಳಮಡಗಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 65ರ ಮೇಲೆ ಬೈಕ್ ಸವಾರನ ಕುತ್ತಿಗೆಗೆ ಪತಂಗದ ನೈಲಾನ್ ಮಾಂಜಾ ದಾರ ಸಿಲುಕಿ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಬುಧವಾರ ಬೆಳಿಗ್ಗೆ ನಡೆದಿದೆ. ಮೃತ ಬಂಬಳಗಿ ಗ್ರಾಮದ ಸಂಜೀವಕುಮಾರ ಗುಂಡಪ್ಪ ಹೊಸಮನಿ (48) ಎಂದು ಗುರುತಿಸಲಾಗಿದೆ. ಬುಧವಾರ ಬೆಳಿಗ್ಗೆ ಬಂಬಳಗಿ ಗ್ರಾಮದಿಂದ ಹುಮನಾಬಾದ ನಗರಕ್ಕೆ ಹೋಗುತ್ತಿದ್ದಾಗ ತಾಳಮಡಗಿ ಗ್ರಾಮದ ಹತ್ತಿರ ಗಾಳಿಪಟದ ನೈಲಾನ್ (ಚೈನೀಸ್) ಮಾಂಜಾ ದಾರ ಕುತ್ತಿಗೆಗೆ ಸಿಲುಕಿ ದ್ವಿಚಕ್ರ ವಾಹನ ಸವಾರ ರಕ್ತ ಸ್ರಾವದಿಂದ ಸ್ಥಳದಲ್ಲಿಯೇ ಕೊನೆಯುಸಿರೆಳೆದ್ದಿದ್ದಾನೆ.

# ಸಂತರ ವಿಚಾರ ಹಾಗೂ ಸಾಧನೆ ಪ್ರತಿಯೊಬ್ಬರು ಅನುಕರಣೆ ಮಾಡಬೇಕು: ಸತೀಶ್ ಗುಡ್ಡೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಸಂತರ ವಿಚಾರ ಹಾಗೂ ಸಾಧನೆಗಳನ್ನು ಪ್ರತಿಯೊಬ್ಬರು ಅನುಕರಣೆ ಮಾಡಬೇಕೆಂದು ಪುರಸಭೆ ಮುಖ್ಯಾಧಿಕಾರಿ ಸತೀಶ ಗುಡ್ಡೆ ಹೇಳಿದರು. ಇಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿನ ಸಾಮಾಜಿಕ ಕ್ರಾಂತಿಗೆ ಶಿವಯೋಗಿ ಸಿದ್ದರಾಮೇಶ್ವರರ ಕೊಡುಗೆ ಗಮನಾರ್ಹವಾದುದು. ಅವರು ಅಸಮಾನತೆ, ವರ್ಣ, ಜಾತಿ, ಲಿಂಗಭೇದವನ್ನು ತೊಡೆದು ಹಾಕುವ ಕೆಲಸವನ್ನು ವಚನಗಳ ಮೂಲಕ ಮಾಡಿದವರು. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಮೂರನೇ ಅಧ್ಯಕ್ಷರಾಗಿ ಅವರು ಸಮಾಜದಲ್ಲಿ ಕೆಲಸ ಮಾಡಿದ್ದಾರೆ ಎಂದರು. ಶಿವಯೋಗಿ ಸಿದ್ಧರಾಮೇಶ್ವರರು 68 ಸಾವಿರ ವಚನಗಳನ್ನು ರಚಿಸಿ ಹಾಡಿದ್ದಾರೆ. ಅವುಗಳ ಪೈಕಿ ಈಗ 1,679 ವಚನಗಳು ಮಾತ್ರ ಲಭಿಸಿವೆ. ಬಸವಣ್ಣ ಹಾಗೂ ಸಿದ್ದರಾಮೇಶ್ವರ ಶಿವಯೋಗಿಗಳು ಶ್ರೇಷ್ಠ ವಚನಕಾರರಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಪ್ರಮುಖರಾದ ಅಶೋಕ ಸ್ವಾಮಿ, ಮಹಮ್ಮದ್ ಶರೀಫ್, ಸಮಾಜದ ಮುಖಂಡರಾದ ರವಿ ಪವರ್, ಲಕ್ಷ್ಮಣ ಭೋವಿ, ಅಂಬಾಜಿ ಪವರ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶಾಹೀನ್ ಸಂಸ್ಥೆಯಿಂದ ಮಾನವೀಯ ಕಾರ್ಯ: ಸುರೇಶ ಚೆನಶೆಟ್ಟಿ

• **ಮಲ್ಲಮ್ಮ ನುಡಿ ವಾರ್ತೆ**
**ಬೀದರ್ :**



ಅತಿಯಾದ ಮೊಬೈಲ್ ವೀಕ್ಷಣೆಯಿಂದ ಮಕ್ಕಳ ಮನಸ್ಸಿನ ಮೇಲಾಗುತ್ತಿರುವ ಪರಿಣಾಮಗಳ ಕುರಿತು ಬೀದರ್ ನಗರದ ಪ್ರತಿಷ್ಠಿತ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹವು ವಿಶೇಷ ಸರ್ವೆ ಆರಂಭಿಸಿದೆ. ಜನವರಿ 14 ರಂದು ಕಾಲೇಜಿನ ಮುಖ್ಯ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರು ಈ ಸಮೀಕ್ಷೆಗೆ ಚಾಲನೆ ನೀಡಿದರು.

ಮನೆ ಮನೆ ಭೇಟಿ ಮತ್ತು ಆನ್‌ಲೈನ್ ಮೂಲಕ ನಡೆಸಲಾಗುವ ಈ ಸಮೀಕ್ಷೆಯಲ್ಲಿ ಮಹಿಳೆಯರ ಸುರಕ್ಷತೆಗಾಗಿ ಇರುವ ಕಾನೂನು, ಸರಕಾರದ ವ್ಯವಸ್ಥೆಗಳ ಬಗ್ಗೆಯೂ ಮಾಹಿತಿ ನೀಡಲಾಗುತ್ತದೆ. ಜೊತೆಗೆ ಸ್ವಚ್ಛ ಬೀದರ್ ನಿರ್ಮಾಣಕ್ಕಾಗಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಕಾರ್ಯವೂ ನಡೆಯಲಿದೆ.

ಮೂರು ಮುಖ್ಯ ಸಂಗತಿಗಳ ಬಗಿಗೆನ ಈ ಸರ್ವೆಯು 15 ದಿನಗಳ ಕಾಲ ನಡೆಯಲಿದ್ದು, ಶಾಹೀನ್ ಕಾಲೇಜಿನಲ್ಲಿ ಬಿಎ, ಬಿಎಸ್‌ಸಿ, ಬಿಕಾಂ ಮತ್ತು ಬಿಸಿಎ ಓದುತ್ತಿರುವ 200 ವಿದ್ಯಾರ್ಥಿಗಳು ಪಾಲ್ಗೊಳ್ಳುವರು. ಆನ್‌ಲೈನ್ ಸರ್ವೆಗಾಗಿ ಶಾಹೀನ್ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಿಂಕ್ ಕೊಡಲಾಗಿದೆ. ಇದನ್ನು ಕ್ಲಿಕ್ ಮಾಡುವ ಮೂಲಕ ಸರ್ವೆಯಲ್ಲಿ ಪಾಲ್ಗೊಳ್ಳಬಹುದು. ಇದು ಶೈಕ್ಷಣಿಕ ಉದ್ದೇಶಕ್ಕಾಗಿ ನಡೆಯುವ ಸರ್ವೆ ಆಗಿದ್ದು, ಯಾವುದೇ ವೈಯುಕ್ತಿಕ ಮಾಹಿತಿಯನ್ನು ಎಲ್ಲೂ ಹಂಚಿಕೊಳ್ಳುವುದಿಲ್ಲ ಎಂದು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷರಾದ ಡಾ.ಅಬ್ದುಲ್ ಖದೀರ್ ಹೇಳಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಸುರೇಶ ಚೆನಶೆಟ್ಟಿ ಮಾತನಾಡಿ, ಶಾಹೀನ್ ಸಂಸ್ಥೆಯ ಸಾಮಾಜಿಕ, ಮಾನವೀಯ ಕಾಳಜಿಯ ಕಾರ್ಯಗಳನ್ನು ಕೊಂಡಾಡಿದರು. ಶಾಹೀನ್ ಸಂಸ್ಥೆಯು ಶಿಕ್ಷಣದ ಜೊತೆಗೆ ಸಮಾಜಕ್ಕೆ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿದೆ. ಬೀದರ್ ಅನ್ನು ದುಶ್ಚಟಗಳಿಂದ, ಭಿಕ್ಷಾಟನೆಯಿಂದ ಮುಕ್ತಗೊಳಿಸಲು ಶ್ರಮಿಸುತ್ತಿದೆ. ಸರಳ ವಿವಾಹ ಕುರಿತು ಜಾಗೃತಿ ಮೂಡಿಸುತ್ತಿದೆ ಇದೀಗ ಅತಿಯಾದ ಮೊಬೈಲ್ ವೀಕ್ಷಣೆಯಿಂದ ಮಕ್ಕಳ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಸಮೀಕ್ಷೆ ನಡೆಸಲು ಮುಂದಾಗಿದೆ. ಇದೊಂದು ಮಹತ್ವದ ಮತ್ತು ಮಾದರಿಯಾದ ಕಾರ್ಯವಾಗಿದೆ ಎಂದು ಸುರೇಶ ಚನಶೆಟ್ಟಿ ಹೇಳಿದರು.

ಮಕ್ಕಳನ್ನು ಮೊಬೈಲ್ ಮೋಹದಿಂದ ಬಿಡುಗಡೆ ಮಾಡಲೇಬೇಕಾಗಿದೆ. ಇದಕ್ಕಾಗಿ ಸಾಮೂಹಿಕ ಪ್ರಯತ್ನ ನಡೆಯಬೇಕು. ಪಾಲಕರೂ ಇದರಲ್ಲಿ ಭಾಗಿಯಾಗಬೇಕು ಎಂದರು. ಮಹಿಳೆಯರ ಸುರಕ್ಷತೆ ಮತ್ತು ಸ್ವಚ್ಛತೆ ಕುರಿತೂ ಸರ್ವೆ ನಡೆಸುತ್ತಿರುವುದು ಅನುಕರಣೀಯ ಎಂದು ಹೇಳಿದರು.

ಬೀದರ್ ನಾಗರಿಕ ಸನ್ಮಾರ್ಗ ಸಮಿತಿಯ ಪ್ರಮುಖರಾದ ಡಾ.ರಾಜಶೇಖರ ಸೇಡಮಕರ್ ಮಾತನಾಡಿ, ಮೊಬೈಲ್ ವೀಕ್ಷಣೆಯಿಂದ ಆರೋಗ್ಯದ ಮೇಲಾಗುತ್ತಿರುವ ಪರಿಣಾಮಗಳ ಕುರಿತು ತಿಳಿಸಿದರು. ಸಮಿತಿಯು ಸರಳ ವಿವಾಹ ಕುರಿತು ಜಾಗೃತಿ ಮೂಡಿಸುತ್ತಿದೆ. ವ್ಯಸನ ಮುಕ್ತ ಬೀದರ್ ನಿರ್ಮಾಣಕ್ಕೆ ಸಂಕಲ್ಪತೊಟ್ಟಿದೆ. ಅತಿಯಾದ ಮೊಬೈಲ್ ವೀಕ್ಷಣೆಯಿಂದ ದೇಹದಲ್ಲಿ ಕೊಬ್ಬು ಸಂಗ್ರಹ ಹೆಚ್ಚಿ, ಆರೋಗ್ಯ ಸಮಸ್ಯೆ ಎದುರಾಗುತ್ತಿವೆ ಎಂದು ಹೇಳಿದರು.

ಶಾಹೀನ್ ಕಾಲೇಜಿನ ಪ್ರಾಚಾರ್ಯರಾದ ಅಫ್ರಾನಾಜ್ ಅವರು ಮಾತನಾಡಿ, ಸರ್ವೆಯ ಉದ್ದೇಶಗಳನ್ನು ತಿಳಿಸಿದರು. ಮೊಬೈಲ್ ವೀಕ್ಷಣೆಯಿಂದ ಮಕ್ಕಳಲ್ಲಿ ಏಕಾಗ್ರತೆ ಕಡಿಮೆಯಾಗುತ್ತಿದೆ. ವಿಶೇಷವಾಗಿ ರೀಲ್ ವೀಕ್ಷಣೆ–ಯು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿದೆ. ಶಾಲೆಯಲ್ಲಿ ಮಕ್ಕಳು ಏಕಾಗ್ರತೆಯಿಂ ಪಾಠ ಕೇಳುವುದು ಕಡಿಮೆಯಾಗುತ್ತಿದೆ. ಸಮಾಜದೊಂದಿಗೆ ಬೆರೆಯುವುದು ಕಡಿಮೆಯಾಗುತ್ತಿದೆ. ಅಕ್ಕಪಕ್ಕ ಇದ್ದರೂ ಮಾತಾಡದಂತಹ ಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮಹಿಳೆಯರನ್ನು ಕೌಟುಂಬಿಕ ಹಿಂಸೆಯಿಂದ, ವರದಕ್ಷಿಣೆ ಕಾಟದಿಂದ ರಕ್ಷಿಸಲು ಹಲವು ಕಾಯ್ದೆಗಳಿವೆ. ಸರಕಾರದ ಸಂಸ್ಥೆಗಳು ಇವೆ. ಬೀದರಿನಲ್ಲಿ ಅಕ್ಕಪಡೆ ಈ ದಿಸೆಯಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿದೆ. ಇವೆಲ್ಲ ಸಂಗತಿಗಳ ಬಗ್ಗೆ ಸರ್ವೆ ಸಮಯದಲ್ಲಿ ಮಾಹಿತಿ ಕೊಡಲಾಗುತ್ತದೆ. ಸುರಕ್ಷತೆಗಾಗಿ ಇರುವ ವ್ಯವಸ್ಥೆ, ನಿಯಮಗಳು ಮತ್ತು ಯಾರನ್ನು ಸಂಪರ್ಕಿಸಬಹುದು ಎಂಬ ಬಗ್ಗೆಯೂ ತಿಳಿಸಿಕೊಡಲಾಗುತ್ತದೆ ಎಂದು ಪ್ರೊ. ಅಫ್ರಾನಾಜ್ ಮಾಹಿತಿ ನೀಡಿದರು. ಸಮಿತಿಯ ಪ್ರಮುಖರಾದ ಅಶೋಕ ವಡಗಾವೆ, ಬಸವರಾಜ ಮಾಳಗೆ, ಶಂಭುಲಿಂಗ ವಾಲದೊಡ್ಡಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಭದ್ರೇಶ್ವರ ಸ್ವಾಮಿಯ ದೇಗುಲದಲ್ಲಿ ಧನುರ್ಮಾಸ ಕೊನೆ ಪೂಜೆ




• **ಮಲ್ಲಮ್ಮ ನುಡಿ ವಾರ್ತೆ ,ಬೀದರ್:**

ಭದ್ರೇಶ್ವರಮಠದಲ್ಲಿ ತಿಂಗಳಿನಿಂದ ಭದ್ರೇಶ್ವರ ದೇವರಿಗೆ ಧನುರ್ಮಾಸದ ವಿಶೇಷ ಪೂಜೆ ನಡೆಯುತ್ತಿದ್ದು, ಮಕರ ಸಂಕ್ರಮಣ ದಿನವಾದ ಬುದುವಾರ ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮೀಜಿ ಸಂವತ್ಸರದ ಕೊನೆಯ ಧನುರ್ಮಾಸ ಪೂಜೆ ನೆರವೇರಿಸಿದರು ಭದ್ರೇಶ್ವರ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು ವಿಶೇಷ ರುದ್ರ ಅಭಿಷೇಕ ಸಾಮೂಹಿಕ ಶಿವ ಸಹಸ್ರನಾಮಾವಳಿ ಪಾರಾಯಣ ಗ್ರಾಮದ ಪ್ರಮುಖರಾದ ಸಂತೋಷ್ ಜಗದಾಳೆ ನಾಗೇಶ್ ಕೋಳರ್ ಶರಣಪ್ಪ ಶಂಗಶೆಟ್ಟಿ ವಿಶಾಲ್ ಪಕ್ಕ ಗುರು ಕೋಳರ್ ಬಸವರಾಜ್ ದೊಡ್ಡತಮ್ಮ ಗುರುಸ್ವಾಮಿ ಗ್ರಾಮಸ್ಥರು ಇದ್ದರು

# ಕಲಬುರಗಿ ನಗರದಲ್ಲಿ 24x7 ನೀರು ಬಳಕೆ ಮಾಡಿ ಕರ ಪಾವತಿಸದೇ ಇರುವ ಗ್ರಾಹಕರ ನಳ ಸಂಪರ್ಕ ಕಡಿತ



• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**

ವಿಶ್ವಬ್ಯಾಂಕ್‌ನೆರವಿನಕರ್ನಾಟಕನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕುಸ್ಸೆಂಫ್) ಅಡಿಯಲ್ಲಿ ಕಲಬುರಗಿನಗರದಲ್ಲಿ24x7ನಿರಂತರ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಕಲಬುರಗಿ ನಗರದ ವಾರ್ಡ ನಂ. 46, 49 ಹಾಗೂ 54, 55 ರಲ್ಲಿ ಬರುವ ಜೋನ್‌ಗಳಾದ ಜೋನ್ ನಂ.15 ಐವಾನ್ ಶಾಹಿ ಏರಿಯಾ ಹಾಗೂ ಜೋನ್ ನಂ. 02 ಶ್ರೀಗುರು ಕಾಲೇಜ ಓಜಾ ಲೇಔಟ್, ಕುಬೇರಾ ಲೇಔಟ್‌ಗಳಲ್ಲಿ ಕಳೆದ 01 ವರ್ಷದಿಂದ 24x7 ನಿರಂತರನೀರುಬಳಕೆಮಾಡಿಕೊಂಡು ನೀರಿನ ಕರ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರ ನಳ ಸಂಪರ್ಕಗಳನ್ನುಕಡಿತಗೊಳಿಸಲಾಗಿದೆ ಎಂದು ಕಲಬುರಗಿ ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಎಂಪಿಯೋಜನಾ ಅನುಷ್ಠಾನ ಘಟಕದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಪ್ರಾರಂಭಿಕ ಹಂತದಲ್ಲಿ ಜೋನ್ ನಂ.15 ಹಾಗೂ 02 ರಲ್ಲಿ ಕಳೆದ 01 ವರ್ಷದಿಂದ 24x7 ನಿರಂತರ ನೀರು ಸರಬರಾಜು ಮಾಡಲಾಗುತ್ತಿದೆ. ಜೋನ್ ನಂ.15 ರಲ್ಲಿ 261 ಹಾಗೂ ಜೋನ್ ನಂ.02 ರಲ್ಲಿ 456 ಕುಟುಂಬಗಳು ನೀರು ಬಳಕೆಮಾಡಿಕೊಳ್ಳುತ್ತಿವೆ. ಪ್ರತಿ ತಿಂಗಳು ನೀರಿನ ಕರ ಪಾವತಿಸಲು ಮನೆ ಮನೆಗೆ ಭೇಟಿ ನೀಡಿ ಗ್ರಾಹಕರಿಗೆ ನೀರಿನ ಕರ ಪಾವತಿಸುವಂತೆ ಮನವೊಲಿಸುವ ಕಾರ್ಯ ಮಾಡಿದ್ದು, ಹಾಗೂ ನೋಟೀಸ್ ಮುಖಾಂತರ ಕಾಲಾವಕಾಶ ನೀಡಿದ್ದರೂ ಸಹ ಗ್ರಾಹಕರು ನೀರಿನ ಕರ ಪಾವತಿಸಿರುವುದಿಲ್ಲ. ಅಂತಹ ಗ್ರಾಹಕರ ನಳ ಸಂಪರ್ಕಗಳನ್ನು ಕಡಿತಗೊಳಿಸಬೇಕೆಂದು ಕುಸ್ಸೆಂಪು ಯೋಜನೆಯ ಅಧೀಕ್ಷಕ ಅಭಿಯಂತರರು ಆದೇಶ ನೀಡಿರುತ್ತಾರೆ.

ಹಾಗಾಗಿ ಜೋನ್ ನಂ.15 ರಲ್ಲಿ ಬರುವ ಗ್ರಾಹಕರ ನಳ ಸಂಖ್ಯೆಗಳಾದ ಜಿ62656ಎಲ್, 57105, 44209, 11704, 16218, 16219, ಜಿ62660ಎಲ್, 10761, 20137, 2822, 2023, 55848, 2636, 20120, 60327, 54221, 30563, 56816, ಜಿ62645ಎಲ್ ಹಾಗೂ ಜೋನ್ ನಂ.02 ರಲ್ಲಿ ಬರುವ ಗ್ರಾಹಕರ ನಳ ಸಂಖ್ಯೆಗಳಾದ ಜಿ62846ಎಲ್, ಜಿ62855ಎಲ್, ಜಿ62895ಎಲ್, ಜಿ62937ಎಲ್, ಜಿ63034ಎಲ್, 44242, 30486, 50944, ಜಿ63094ಎಲ್, 58973, ಜಿ62856ಎಲ್‌ನ್ನು ಕಡಿತಗೊಳಿಸಲಾಗಿದೆ. ಇನ್ನೂ ನೀರಿನ ಕರವನ್ನು ಬಾಕಿ ಉಳಿಸಿಕೊಂಡಿರುವ ಗ್ರಾಹಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಕಂತಿನ ರೂಪದಲ್ಲಿ ಪಾವತಿಸಿ ಮಹಾನಗರ ಪಾಲಿಕೆಗೆ ಸಹಕರಿಸಬೇಕೆಂದು ಅವರು ಮನವಿ ಮಾಡಿರುತ್ತಾರೆ. ಮೆ॥ ಎಲ್ ಆಂಡ್ ಟಿ ಕಂಪನಿ ಹಾಗೂ ಕಲಬುರಗಿ ಮಹಾನಗರ ಪಾಲಿಕೆಯ ಒಡಂಬಡಿಕೆಯಂತೆ ನಗರದಲ್ಲಿರುವ ನಳ ಸಂಪರ್ಕದ ಗ್ರಾಹಕರಿಂದ ನೀರಿನ ಕರ ವಸೂಲಿ ಮಾಡುವುದು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿ ಮೆ. ಎಲ್ ಆಂಡ್ ಟಿ ಕಂಪನಿಯದಾಗಿದೆ.

ಕಲಬುರಗಿ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಐಡಿಎಫ್‌ಸಿ ಹಾಗೂ ಮೆ॥ ಎಲ್ ಆಂಡ್ ಟಿ ಲಿಮಿಟೆಡ್‌ರೊಂದಿಗೆ ಸಹಕರಿಸಲು ಹಾಗೂ ನೀರಿನ ಸಮಸ್ಯೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ಸೇವಾ ದೂರವಾಣಿ ಸಂಖ್ಯೆ +91 1800 425 8247 (ಛಿಛಿಛಿ) ಮತ್ತು 084-722-37247ಗೆ ಸಂಪರ್ಕಿಸಲು ಕೋರಲಾಗಿದೆ.

# ಅಖಂಡ ಹರಿನಾಮ ಸಪ್ತಾಹ ನಿಮಿತ್ಯ ಹನುಮಾನ ದೇವರಿಗೆ ಅಭಿಷೇಕ ಪೂಜೆ



• **ಮಲ್ಲಮ್ಮ ನುಡಿ ವಾರ್ತೆ, ಕಮಲನಗರ:**

ತಾಲೂಕಿನ ಸುಕ್ಷೇತ್ರ ತೋರಣಾ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಬುಧವಾರ ದಿಂದ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮಕ್ಕೆ ಬೆಳಗ್ಗೆ 6 ಗಂಟೆಗೆ ಹನುಮಾನ ದೇವರು ಅಭಿಷೇಕ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.ನಂತರ ಶಿವಾಜಿ ಮಹಾರಾಜ ಅವರು ಪ್ರವಚನ ನೀಡಿದರು, ಜಗತ್ತಿನಲ್ಲಿ ನಮ್ಮ ಕಣ್ಣಿಗೆ ಕಾಣುವ ದೇವರು ಅದು ನಮ್ಮ ತಂದೆ ತಾಯಿ ಮಾತ್ರ ಅವರು ಸೇವೆ ಮಾಡಿದ್ದಾರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಅದರ ಜೊತೆಯಲ್ಲಿ ಸ್ವಚ್ಚತ್ತಾ ಭಾವದಿಂದ ದೇವರ ಮೇಲೆ ಭಕ್ತಿ ಇಟ್ಟು, ದೇವರ ನಾಮ ಸ್ಮರಣೆ ಮಾಡಿತ್ತಾ ಜೀವನ ಸಾಗಿಸಿ ನಿಮ್ಮ ಜೀವನದಲ್ಲಿ ಎಂತಹದೆ ಕಷ್ಟ, ದುಃಖ, ಸಂಕಷ್ಟ ಬಂದರೆ ದೇವರು ನಿಮ್ಮಗೆ ಕಾಣದ ಕೈಯಿಂದ ಬಂದು ಕಾಪಾಡುತ್ತಾನೆ. ಮನಸ್ಸಿಗೆ ನೆಮ್ಮದಿ ಸಿಗ್ಬೇಕದ್ದಾರೆ ಇಂತಹ ಸಪ್ತಾಹ ಕಾರ್ಯಕ್ರಮದಲ್ಲಿ ಕುಳಿತು ನಾಲ್ಕು ಒಳ್ಳೆಯ ವಿಚಾರ ಕಲಿತು ಪರೋಪಕರಿ ಜೀವನ ಸಾಗಿಸಬೇಕೆಂದು ಹೇಳಿದರು.

ನಂತರ ಹರಿನಾಥ ಕೀರ್ತನೆ ನಡೆಯಿತು. ತೋರಣ, ತೋರಣ ವಾಡಿ ಲಿಂಗದಳ್ಳಿ ಬೆಳ್ಕೋಣಿ, ಭವಾನನಿ ಬಿಜಲಗಾಂವ ಗ್ರಾಮದ ಭಜನೆ ತಂಡದವರು ಭಜನೆ ಕಾರ್ಯಕ್ರಮ ನೆರವೇರಿಸಿ ಕೊಟ್ಟರು.

ಈ ಸಂದರ್ಭದಲ್ಲಿ ರಾಜಕುಮಾರ ಪಾಟೀಲ, ಪ್ರಕಾಶ ಪಾಟೀಲ, ಭೀಮರಾವ ಶಿಂಧೆ, ಹೌಗಿರಾವ ಕೋರೆ, ಬಾಬುರಾವ ಚಾಂಡೇಶ್ವರೆ ನಾಗನಾಥ ಚಾಂಡೇಶ್ವರೆ, ಕುಮಾರ ಒನಮಾರೆ, ಕಿಶನರಾವ ಒನಮಾರೆ, ಲಕ್ಷ್ಮಣ ಗೌವಳಿ, ಪ್ರದೀಪ ಪಂಚವಾರೆ,

ಬಾಲಾಜಿ ಗೌವಳಿ,ಭೀಮಾ ಮೆಹತ್ರೆ ಸೇರಿದಂತೆ ತೋರಣಾ ಮತ್ತು ಸುತ್ತ ಮುತ್ತಲಿನ ಗ್ರಾಮದ ಸದ್ಭಭಕ್ತರು ಇದ್ದರು.

# ಸರ್ಕಾರ ಎಚ್ಚೆತ್ತುಕೊಂಡು ರೈತರ ನೆರವಿಗೆ ಬರಬೇಕು:ನಾಡಗೌಡ

## ಜೋಳ ಖರೀದಿ ಕೇಂದ್ರ ತೆರೆದು ನೋಂದಣಿ ಪ್ರಕ್ರಿಯೆ ಪ್ರಾರಂಭಿಸಿ ;ನಾಡಗೌಡ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು**

ಈಗಾಗಲೇ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಜೋಳದ ಬೆಳೆ ಕಟಾವು ಪ್ರಾರಂಭವಾಗಿದ್ದು ಕೂಡಲೇ ಖರೀದಿ ಕೇಂದ್ರ ತೆಗೆದು ನೊಂದಣಿ ಮಾಡಿಕೊಳ್ಳಬೇಕು. ಎಂದು ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷರು ಬಸವರಾಜ ನಾಡಗೌಡ ಸರ್ಕಾರಕ್ಕೆ ಒತ್ತಾಯ ಮಾಡಿದರು

ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು ಕಳೆದ ಬಾರಿ ಜೋಳ ಬೆಳೆದ ರೈತರು ನಷ್ಟ ಸಂಭವಿಸಿದ್ದು. ಸರ್ಕಾರ ತಡವಾಗಿ ಖರೀದಿ ಮಾಡಿದ್ದಕ್ಕೆ ಸಮಸ್ಯೆ ಅನುಭವಿಸಿದ್ದಾರೆ. ಹಾಗಾಗಿ



ಸರಕಾರ ರೈತರ ನೆರವಿಗೆ ಮುಂದಾಗಬೇಕುಯು ಎಂದು ತಾಲೂಕು ಜೆಡಿಎಸ್ ಪಕ್ಷದ ವತಿಯಿಂದ ಆಗ್ರಹವಾಗಿದೆ ಹಿಂದೆ ಮಾಜಿ ಸಚಿವ ವೆಂಕಟರಾವ್ ನಾಡಗೌಡ ರವರು ಅವಧಿಯಲ್ಲಿ ಎಕರೆಗೆ 20 ಕ್ವಿಂಟಾಲ್ ಪ್ರತಿ ಎಕರೆಗೆ ಖರೀದಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದಾಗ ಸರ್ಕಾರ ನಿರ್ಧಾರ ಮಾಡಿ 10 ಕ್ವಿಂಟಾಲ್ ಖರೀದಿ ಮಾಡಿತ್ತು.

**“ ಎರಡು ಬಾರ್ದಲಿ ಕುಟುಂಬಗಳು ಆದರೆ ಯಾರೇ ಆಗಲಿ ವೈಯಕ್ತಿಕ ಕುಟುಂಬದ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಾದ ಸರ್ದಾರವಲ್ಲ. ಇವತ್ತು ಬಾರ್ದಲಿ ಕುಟುಂಬ ಯಾರು ಆಸ್ತಿಯಲ್ಲಿ ಇದ್ದು ಅನುಭವಿಸಿದ್ದಾರೆ ಎಂಬುದು ತಾಲೂಕಿನ ಜನತೆಗೆ ಗೊತ್ತಿದೆ. ಎಂದು ತಾಲೂಕು ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಹೇಳಿದರು**

ಈ ಸಲ ಎರಡನೇ ಬೆಳೆಗೆ ನೀರು ಇಲ್ಲದೆ ರೈತರು ಸಂಕಷ್ಟ ಎದುರಾಗಿದ್ದು. ಈಗಲಾದರೂ ಸರ್ಕಾರ ಎಚ್ಚೆತ್ತು-ಕೊಂಡು ರೈತರ ನೆರವಿಗೆ ಬಂದ ಅದೆಷ್ಟು ಬೇಗ ಖರೀದಿ ಕೇಂದ್ರ ಪ್ರಾರಂಭ ಮಾಡಿ ನೊಂದಣಿ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಒಂದು ವೇಳೆ ಜೋಳ ಖರೀದಿಗೆ ವಿಳಂಬ ಧೋರಣೆ ಅನುಸರಿಸಲು ಮುಂದಾದರೆ ರೈತರೊಂದಿಗೆ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ. ಅಶೋಕ್ ಗೌಡ ಗದ್ರಟಗಿ. ಜಿ.ಎಸ್ ಸತ್ಯನಾರಾಯಣ. ಜಿಲಾನಿ ಪಾಷ. ದಾಸಿರಿ ಸತ್ಯನಾರಾಯಣ. ವೆಂಕಟೇಶ್ ನಂಜಲದಿನ್ನಿ. ರವಿಕುಮಾರ್ ಸೈಯದ್ ಅಸೀಫ್ ಸೇರಿದಂತೆ ಇತರರು ಇದ್ದರು.

# ಕವಿ ಶಿಕ್ಷಕ ಸಮ್ಮೇಳನಾಧ್ಯಕ್ಷ ಶಿವರಾಜ ಮೇತ್ರೆ ಆಯ್ಕೆ.



ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ :- ತಾಲೂಕಿನ ಸಸ್ತಾಪೂರ ಯಲ್ಲಾಲಿಂಗೇಶ್ವರ ಮಠದಲ್ಲಿ ಇದೇ 15 ಮತ್ತು 16.ರಂದು ಎರಡು ದಿನಗಳ ಜರುಗುವ ಪ್ರಥಮ ಶಿಕ್ಷಕ ಕವಿ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಗೊಂಡ ಕವಿ- ಶಿಕ್ಷಕ ಶಿವರಾಜ ಡಿ.ಮೇತ್ರೆ ತಾಳಮಡಗಿ ದಂಪತಿಗಳಿಗೆ ಅವರ ನಿವಾಸದಲ್ಲಿ ಅಧಿಕೃತ ಆಹ್ವಾನ ಪತ್ರ ನೀಡಿ ಗೌರವಿಸಲಾಯಿತು.

ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ ಮಾತನಾಡಿ ಮೇತ್ರೆ ಅವರು ಬಹುಮುಖ ವ್ಯಕ್ತಿ ಅವರು.

ಉರಿಲಿಂಗಪೆದ್ದಿ ಮಠದ ಪೂಜ್ಯಶ್ರೀ ಪಂಚಾಕ್ಷರಿ ಸ್ವಾಮೀಜಿ.ಮಠದ ವ್ಯವಸ್ಥಾಪಕ ನಾಗಶೆಟ್ಟಿ ಪಾಟೀಲ, ಸಿದ್ಧಲಿಂಗ ಜಮಾದಾರ,ಡಾ.ರಾಜಕುಮಾರ ಮಾಳಗೆ, ಡಾ.ಸಿದ್ದಪ್ಪ ಹೊಸಮನಿ,ಶಾಂತವೀರ ರೆಡ್ಡಿ,ಹಣಮಂತ. ಸೊನಾತೆ,ಪ್ರಕಾಶ,ಅರ್ಜುನ,ಐ. ಎಸ್.ಶಕೀಲ್, ಕಸಾಪ ಅಧ್ಯಕ್ಷ ಸಿದ್ದಲಿಂಗ ನಿರ್ಣಾ,ಮಡೆಪ್ಪ ಕಿಂಬಾರ,ಶಾಲಿವಾಹನ ರೋಗನ್,ಲಕ್ಷ್ಮಣ ಕನಕಟಕರ,ವೀರಣ್ಣ ಪಾಂಚಾಳ,ರವಿ ಶೆಡೋಳ,ಸುಭಾಷಪಾಟೀಲ,ಜಾಕೀರಮೀಯಾ,ಕಂಟೆಪ್ಪ ಹಲಬರ್ಗೆ,ಶಶಿಧರ ಮಟ್ಟಿ, ವಿಶ್ವರೂಪಾಚಾರ್ಯ, ಅಂಬಿಕಾದೇವಿ,ರಮೇಶ ರೆಡ್ಡಿ,ಗಣಪತಿ ಮೇದಕರ್, ವಾಸುದೇವ ಕನಕಟಕರ,ಕಲ್ಪನಾ,ಸಿದ್ಧಾರ್ಥ ಮಿತ್ರಾ, ಶ್ರೀದೇವಿ,ರಸಿಕಾಬಾಯಿ,ತಂಗೆಮ್ಮ,ಶಶಿಕಲಾ,ಉವ 'ಾದೇವಿ ರಂಜಿತಾ,ಶರಣಬಸಪ್ಪ,ಅಕ್ಕನಾಗಮ್ಮ,ಸಿದ್ದು ಕೋಣಿನ್ ಮತ್ತಿತರು ಇದ್ದರು.

# ಶರಣ ಸಿದ್ದರಾಮೇಶ್ವರರ ತತ್ವಾದರ್ಶ ಅಳವಡಿಸಿಕೊಳ್ಳಿ



ತಾಳಿಕೋಟಿ: ಮಹಾಪುರುಷರ, ಸಂತ ಶರಣರ ಹಾಗೂ ದಾರ್ಶನಿಕರ ಜಯಂತಿಗಳನ್ನು ಆಚರಿಸಿದರೆ ಸಾಲದು ಅವರು ಕೊಟ್ಟುಹೋದ ಆದರ್ಶಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಮಾಡುವ ಅಗತ್ಯ ಇದೆ ಎಂದು ತಹಸಿಲ್ದಾರ ಡಾ.ವಿನಯಾ ಹೂಗಾರ ಹೇಳಿದರು. ಬುಧವಾರ ಪಟ್ಟಣದ ತಹಸಿಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕ ಆಡಳಿತ ಹಾಗೂ ಭೋವಿ ಸಮಾಜದ ಸಹಯೋಗದಲ್ಲಿ ಹಮ್ಮಿಕೊಂಡ ಶಿವಯೋಗಿ ಶ್ರೀ ಸಿದ್ದರಾಮೇಶ್ವರ ಅವರ 853ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರ ಮಠ ಮಾತನಾಡಿ ಶಿವಯೋಗಿ ಸಿದ್ದರಾಮೇಶ್ವರ ಅವರು ಕೆಟ್ಟುಹೋದ ಸಮಾಜವನ್ನು ಶ್ರೇಷ್ಠ ಚಿಂತನೆಗಳ ಮೂಲಕ ಸರಿ ದಾರಿಗೆ ತರುವ ಕೆಲಸ ಮಾಡಿದರು ನಾವು ಕೇವಲ ಅವರ ಭಾವಚಿತ್ರದ ಪೂಜೆ ಮಾಡಿದರೆ ಸಾಲದು ಅವರ ಜೀವನದ ಚಿಂತನೆಗಳನ್ನೂ ಅರಿಯುವ ಕೆಲಸ ಮಾಡಬೇಕಾಗಿದೆ ಎಂದರು. ಪ್ರೌಢಶಾಲೆ ಶಿಕ್ಷಕರ ಸಂಘದ ಉಪಾಧ್ಯಕ್ಷ ಆನಂದ ಕಟ್ಟಿಮನಿ ಮಾತನಾಡಿ ತಮ್ಮ ಅಪಾರ ಸೇವಾ ಕಾರ್ಯಗಳಿಂದಾಗಿ ಕಾಯಕಯೋಗಿ ಎಂದೆನಿಸಿಕೊಂಡು ಶಿವಯೋಗಿ ಸಿದ್ದರಾಮೇಶ್ವರ ಅವರು ವಚನ ಕ್ರಾಂತಿಗೆ ಸಾಕಷ್ಟು ಶ್ರಮಿಸಿದವರಾಗಿದ್ದಾರೆ ಎಂದರು. ವೇದಿಕೆ ಕಾರ್ಯಕ್ರಮ ಮುನ್ನ ಪಟ್ಟಣದ ಬಸ್ ನಿಲ್ದಾಣ ಹತ್ತಿರವಿರುವ ಶ್ರೀ ಸಿದ್ದರಾಮೇಶ್ವರ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಸಮಾಜದ ವತಿಯಿಂದ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು.ಸಿ.ಆರ್.ಸಿ.ರಾಜು ವಿಜಾಪುರ ಕಾರ್ಯಕ್ರಮ ನಿರ್ವಹಿಸಿದರು. ಈ ಸಮಯದಲ್ಲಿ ಭೋವಿ ಸಮಾಜದ ತಾಲೂಕ ಅಧ್ಯಕ್ಷ ದ್ಯಾವಪ್ಪ ಕೂಚಬಾಳ, ನಗರ ಅಧ್ಯಕ್ಷ ಹಣಮಂತ ಕಟ್ಟಿಮನಿ, ಉಪಾಧ್ಯಕ್ಷ ದುರ್ಗಪ್ಪ ಕುಲಕರ್ಣಿ, ಗೌರವ ಅಧ್ಯಕ್ಷ ಭೀಮಣ್ಣ ಕಟ್ಟಿಮನಿ, ಎಚ್ ಎನ್ ಕಟ್ಟಿಮನಿ, ದುರ್ಗಪ್ಪ ಕಾರಕೂರ, ಮುದುಕಪ್ಪ ಢವಳಗಿ, ಹುಲುಗೆಪ್ಪ ಕಟ್ಟಿಮನಿ, ನಾಗಪ್ಪ ಬಳವಾಟ, ಬಸವರಾಜ ಎಚ್ ಕಟ್ಟಿಮನಿ, ಶ್ರೀಕಾಂತ ಚಿಂಚೋಳಿ, ಸಾಬಣ್ಣ ಕಟ್ಟಿಮನಿ, ಪ್ರಕಾಶ ಕೂಚಬಾಳ, ಪರುಶರಾಮ ನಾಲತವಾದ, ನ್ಯಾಯವಾದಿ ಕಾರ್ತಿಕ ಕಟ್ಟಿಮನಿ ರಾಮಣ್ಣ ಕಟ್ಟಿಮನಿ, ಸಂಜೀವಪ್ಪ ಬರದೇನಾಳ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಇದ್ದರು.

**'ಮಹಾಪುರುಷರ,ಸಂತ ಶರಣರ ಜಯಂತಿಗಳನ್ನು ಆಚರಿಸಿದರೆ ಸಾಲದು ಅವರು ತೋರಿಸಿಕೊಟ್ಟು ಹೋದ ಮಾರ್ಗದಲ್ಲಿ ನಾವು ನಡೆಯುವ ಅಗತ್ಯ ಇದೆ'.**

**ತಹಸಿಲ್ದಾರ ಡಾ.ವಿನಯಾ ಹೂಗಾರ,ತಾಳಿಕೋಟಿ.**

# ಭೋವಿ ವಡ್ಡರ ಸಮಾಜದ ಬೆಳವಣಿಗೆ 5 ಲಕ್ಷ ರೂ ನೀಡಲು ಬದ್ಧ ಶಾಸಕ: ತಿಪ್ಪಣ್ಣಪ್ಪ ಕಮಕನೂರ.



• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**

ಭೋವಿ ಸಮಾಜ ಬೆಳವಣಿಗೆಗಾಗಿ 5 ಲಕ್ಷ ರೂ ಸಹಾಯ ನೀಡಲು ನಾನು ಬದ್ದನಾಗಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ ಅವರು ಹೇಳಿದರು.

ಬುಧುವಾರದಂದು ನಗರದ ಎಸ್. ಎಂ. ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಸಿದ್ಧರಾಮೇಶ್ವರ ಜಯಂತಿಯನ್ನು ನಾವು ಇಂದು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಅವರ ಜೀವನವು ನಮಗೆ ಪ್ರೇರಣೆದಾಯಕವಾಗಿದೆ ಅವರು ಸಮಾಜಕ್ಕೆ ಧರ್ಮ ಸೇವೆ ಮತ್ತು ಶ್ರದ್ಧೆಯ ತತ್ವಗಳನ್ನು ಅರ್ಥ ಮಾಡಿಸಿದರು.12ನೇಶತಮಾನದವರಾದ ಸಿದ್ಧರಾಮೇಶ್ವರರು ಆಧ್ಯಾತ್ಮಿಕ ಆಗಿರದೆ, ಲೋಕೋಪಕಾರಿಗಳಾಗಿದ್ದರು, ದೊಡ್ಡ ಕೆರೆಯನ್ನು ನಿರ್ಮಿಸಿದರು, ಸಮಾಜ ಸೇವೆ ಮಾರ್ಗದಲ್ಲಿ ದೈವತ್ವನ್ನು ಕಂಡುಕೊಂಡವರು,

ಚನ್ನಬಸವಣ್ಣ ಅವರನ್ನು ತಮ್ಮ ಗುರುವಾಗಿಸಿಕೊಂಡರು. ಹೀಗೆ ಜೀವನದ ಬಗ್ಗೆ ತಿಳಿಸುವುದರ ಮುಖಾಂತರ ನಿಮ್ಮ ಸಹಾಯಕ್ಕೆ, ಸಹಕಾರಕ್ಕೆ ನಿಮ್ಮ ಬೆನ್ನುಲುಬಾಗಿ ಇಲ್ಲಿರುತ್ತೇನೆ ಎಂದು ಹೇಳಿದರು

ದಕ್ಷಿಣ ಮತ ಕ್ಷೇತ್ರದ ಶಾಸಕರಾದ ಅಲ್ಲಮ್‌ಪ್ರಭು ಪಾಟೀಲ ಅವರು ಮಾತನಾಡಿ, ಸಿದ್ಧರಾಮೇಶ್ವರ ಅವರ ತಂದೆ ತಾಯಿಗಳು ಕಾಯಕಜೀವಿಗಳು ಭಗವಂತನ ಪ್ರೇರಣೆ ಪಡೆದವರು, ಮಲ್ಲಿಕಾರ್ಜುನ ಧ್ಯಾನ ಮಾಡಿದವರು ಪರಮಾತ್ಮ ರೂಪವನ್ನು ಪಡೆದ ರೇವಣಸಿದ್ದೇಶ್ವರರ ಆಶೀರ್ವಾದದಿಂದಾಗಿ ಸಿದ್ಧರಾಮೇಶ್ವರರು ಜನಿಸಿದರು ಎಂದು ಹೇಳಿದರು. ಕಾಯಕವೇ ಕೈಲಾಸ ಎಂದುಕೊಂಡ ಸಿದ್ಧರಾಮೇಶ್ವರರು ಮಾದರಿಯಾಗಿ, ಸಾಹಿತಿಯಾಗಿ, ವಚನಕಾರರಾಗಿ, ಸಮಾಜ ಸುಧಾರಕರಾಗಿ ಅತ್ಯಂತ ಹೆಸರುವಾಸಿಯಾಗಿ ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರರು ದೇವರ ಅವತಾರ್ ಎಂತಿದ್ದಾರೆ. ಅವರ ನಡೆ ನುಡಿ ಆಚಾರ ವಾಚನಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸಬೇಕೆಂದು ಹೇಳಿದರು.

ಜಿಲ್ಲಾ ಬೋವಿ ವಡ್ಡರ್ ಸಮಾಜದ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಬಿ ಕುಸ್ತಿ ಮಾತನಾಡಿ, ಕಾಂಗ್ರೆಸ್ ಸರ್ಕಾರದಿಂದ ನಮ್ಮ ಸಮಾಜದ ಭವ್ಯವಾದ ಭವನ ಕಟ್ಟಲಿಕೆ 5 ಕೋಟಿ ಬಿಡುಗಡೆ ಆಗಿದೆ, ಇನ್ನು ಉಳಿದ ಹಣ ನೀಡಿ ಸಹಕಾರ ನೀಡಬೇಕೆಂದು ಶಾಸಕರಲ್ಲಿ ಮನವಿ ಮಾಡಿದರು.ಶ್ರೀ ಸಿದ್ದರಾಮೇಶ್ವರ ಸರ್ಕಾರಿ ಅರೆ ಸರ್ಕಾರಿ ಹಾಗೂ ನಿವೃತ್ತ ನೌಕರರ ಸಂಘದ ಅಧ್ಯಕ್ಷರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಶರಣಪ್ಪ ಗುಂಡುಗುರ್ತಿ ವಿಶೇಷ ಉಪನ್ಯಾಸ ನೀಡಿ ಸಿದ್ಧರಾಮೇಶ್ವರ ಜನ್ಮದ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ಜಗದೀಶ್ವರ ನಾಸಿ, ಸ್ವಾಗತಿಸಿದರು.ವೇದಿಕೆ ಮೇಲೆ ಅಪರ ಜಿಲ್ಲಾಧಿಕಾರಿಯಾದ ರಾಯಪ್ಪ ಹುಣಸಿಗಿ, ಜಿಲ್ಲಾಧಿಕಾರಿ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ, ಮಹಾನಗರ ಪಾಲಿಕೆ ಸದಸ್ಯರಾದ ಹೊನ್ನಮ್ಮ ಹಾಗರಗಿ, ತಿಪ್ಪಣ್ಣ ಒಡೆಯರ್, ಜಯಂತಿ ಜಿಲ್ಲಾಧ್ಯಕ್ಷರು ಸಂಜಯ್ ಮಂಜುಳಕರ್, ಗ್ಯಾ-ರೆಂಟಿ ಯೋಜನೆ ಸದಸ್ಯ ರಾಜು ಗುತ್ತೇದಾರ್ ಆಂದೋಲ ಹಾಗೂ ಬೋವಿ ಸಮಾಜದ ಮುಖಂಡರು ಇನ್ನಿತರರು ಉಪಸ್ಥಿತರಿದ್ದರು.

# ಮಧ್ಯವರ್ತಿಗಳಿಗೆ ಹಣ ನೀಡದಿರಲು ಸೂಚನೆ

ಕಲಬುರಗಿ,ಜ.14.(ಕರ್ನಾಟಕ ವಾರ್ತೆ)-ಆದ್ಯತಾ (ಬಿಪಿಎಲ್) ಪಡಿತರ ಚೀಟಿಗಳ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಪಡಿತರ ಚೀಟಿ ಅನುಮೋದನೆ ನೀಡುವ ಪ್ರಕ್ರಿಯೆಯು ಸಂಪೂರ್ಣ ಉಚಿತ ಸೇವೆಯಾಗಿರುತ್ತದೆ. ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಕಲಬುರಗಿ ತಾಲೂಕಿನ ಪಡಿತರ ಚೀಟಿ-ದಾರರು ಯಾವುದೇ ಕಾರಣಕ್ಕೂ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು ಹಾಗೂ ಯಾರಿಗೂ ಯಾವುದೇ ರೀತಿಯ ಹಣವನ್ನು ನೀಡಬಾರದೆಂದು ಕಲಬುರಗಿ ತಹಸೀಲ್ದಾರರಾದ ಕೆ. ಆನಂದಶೀಲ ಅವರು ತಿಳಿಸಿದ್ದಾರೆ.

ಆದ್ಯತಾ ಪಡಿತರ ಚೀಟಿ ಪಡೆಯಲು ಅರ್ಹರಿರುವ ಕುಟುಂಬಗಳಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಿದ ದಿನಾಂಕಗಳ ಹಿರಿತನದ ಆಧಾರದ ಮೇಲೆ ಪಡಿತರ ಚೀಟಿಗಳ ಅನುಮೋದನೆ ನೀಡಲಾಗುತ್ತಿದೆ. ತಮ್ಮ ಪಡಿತರ ಚೀಟಿ ಅರ್ಜಿಯ ಸ್ಥಿತಿಯನ್ನು https://ahara.karnataka.gov.in/fcs_verify_kser/Main.aspx ಲಿಂಕ ಬಳಸಿ ಪರಿಶೀಲಿಸಬಹುದು ಅಥವಾ ಖುದ್ದಾಗಿ ಕಲಬುರಗಿ ತಾಲೂಕಿನ ತಹಸೀಲ್ದಾರ ಕಚೇ-ರಿಯ ಆಹಾರ ಶಾಖೆಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಅವರು ತಿಳಿಸಿದ್ದಾರೆ.

# ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿ ರಕ್ಷಣಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ದತ್ತು ಪ್ರಕ್ರಿಯೆಗೆ ಒಳಪಡಿಸುವ ಹಿನ್ನೆಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಕಚೇರಿಯಲ್ಲಿ ರಕ್ಷಣಾಧಿಕಾರಿ (ಅಸಾಂಸ್ಥಿಕ) ಹುದ್ದೆಯನ್ನು ಮಿಷನ್ ವಾತ್ಸಲ್ಯ ಮಾರ್ಗಸೂಚಿ ಅನ್ವಯ ಅರ್ಹ ಅಭ್ಯರ್ಥಿಯನ್ನು ಬಾಹ್ಯಮೂಲದಿಂದ ಭರ್ತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ರಕ್ಷಣಾಧಿಕಾರಿ (ಅಸಾಂಸ್ಥಿಕ)-1 ಹುದ್ದೆಗೆ ಅರ್ಹ Post Graduate degree in Social Work/ Sociology/Child Development/Human Rights Public Administration./Psycology/ Psychiatry/Law/Public Health/ Community Resource Management From a recognized University ವಿದ್ಯಾರ್ಹತೆಯನ್ನು ಹೊಂದಿದ ಹಾಗೂ ಮಕ್ಕಳ ಕ್ಷೇತ್ರದಲ್ಲಿ 2 ವರ್ಷಗಳ ಅನುಭವ/ 1 ವರ್ಷ ಕಂಪ್ಯೂಟರ್ ತರಬೇತಿ ಪಡೆಯಬೇಕು.

ಅರ್ಹ ಅಭ್ಯರ್ಥಿಗಳು 2026ರ ಜನವರಿ 23ರೊಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಂದ್ರಶೇಖರ ಪಾಟೀಲ

ಕ್ರೀಡಾಂಗಣದ ಎದುರುಗಡೆ, ಕಲಬುರಗಿ, ಇಲ್ಲಿ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-243219 ಗೆ ಸಂಪರ್ಕಿಸಲು ಕೋರಲಾಗಿದೆ.

# ಮಹಿಳಾ ನೌಕರರಿಗೆ ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ನಾನಾ ಕಾರ್ಮಿಕ ಕಾಯ್ದೆಗಳಡಿಯಲ್ಲಿ ನೋಂದಣಿಯಾಗಿರುವ ಕಲಬುರಗಿ ಜಿಲ್ಲೆಯ ಎಲ್ಲ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ (ಉದ್ಯೋಗದಾತರಿಗೆ) ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯವನ್ನು ನೀಡಬೇಕೆಂದು ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ 1966, ಮತ್ತು ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರಡಿ ನೋಂದಣಿಯಾಗಿರುವ ಎಲ್ಲ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲ ಕಾಯಂ/ಗುತ್ತಿಗೆ/ ಹೊರಗುತ್ತಿಗೆ ಮಹಿಳಾ ಕಾರ್ಮಿಕರುಗಳಿಗೆ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉದ್ಯೋಗದಾತರು ಒದಗಿಸುವಂತೆ ಸರಕಾರವು ಆದೇಶಿಸಿದ್ದು, ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳುವುದು ಮತ್ತು ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ಯಾವುದೇ ವೈದ್ಯಕೀಯ ಪ್ರಮಾಣಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲವೆಂದು ಅವರು ತಿಳಿಸಿದ್ದಾರೆ.

# ಅತೀ ಸಣ್ಣ ಉದ್ದಿಮೆದಾರರಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ, ಚಿತ್ತಾಪುರ ಹೋಬಳಿ, ಪಿ. ಚಿತ್ತಾಪುರ ಗ್ರಾಮದ ಸರ್ವೆ ನಂ. 14/1/1, 18, 27/1, 27/2, 27/3, 30/1 ಮತ್ತು 30/3 ರಲ್ಲಿ 31.03 ಎಕರೆ ಪ್ರದೇಶದಲ್ಲಿ ನೂತನವಾಗಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕೈಗಾರಿಕೆ ನಿವೇಶನಗಳ ಹಂಚಿಕೆಗಾಗಿ (ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಲು) ಆಸಕ್ತಿಯುಳ್ಳ ಸಣ್ಣ/ಅತೀ ಸಣ್ಣ ಉದ್ದಿಮೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ. ಕೈಗಾರಿಕಾ ನಿವೇಶನಗಳ ಹಂಚಿಕೆಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ಹಂಚಿಕೆ ಪ್ರಕಟಣೆ ಸಂಖ್ಯೆ:ಸಮನ್ವಯ:ಕ.ವಿ:ಹೊಸ ಕೈ.ವ:ನಿವೇಶನ:ಹಂಚಿಕೆ:ಪ್ರಕಟಣೆ:2025, ದಿನಾಂಕ30-12-2025ರಂದು ಪ್ರಕಟಣೆ ಹೊರಡಿಸಿದ್ದು, ಸದರಿ ಪ್ರಕಟಣೆಯಲ್ಲಿ ನಿವೇಶನಗಳ ಸಂಖ್ಯೆ, ನಿವೇಶನಗಳ ವಿಸ್ತೀರ್ಣ, ನಿವೇಶನಗಳ ದರ, ಮೀಸಲಾತಿ, ಮತ್ತು ಅರ್ಜಿ ಜೊತೆ ಪಾವತಿಸಬೇಕಾದ ಭದ್ರತಾ ಠೇವಣಿ/ ಇ.ಎಮ್.ಡಿ. (EMD) ವಿವರಗಳೊಂದಿಗೆ ಪ್ರಕಟಿಸಲಾಗಿದೆ. ನಿವೇಶನಗಳ ಪ್ರಕಟಣೆ ವಿವರ, ನಿಗಧಿತ ಅರ್ಜಿ ನಮೂನೆ, ನಿಯಮ ಮತ್ತು ನಿಬಂಧನೆ ಹಾಗೂ ಇತರೆ ವಿವರಗಳನ್ನು ನಿಗಮದ www.kssidc.co.in ವೆಬ್‌ಸೈಟ್‌ದಿಂದ ಪಡೆಯಬಹುದಾಗಿದೆ.

## ಜನವರಿ 15 ಮತ್ತು 16ರಂದು ಶಿಕ್ಷಕ ಕವಿಗೋಷ್ಠಿ



• **ಮಲ್ಲಮ್ಮ ನುಡಿ ವಾರ್ತೆ,ಬೀದರ:**

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಸಸ್ತಾಪುರದ ಶ್ರೀ ಸದ್ಗುರು ಎಲ್ಲಾ ಲಿಂಗೇಶ್ವರ ಆನಂದ ಆಶ್ರಮದಲ್ಲಿ ಜನವರಿ ತಿಂಗಳ 15 ಮತ್ತು 16ರಂದು ಶಿಕ್ಷಕ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ. ಈ ಒಂದು ಕಾರ್ಯಕ್ರಮಕ್ಕೆ ಹುಮ್ನಾಬಾದ್ ತಾಲೂಕಿನ ಶಿಕ್ಷಕರಾದ ಶಿವರಾಜ್ ಮೈತ್ರಿ ಅವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಪ್ರಯುಕ್ತ ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾಧ್ಯಕ್ಷರಾದ ಸಾರಿಕಾ ಗಂಗಾ ಹುಮ್ನಾಬಾದ್ ತಾಲೂಕಿನ ಅಧ್ಯಕ್ಷರಾದ ಶ್ರೀಮತಿ ಶ್ರೀಮತಿಬಾಯಿ ಬಿ. ರೆಡ್ಡಿ ಮತ್ತು ಚಿಟಗುಪ್ಪ ತಾಲೂಕಿನ ಅಧ್ಯಕ್ಷರಾದ ಪ್ರಮೀಳಾ ರೆಡ್ಡಿ ಹಾಗೂ ಸಂಘದ ಸದಸ್ಯರು ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶಿವರಾಜ್ ಮೇತ್ರೆ ರವರಿಗೆ ಕಾರ್ಯಕ್ರಮಲ್ಲಿ ಸನ್ಮಾನಿಸಿ ಕವಿಗೋಷ್ಠಿ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸುನೀತಾ ಪಾಟೀಲ್, ಪ್ರೇಮಾ ನೆಲವಾಳೆ, ಮಹಾದೇವಿ ಶೀಲವಂತ, ಸುಜಾತ ಬಡಿಗೇರ್, ಪ್ರತಿಭಾ ರೆಡ್ಡಿ, ಜೈ ಶ್ರೀ ಕಾಳಗಿ, ರೇವತಿ ಮತ್ತು ಕವಿತಾಇತರರು ಇದ್ದರು.

## ಸಂಗಮ ದೇವಸ್ಥಾನದ ಅಭಿವೃದ್ಧಿಗೆ ಸರ್ಕಾರ ಮುಂದಾಗಲಿ: ಶಾಸಕ ಶರಣಗೌಡ ಕಂದಕೂರ

• **ಮಲ್ಲಮ್ಮ ನುಡಿ ವಾತೆ,ಯಾದಗಿರಿ:**

ವಡಗೇರಾ: ತಾಲೂಕಿನ ಸಂಗಮದ ಸಂಗಮೇಶ್ವರ ದೇವಸ್ಥಾನವು ಅತ್ಯಂತ ಐತಿಹಾಸಿಕ ದೇವಸ್ಥಾನವಾಗಿದ್ದು ಸರ್ಕಾರ ಈ ಸ್ಥಳದ ಅಭಿವೃದ್ಧಿಗೆ ಮುಂದಾಗಬೇಕು ಎಂದು ಗುರುಮಿಟ್ಕಲ್ ಶಾಸಕ ಶರಣಗೌಡ ಕಂದುಕೂರ ಹೇಳಿದರು. ವಡಗೇರಾ ತಾಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ಜಾತ್ರಾ ಮಹೋತ್ಸವದ ಧರ್ಮಸಭೆ, ಹಾಗೂ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐವರು ಸಾಧಕರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜಕ್ಕೆ ಮಠ ಮಂದಿರಗಳ ಕೊಡುಗೆ ಅಪಾರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ನೆಮ್ಮದಿ ವೃದ್ಧಿ ಮಠ ಮಂದಿರ ಬೆಳವಣಿಗೆಗೆ ಭಕ್ತರ ಸಹಕಾರ ಅತ್ಯಂತ ಮುಖ್ಯವಾಗಿದೆ ಕರುಣೇಶ್ವರ ಶ್ರೀಗಳು ಸಂಗಮ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಇಲ್ಲಿ ಉತ್ತಮವಾದ ವಾತಾವರಣವನ್ನು ನಿರ್ಮಿಸಿದ್ದಾರೆ. ಮಹಿಳೆಯರನ್ನು ಪ್ರತಿಯೊಬ್ಬರು ಪೂಜ್ಯಭಾವನೆಯಿಂದ ಕಾಣಬೇಕು ಮಹಿಳೆಯರಿಗೆ ನಮ್ಮ ದೇಶದಲ್ಲಿ ತುಂಬಾ ಗೌರವ ಇದೆ ಎಂದರು ಸಿದ್ದಗಂಗಾ ಮಠದ ಶ್ರೀಗಳಿಗೂ ಮತ್ತು ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಗೂ ಅವಿನಾಭಾವ ಸಂಬಂಧವಿದೆ ಸಂಗಮೇಶ್ವರ ದೇವಸ್ಥಾನದ ಅಭಿವೃದ್ಧಿಗೆ ನಾನು ಒಬ್ಬ ಸಾಮಾನ್ಯ ಭಕ್ತನಾಗಿ ಶ್ರಮಿಸುವುದರ ಜೊತೆಗೆ ದೇವಸ್ಥಾನದಲ್ಲಿ ಹಮ್ಮಿಕೊಳ್ಳುವ ಸಾಮಾಜಿಕ ಧಾರ್ಮಿಕ ಕಾರ್ಯಗಳಿಗೆ ಸದಾ ಕಾಲ ಬೆಂಬಲವಾಗಿ ಶ್ರೀ ಕರುಣೇಶ್ವರ ಮಹಾಸ್ವಾಮಿಗಳ ಜೊತೆಗೆ ಇರುವುದಾಗಿ ಹೇಳಿದರು. ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷೆ ಮಹದೇವಿ



ಬೇವಿನಾಳ ಮಠ ಮಾತನಾಡಿ. ಮಹಿಳೆಯರಿಗೆ ಉಡಿ ತುಂಬುವುದು ಮಹಿಳೆಯರಿಂದ ಹುಚ್ಚಾಗಿ ಎಳೆಸುವ ಕಾರ್ಯ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸಂಗಮ ಸಿರಿ ಪ್ರಶಸ್ತಿ ಪ್ರಧಾನದ ಹಮ್ಮಿಕೊಂಡಿರುವ ಶ್ರೀಗಳ ಕಾರ್ಯವು ಅತ್ಯಂತ ಅಮೂಲ್ಯವಾಗಿದೆ ಸರ್ಕಾರ ಮತ್ತು ಸಚಿವರು ಶಾಸಕರು ಸುಕ್ಷೇತ್ರ ಐತಿಹಾಸಿಕ ಸಂಗಮಧ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದರು. ಮಹಿಳೆಯರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಜೊತೆಗೆ ಸಂಸ್ಕಾರ ನೀಡಬೇಕು ಮಕ್ಕಳ ಕೈಗೆ ಮೊಬೈಲ್ ನೀಡದಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಶಿವರಾಜ್ ಪಾಟೀಲ್ ಗುರ್ಜಾಲ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕೃಷ್ಣವೇಣಿ ಭೀಮಾ ಸಂಗಮದ ಪರಮ ಪೂಜ್ಯ ಶ್ರೀ ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಂದನಕೆರಾದ ಪರಮಪೂಜ್ಯ ಬನದರಾಚೊಟ್ಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು. ಇದೆ ಸಮಯದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸಂಗಮ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಂತರ ಸಾಯಂಕಾಲ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಕಾರ್ಯಕ್ರಮದಲ್ಲಿ.

ವೇದಮೂರ್ತಿ ವೀರಭದ್ರಯ್ಯಸ್ವಾಮಿ ದೇವಸುಗೂರ, ಶಿವರುದ್ರಯ್ಯ ಶಾಸ್ತ್ರಿಗಳು, ಬಸಯ್ಯಸ್ವಾಮಿ ಶಿವಪುರ, ಶಿವಯ್ಯ ಸ್ವಾಮಿ ಸಾತಕೇಡ, ಸಿದ್ದ ಬಸಯ್ಯಸ್ವಾಮಿ ಶಿವಪೂರ, ವಿಶ್ವನಾಥ್ ರೆಡ್ಡಿ ಗೊಂದೆಡಗಿ, ಬಸವಂತರಾಯಗೌಡ ಸೈದಾಪುರ, ಮಲ್ಲನಗೌಡ ಕೌಳುರ, ಮಲ್ಲಿಕಾರ್ಜುನ್ ಸತ್ಯಂಪೇಟೆ, ಮಲ್ಲಣ್ಣ ಐಕೂರ, ಮಲ್ಲಿಕಾರ್ಜುನ್ ಕರಿಕಳ್ಳಿ, ಬಾಶುಮಿಯಾ ನಾಯ್ಕೊಡಿ, ಚಂದ್ರುಗೌಡ ಸೈದಾಪುರ, ಪಂಪನಗೌಡ ಸಿರವಾರ ಮತ್ತು ಸಂಗಮೇಶ್ವರ ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಮಹಿಳೆಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ್ ರೆಡ್ಡಿಗೌಡ ಬೆನಕನಳ್ಳಿ ಸ್ವಾಗತಿಸಿದರು. ಶಿಕ್ಷಕ ಮೌನೇಶ್ ವಿಶ್ವಕರ್ಮ ನಿರೂಪಿಸಿ, ವಂದಿಸಿದರು.

## ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಮಹಾಪುರುಷ: ಹಳ್ಳೆಪ್ಪ ಧೋತ್ರೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸರ್ವ ಧರ್ಮಗಳನ್ನು ಸಮಾನವಾಗಿ 12ನೇ ಶತಮಾನದಲ್ಲಿ ತನ್ನ ಜೀವನವನ್ನೇ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಮಹಾಪುರುಷ ಎಂದು ಭೋವಿ ವಡ್ಡರ ಸಮಾಜದ ಜಿಲ್ಲಾ ಖಜಂಚಿಯಾದ ಹಳ್ಳೆಪ್ಪ ಧೋತ್ರೆ ಹೇಳಿದರು. ಕಿಲ್ಲನಕೇರಾದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಿವಯೋಗಿ ಸಿದ್ದರಾಮೇಶ್ವರ ಜಯಂತೋತ್ಸವದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಮಾತನಾಡಿ ಹೇಳಿದರು. ನಾಡಿನಲ್ಲಿ ಬಿಕಾರವಾದ ಬರಗಾಲ ಬಿದ್ದಿದಾ ಸಮಯದಲ್ಲಿ ರೈತರಿಗೆ ಕಷ್ಟದ ಸಮಯದಲ್ಲಿ ಶ್ರೀ ಗುರು ಸಿದ್ದರಾಮೇಶ್ವರರವರು ನಮ್ಮ ವಡ್ಡರ ಸಮಾಜದವರನ್ನು ಹಿಡಿದುಕೊಂಡು ಬೃಹತ್ಕಾರದ ಕೆರೆಯನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿ ರೈತರಿಗೆ ನೀರು ಹಂಚಿಕೆ ಮಾಡಿ ರೈತರ ಮುಖದಲ್ಲಿ ಉಲ್ಲಾಸ ಉತ್ಸಾಹವನ್ನು ಆನಂದ ಪಡೆದು ಕಾಯಕಯೋಗಿ ಶರಣರು ಎಂದು ಹನಿಸಿಕೊಂಡಿದ್ದಾರೆ ಎಂದರು ಈ ಸಂದರ್ಭದಲ್ಲಿ ಭೋವಿ ಸಮಾಜದ ಹಿರಿಯ ಮುಖಂಡರಾದ ಹಣಮಂತ ಧೋತ್ರೆ, ಬಸವಲಿಂಗ ಧೋತ್ರೆ, ಶಿಕ್ಷಕ ಮನ್ಸೂರ್, ಅತಿಥಿ ಶಿಕ್ಷಕ ಶರಣಪ್ಪ, ನಾಗೇಶ ಧೋತ್ರೆ, ಉಮೇಶ ಧೋತ್ರೆ, ವಂದನಾ ಧೋತ್ರೆ, ಸುನಿಲ್ ಧೋತ್ರೆ, ರವಿ ಧೋತ್ರೆ, ಮನೋಜ್ ಧೋತ್ರೆ, ಬಾಬು, ಬಾಲಾಪ್ಪ ಪೂಜಾರಿ ಮತ್ತು ಶಾಲೆಯ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಹಿಂದೂಗಳು ಭಾರತ ಮಾತೆ ರಕ್ಷಣೆಗೆ ಸದಾಸಿದ್ದ

• **ಮಲ್ಲಮ್ಮ ನುಡಿ ವಾರ್ತೆಕಮಲನಗರ:**

ಹಿಂದೂಗಳು ಭಾರತ ಮಾತೆ ರಕ್ಷಣೆ ಸದಾಸಿದ್ದರು, ದೇಶದ ಏಕತೆ ಮತ್ತು ಪರಂಪರೆ ಕಾಪಾಡಲು

ಹಿಂದೂಸ್ಥಾನದಲ್ಲಿರುವ ನಾವೇಲ್ಲರೂ ಹಿಂದುಗಳು ನಾವು ಒಳ್ಳೆಯವರೊಂದಿಗೆ ಸಂಪರ್ಕ ಹೊಂದಬೇಕು. ಹಿಂದೂಗಳು ಭಾರತ ರಕ್ಷಣೆಗೆ ಸದಾಸಿದ್ದರಾಗ ಬೇಕು ಎಂದು ಶಂಭುಲಿಂಗ ಶಿವಾಚಾರ್ಯ ನುಡಿದರು.

ತಾಲೂಕಿನ ಕೋಟಗ್ಯಾಳ ಗ್ರಾಮದ ಮಹಾದೇವ ಮಂದಿರದ ಆವರಣದಲ್ಲಿ ಇತ್ತೀಚಿಗೆ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮಕ್ಕೆ ಚಾಲನೆ ನೀಡಿ

ಅವರು ಮಾತನಾಡಿದರು. ಹಿಂದೂಗಳಿಂದ ದೇಶದ ಸಂಸ್ಕೃತಿ ಬೆಳೆದಿದೆ. ಭಾರತೀಯ ಸಂಸ್ಕೃತಿ ಜಗತ್ತಿಗೆ ಒಳ್ಳೆಯದನ್ನು ಮಾಡಿದೆ. ಹಿಂದೂ ಸಂಘಟನೆ, ಜಾಗೃತಿಯಿಂದ ಜಗತ್ತಿಗೆ ಒಳ್ಳೆಯದಾಗಿದೆ. ಹಿಂದೂ ಸಮಾಜ ಒಂದಾಗಿ ಸಮಾನತೆಯಿಂದ ಬಾಳಬೇಕು ಎಂದು ಹೇಳಿದರು.

ಹಿಂದೂ ಸಂಸ್ಕೃತಿಯು ಬದುಕಿಸುವ ಸಂಸ್ಕೃತಿ, ಧರ್ಮ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಎಲ್ಲರೂ ಸ್ವಾಭಿಮಾನ, ಭಾಷಾಭಿಮಾನ, ದೇಶಾಭಿಮಾನ, ಧರ್ಮಾಭಿಮಾನ ಹೊಂದಬೇಕು. ಹಿಂದೂಗಳು ನಾವುಗಳೆಲ್ಲ ಒಂದೇ ಎನ್ನುವ ಭಾವ ಮೂಡಬೇಕು ಎಂದರು.

ಈ ಸಂದರ್ಭದಲ್ಲಿ ಉದಗೀರನ ವಕ್ತಾರ ಜಿಲ್ಲಾ ಪ್ರಚಾರಕ ರಾಜೇಂದ್ರ ಸಂಗ್ರಾಮ ಬಿರಾದಾರ, ಬಾಲಾಜಿ ಪಾಟೀಲ, ಸಿದ್ದಯ್ಯ ಸ್ವಾಮಿ, ಮಷ್ಣಪ್ಪ ಮೇತ್ರೆ, ರಾಜೇಂದ್ರ ಬಿರಾದಾರ, ಗಣೇಶ ಕಾರೆಗಾವೆ, ಶೈಲೇಶ ಪೇನೆ,

ಮಹಾದೇವ ಹಜನಾಳೆ ಸೇರಿದಂತೆ ಅನೇಕರು ಇದ್ದರು.




## ಸಿದ್ದರಾಮೇಶ್ವರವರ ವಚನಗಳು ಜೀವನದಲ್ಲಿ ಅನುಸರಿಸಿ: ಸತೀಶ್



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

12ನೇ ಶತಮಾನದಲ್ಲಿ ಪ್ರಪಂಚದಲ್ಲಿ ನಡೆಯುವ ತಪ್ಪುಗಳನ್ನು ವಚನದ ಮೂಲಕ ಸಾರಿ ಜನರ ಜೀವನವನ್ನೇ ಬದಲು ಮಾಡಿದ ಮಹಾಕ್ರಾಂತಿಕಾರಿ ವಚನಕಾರರು ಎಂದು ಭೋವಿ ವಡ್ಡರ ಯುವ ಘಟಕದ ಗುರುಮಿಟ್ಕಲ್ ತಾಲೂಕ ಪ್ರಧಾನ ಕಾರ್ಯದರ್ಶಿ ಸತೀಶ್ ಕಣೆಕಲ್ ಹೇಳಿದರು. ಗುರುಮಿಟಕಲ್ ತಾಲೂಕಿನ ಕಣೆಕಲ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಿವಯೋಗಿ ಶ್ರೀ ಸಿದ್ದರಾಮೇಶ್ವರವರ ಜಯಂತೋತ್ಸವ ದಲ್ಲಿ ಮಾತನಾಡಿ ಹೇಳಿದರು. ಅನುಭವ ಮಂಟಪದಲ್ಲಿ ಮೂರನೇ ಪೀಠಾಧಿಪತಿಯಾಗಿ ಸಮಾಜದ ಅಂಕಗಳನ್ನು ತಿದ್ದಿ ಕಾಯಕಯೋಗಿ, ಕರ್ಮಯೋಗಿ, ಶಿವಯೋಗಿ ಎಂದೇ ಪ್ರಖ್ಯಾತಿ ಪಡೆದು ಜಾತಿ ಅಸಮಾನತೆ ಮೇಲು ಕೇಳು ಗಂಡು ಹೆಣ್ಣು ಎಂಬ ವಿಚಾರಗಳನ್ನು ಸಮಾಜಕ್ಕೆ ತಿಳಿಸಿ ಸಮಾನತೆಯನ್ನು ತೋರಿದ ಕ್ರಾಂತಿಕಾರಿ ವಚನಕಾರ ಎಂದು ಪ್ರಸಿದ್ಧಿಯನ್ನು ಪಡೆದುಕೊಂಡಿರುವಂತವರು ಎಂದು ಹೇಳಿದರು ಈ ಸಂದರ್ಭದಲ್ಲಿ ಭೋವಿ ಸಮಾಜದ ಮುಖಂಡರಾದ ತಾಯಪ್ಪ, ಮಹೇಶ, ಶಾಲೆಯ ಪ್ರಭಾರಿ ಮುಖ್ಯ ಗುರು ಕು. ರೇಷ್ಮಾ, ಶಿಕ್ಷಕಿ ಶ್ರೀಮತಿ ಶಿಲ್ಪ ಅತಿಥಿ ಶಿಕ್ಷಕರಾದ ಯಂಕಪ್ಪ, ವೀರೇಶ್, ಮಲ್ಲೇಶ್, ಪ್ರಿಯಾಂಕ ಹಾಗೂ ಶಾಲಾ ವಿದ್ಯಾರ್ಥಿನಿಯರು ಗ್ರಾಮದ ಮುಖಂಡರು ಇದ್ದರು.



ಬಸವಕಲ್ಯಾಣ:–ನಗರ ಹಾಗೂ ಗ್ರಾಮಿಣ ಪ್ರದೇಶಗಳಲ್ಲಿ ಹಿಂದು ಸಮಾಜದ ಪವಿತ್ರ ಹಬ್ಬವಾದ ಮಕರ ಸಂಕ್ರಾಂತಿ ಯ ಮುನ್ನ ದಿನದೊಂದು ಭೋಗಿ ನಿಮಿತ್ಯವಾಗಿ ವಿವಿಧ ಬಡಾವಣೆಗಳ ನಿವಾಸಿಗಳ ಮನೆ ಮುಂದೆ ಸುಂದರ ವಾಗಿ ತೆಗೆದ ರಂಗೋಲಿ ಚಿತ್ರಗಳು ನೋಡುಗರ ಗಮನ ಸೆಳೆಯುವಂತಿದವು.

## ಸರ್ಕಾರಿ ನೌಕರರ ಕ್ರೀಡಾ-ಕೂಟ ಮುಂದೂಡಿಕೆ

• **ಮಲ್ಲಮ್ಮ ನುಡಿ ವಾರ್ತೆ. ಕಲಬುರಗಿ:**

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಇವುಗಳ ಸಹಯೋಗದಲ್ಲಿ ಕಲಬುರಗಿಯಲ್ಲಿ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣ ಜನವರಿ 16 ಮತ್ತು 17 ರಂದು ಹಮ್ಮಿಕೊಳ್ಳಲಾಗಿದ್ದ 2025–26 ನೇ ಸಾಲಿನ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾ–ಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯನ್ನು ಮುಂದೂಡಲಾಗಿದ್ದು, ಕ್ರೀಡಾಕೂಟ ನಡೆಯುವ ದಿನಾಂಕವನ್ನು ನಂತರ ತಿಳಿಸಲಾಗುತ್ತದೆ ಎಂದು ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಹಿರಾಸಿಂಗ್ ಆದರ್ಶ ದಂಪತಿಗೆ ಪುರಸ್ಕಾರ



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:**

ಇಲ್ಲಿನ ಜೆ.ಬಿ.ಕೆ ಪ್ರೌಢ ಶಾಲೆಯ ದೈಹಿಕ ಶಿಕ್ಷಕರಾದ ಹಿರಾಸಿಂಗ್ ಭೋವಿ ದಂಪತಿಗೆ 2025–26 ಸಾಲಿನಲ್ಲಿ ಬೀದರ ಸರ್ಕಾರಿ ನೌಕರರ ಭವನದಲ್ಲಿ ಕರ್ನಾಟಕ ಶಿಕ್ಷಕರ ಸಂಘಗಳ ಪರಿಷತ್ತ (ರಿ) ದಾರವಾಡ ಹಾಗೂ ಕಲ್ಯಾಣ ಕರ್ನಾಟಕ ಪ್ರಾಢಶಾಲಾ ಶಿಕ್ಷಕರ ಸಂಘದ ಸಂಯುಕ್ತ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಮಾತೂ ಶ್ರೀ ರಮಾಬಾಯಿ ಅಂಬೇಡ್ಕರ್ ಅವರ ಹೆಸರಿನಲ್ಲಿ ಆದಶ್ರ್ಯ ದಂಪತಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಯಾಣ ಕರ್ನಾಟಕದ ಪ್ರಾಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಪಾಂಡುರಂಗ ಬೆಲ್ದಾರ್.

ದಿವ್ಯ ಸಾನಿಧ್ಯ ಪೂಜ್ಯ ಶ್ರೀ ಡಾ . ಸಿದ್ರಾಮ ಶರಣರು ಬೆಲ್ದಾಳ. ಮುಖ್ಯ ಅತಿಥಿಗಳಾಗಿ ರಾಜ್ಯಾಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಮೇಶ ಡಿ. ಖನ್ನಿನಾಯಕರ್. ಸಂಘದ ಪದಾಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಇವರ ಆಯ್ಕೆಗೆ ಸಂಸ್ಥೆಯ ಅಧ್ಯಕ್ಷರಾದ ಹುಲಸೂರಿನ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿಗಳು ಸಿಬ್ಬಂದಿ ವರ್ಗದವರು ಸೇರಿದಂತೆ ಅನೇಕರು ಅಭಿನಂದನೆ ಸಲ್ಲಿಸಿದರು.

## 47 ವಾಹನಗಳು ಬಹಿರಂಗ ಹರಾಜಿನ ಮೂಲಕ ವಿಲೇವಾರಿ

**ಮಲ್ಲಮ್ಮ ನುಡಿ ವಾರ್ತೆ. ಕಲಬುರಗಿ:**

ಕಲಬುರಗಿ ಅಬಕಾರಿ ನಿರೀಕ್ಷಕರ ಕಚೇರಿ ವಲಯ ನಂ.1 ಮತ್ತು 2ರಲ್ಲಿ ಹಾಗೂ ಚಿತ್ತಾಪುರ, ಸೇಡಂ ಮತ್ತು ಚಿಂಚೋಳಿ ಅಬಕಾರಿ ನಿರೀಕ್ಷಕರ ವಲಯ ಕಚೇರಿಗಳಲ್ಲಿರುವ ವಿವಿಧ ಮಾದರಿಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಒಟ್ಟು 47 ವಿವಿಧ ಮಾದರಿಯ ವಾಹನಗಳನ್ನು ಕೆಲವು ಷರತ್ತುಗೊಳಪಟ್ಟು ಆಯಾ ವಲಯಗಳ ಅಬಕಾರಿ ನಿರೀಕ್ಷಕರ ಕಚೇರಿಗಳಲ್ಲಿ ಕೆಳಕಂಡ ದಿನಾಂಕಗಳಂದು ಅಂ–ದು ಬೆಳಿಗ್ಗೆ 11.30 ಮಧ್ಯಾಹ್ನ 1.30 ಗಂಟೆಯವರೆಗೆ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುತ್ತದೆ ಎಂದು ಕಲಬುರಗಿ ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ. ಬಹಿರಂಗ ಹರಾಜು ಮಾಡುವ ದಿನಾಂಕ ಹಾಗೂ ಸ್ಥಳದ ವಿವರ ಇಂತಿದೆ. ಜನವರಿ 28ರಂದು: ಕಲಬುರಗಿ ಅಬಕಾರಿ ನಿರೀಕ್ಷಕರ ವಲಯ ನಂ. 2ರ ಕಚೇರಿಯಲ್ಲಿ (ಅಬಕಾರಿ ವಲಯ ನಂ.1ರ ಕಚೇರಿಯ 05 ವಾಹನಗಳು) ಹಾಗೂ ಚಿತ್ತಾಪುರ ಅಬಕಾರಿ ನಿರೀಕ್ಷಕರ ವಲಯ ಕಚೇರಿಯಲ್ಲಿ 19 ವಾಹನಗಳು. ಜನವರಿ 29ರಂದು: ಕಲಬುರಗಿ ಅಬಕಾರಿ ನಿರೀಕ್ಷಕರ ವಲಯ ನಂ. 2ರ ಕಚೇರಿಯಲ್ಲಿ 07 ವಾಹನಗಳು ಹಾಗೂ ಸೇಡಂ ಅಬಕಾರಿ ನಿರೀಕ್ಷಕರ ವಲಯ ಕಚೇರಿಯಲ್ಲಿ 11 ವಾಹನಗಳು. ಜನವರಿ 30ರಂದು: ಚಿಂಚೋಳಿ ಅಬಕಾರಿ ನಿರೀಕ್ಷಕರ ವಲಯ ಕಚೇರಿಯಲ್ಲಿ 05 ವಾಹನಗಳು.

ಹುಮನಾಬಾದ: ಸಾವಿತ್ರಿಬಾಯಿ ಫುಲೆ ಮತ್ತು ಶೇಕ್ ಫಾತಿಮಾಅವರ ಜಯಂತಿ ಕಾರ್ಯಕ್ರಮದ ನಿಮಿತ್ತ ರಾಜ್ಯಮಟ್ಟದ ಪ್ರಶಸ್ತಿ ಸಮಾಜ ಸೇವೆ ರತ್ನ ಪ್ರಶಸ್ತಿಯನ್ನು ಸಮಾಜ ಸೇವೆಯಲ್ಲಿ ನಿರಂತರವಾಗಿ ಭೀಮರೆಡ್ಡಿ ಸಿಂಧನಕೇರಾರವರು ಸೇವೆ ಸಲ್ಲಿಸುತ್ತಿರುವುದನ್ನು ಮನಗಂಡು ಬೀದರಿನ ನೌಕರರ ಭವನದಲ್ಲಿ ಕರ್ನಾಟಕ ಶಿಕ್ಷಕರ ಸಂಘ (ರಿ) ಧಾರವಾಡ ಕನ್ಯಾಣ ಕರ್ನಾಟಕ ಫ್ರೌಢ ಶಾಲೆ ಶಿಕ್ಷಕರ ಸಂಘ (ರಿ) ಶ್ರೀ ಪಾಂಡುರಂಗ ಬೆಲ್ಲದ ಹಾಗೂ ರಾಜ್ಯಾಧ್ಯಕ್ಷ ಕರ್ನಾಟಕ ಶಿಕ್ಷಕರ ಸಂಘಗಳ ಪರಿಷತ್ ಧಾರವಾಡ ಶ್ರೀ ಸಂಗಮೇಶ್ ಡಿ ಡಿ. ಬನ್ನಿ ನಾಯಕರು ಭೀಮರೆಡ್ಡಿ ಸಿಂಧನಕೇರಾ ರವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

(ಮಲ್ಲಮ್ಮ ನುಡಿ ಚಿತ್ರ)



## ಚಂದ್ರಿಕಿ ಗ್ರಾಮ ಪಂಚಾಯಿತಿಗೆ ಸಿಇಓ ಬೇಟಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಗುರುಮಠಕಲ್ ತಾಲೂಕಿನ ಚಂಡ್ರಿಕಿ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳಾದ ಮಾನ್ಯ ಶ್ರೀ ಲವೀಶ್ ಒರಾಡಿಯ ಅವರು ಭೇಟಿ ನೀಡಿದರು.

ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಮತ್ತು ಅಧ್ಯಕ್ಷರ ಜೊತೆ ಕುಂದುಕೊರತೆ ಸಭೆ ನಡೆಸಿದರು.

ನಂತರ ಶುದ್ಧ ಕುಡಿಯುವ ನೀರಿನ ಘಟಕ ಪರಿಶೀಲಿಸಿದರು. ಅಂಗನವಾಡಿ ಕೇಂದ್ರಗಳು, ಗ್ರಂಥಾಲಯಗಳು, ಸರ್ಕಾರಿ ಉರ್ದು ಶಾಲೆ ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಕಂಪ್ಯೂಟರ್ ಲ್ಯಾಬ್, ಸೈನ್ಸ್ ಲ್ಯಾಬ್, ಪ್ರೊಜೆಕ್ಟರ್ ವೀಕ್ಷಿಸಿದರು. ಅಡುಗೆ ಕೋಣೆಗೆ ಭೇಟಿ ನೀಡಿ ತೊಗರಿ, ಅಕ್ಕಿ ಪರೀಕ್ಷಿಸಿದರು. ಬಿಸಿಊಟ ಮಕ್ಕಳಿಂದ ಮಾಹಿತಿ ಪಡೆದರು. ಗ್ರಂಥಾಲಯಗಳಿಗೆ ಭೇಟಿ ನೀಡಿ ಶುದ್ಧ ಕುಡಿಯುವ ನೀರಿನ ಯಂತ್ರ ತಪಾಸಣೆ ನಡೆಸಿದರು. ಶಾಲೆಯ ಪ್ರತಿಯೊಂದು ಕೊಠಡಿಗೆ ಭೇಟಿ ನೀಡಿ, ವಿದ್ಯುತ್ ಸೌಕರ್ಯ ಕಲ್ಪಿಸಿರುವ ಕುರಿತು ಮಾಹಿತಿ ಪಡೆದರು, ಶುದ್ಧ ಕುಡಿಯುವ ನೀರಿನ ಘಟಕ ಕಾರ್ಯಾಚರಣೆ ಕುರಿತು ವಿಕ್ಷಿಸಿದರು. ಸರ್ಕಾರಿ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿ ಮೂಲ ಸೌಕರ್ಯಗಳ ಕುರಿತು ವೀಕ್ಷಿಸಿದರು. ಸಮುದಾಯ ಶೌಚಾಲಯ ಕಟ್ಟಡಕ್ಕೆ ಗುರುತಿಸಿರುವ ಜಾಗ ಪರಿಶೀಲನೆ ನಡೆಸಿ ಕೂಡಲೇ ಕಟ್ಟಡ ಕಾಮಗಾರಿ ಆರಂಭಿಸುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಗುರುಮಠಕಲ್ ತಾಲೂಕು ಪಂಚಾಯಿತಿಯ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಅಂಬರೀಶ್ ಪಾಟೀಲ್ ಸರ್ ಮತ್ತು ತಾಲೂಕು ಸಹಾಯಕ ನಿರ್ದೇಶಕರಾದ ಮಾನ್ಯ ರಾಮಚಂದ್ರ ಬಸೂದೆ, ಪಿಡಿಓ ಶ್ರೀಮತಿ ಗೀತಾ, ಟಿಸಿ ಮುಜಾಮಿಲ್, ಟಿಐಇಸಿ ರಾಘವೇಂದ್ರ, ಜೆಎಇ ವಿಜಯ್ ಆಲೆಮನೆ ಸೇರಿದಂತೆ ಪಂಚಾಯಿತಿ ಸಿಬ್ಬಂದಿಗಳು, ಸದಸ್ಯರು ಇದ್ದರು.

## ಅರ್ಥಪೂರ್ಣವಾಗಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆಗೆ ನಿರ್ಧಾರ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಇದೇ ಜನೇವರಿ ೨೧ ರಂದು ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಿಸುವ ಕುರಿತು ಇಂದು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್**

ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಅಂದು ನಗರದ ವಿದ್ಯಾ ಮಂಗಲ್ ಕಾರ್ಯಾಲಯದಲ್ಲಿ ಮಧ್ಯಾಹ್ನ 12–30 ಗಂಟೆಗೆ ಈ ಜಯಂತಿ ಆಯೋಜಿಸಲು ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಲು, ವೇದಿಕೆ, ಆಸನದ ವ್ಯವಸ್ಥೆ, ಶಿಷ್ಟಾಚಾರದಂತೆ ಗಣ್ಯರನ್ನು, ನುರಿತ ಉಪನ್ಯಾಸಕರನ್ನು

ಆಹ್ವಾನಿಸಲು ನಿರ್ಧರಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ್ ಅವರು ಕಾರ್ಯಕ್ರಮದ ಸಂದರ್ಭದಲ್ಲಿ , ಸೂಕ್ತ ಪೋಲಿಸ್ ಬಂದೋಬಸ್ತ್, ವೇದಿಕೆ ಸಿದ್ಧತೆ ನೋಡಿಕೊಳ್ಳಲು , ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಆಮಂತ್ರಣ ಪತ್ರಿಕೆ ವಿತರಿಸುವ ವ್ಯವಸ್ಥೆಗೆ ಸೂಚಿಸಲಾಯಿತು. ಕಾರ್ಯಕ್ರಮವನ್ನು ತಾಲೂಕ ಮಟ್ಟದಲ್ಲಿ ಶಾಲಾ, ಕಾಲೇಜು, ಗ್ರಾಮ ಪಂಚಾಯತ್, ವಿವಿಧ ಕಚೇರಿ ಗಳಲ್ಲಿ ಬೆಳಿಗ್ಗೆ 10 ಗಂಟೆಗೆ ಈ ಜಯಂತಿ ಆಚರಣೆಗೆ ಸೂಚಿಸಿ, ಮುಖ್ಯ ಕಾರ್ಯಕ್ರಮಕ್ಕೆ, ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಸಮಾಜದ ಮೂಲಕ ಹಮ್ಮಿಕೊಳ್ಳಲಾಗುವ ಮೆರವಣಿಗೆ ಕಾರ್ಯಕ್ರಮದ ಬಗ್ಗೆ ಮುಂಚಿತವಾಗಿ ಜಿಲ್ಲಾಡಳಿತಕ್ಕೆ ಈ ಕುರಿತು ಮಾಹಿತಿ ನೀಡಲು ಸೂಚಿಸಿದರು. ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀಮತಿ ಉತ್ತರದೇವಿ ಸ್ವಾಗತಿಸಿದರು. ಸಭೆಯಲ್ಲಿ ಜಿಲ್ಲಾ ಕೋಲಿ, ಕಬ್ಬಲಿಗ ಸಮಾಜದ ಮುಖಂಡರು , ಜಿಲ್ಲಾ, ತಾಲೂಕಾ ಅಧ್ಯಕ್ಷರು ಉಪಸ್ಥಿತರಿದ್ದರು. ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಗೋಸಿ, ತಾಲೂಕಾ ಅಧ್ಯಕ್ಷ ನಿಂಗಪ್ಪ ಜಾಲಗಾರ, ಜಿಲ್ಲಾ ಕೋಲಿ ಹಾಗೂ ಕಬ್ಬಲಿಗ ಸಮಾಜ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಬಾಡಿಯಾಳ, ಅಖಿಲಭಾರತ ಕೋಲಿ ಸಮಾಜದ ರಾಜ್ಯ ಕಾರ್ಯದರ್ಶಿ ಉಮೇಶ್ ಮುದ್ನಾಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮರೆಡ್ಡಿ, ಸಮಾಜದ ಹಿರಿಯ ಮುಖಂಡರಾದ ಶರಣಪ್ಪ ಮೋಟ್ನಳ್ಳಿ, ಸಣ್ಣ ಹಣುಮಂತಪ್ಪ ಬಳಿಚಕ್ರ, ತಾಲೂಕ ಉಪಾಧ್ಯಕ್ಷ ದೇವೂ ಬಳಿಚಕ್ರ, , ಜಿಲ್ಲಾ ಯುವ ಅಧ್ಯಕ್ಷ ಮಲ್ಲು ಪೂಜಾರಿ, ಮುದುಕಪ್ಪ ಚಾಮನಳ್ಳಿ, ತಾಲೂಕಾ ಉಪಾಧ್ಯಕ್ಷ ಕಳಸಪ್ಪ ಸಾವೂರ್, ನಗರ ಯುವ ಅಧ್ಯಕ್ಷ ಮಹೇಶ್ ಬಾಡಿಯಾಳ, ಮಹಾದೇವಪ್ಪಗಣಪೂರ, ಬಸವರಾಜ ಕೋಲಕಾರ, ಉಪಸ್ಥಿತರಿದ್ದರು.



# ಬ್ಯಾನರ್ ಗಲಾಟೆ ಬಳ್ಳಾರಿಯಿಂದ ಬೆಂಗಳೂರು ವರೆಗೆ ಪಾದಯಾತ್ರೆಗೆ ಸಿದ್ಧತೆ



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬ್ಯಾನರ್ ಗಲಾಟೆ ಪ್ರಕರಣ, ಡ್ರಗ್ಸ್ ಮಾಫಿಯಾ, ಜೂಜು, ಅಕ್ರಮ ದಂಧೆಗಳು, ನಮ್ಮ ಶಾಸಕರು, ಸಂಸದರ ಮೇಲೆ ಹಲ್ಲೆ, ದೌರ್ಜನ್ಯ ಖಂಡಿಸಿ ಜ.17ರಂದು ಬಳ್ಳಾರಿ ನಗರದ ಮುನ್ಸಿಪಲ್ ಕಾಲೇಜು ಆವರಣದಲ್ಲಿ ಬಹುತೇಕ ಅಂತಿಮವಾಗಲಿದೆ, ಅದೇ ದಿನದಂದು ಬಳ್ಳಾರಿಯಿಂದ ಬೆಂಗಳೂರು ವರೆಗೆ ಪಾದಯಾತ್ರೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ, ನಮಂ ರಾಜ್ಯಾಧ್ಯಕ್ಷ ಬಿ.ವೈ.ವಿಜಯೀಂದ್ರ ಅವರ ಒಪ್ಪಿಗೆ ಮಾತ್ರ ಬಾಕಿಯಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಅವರು ಹೇಳಿದರು. ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇವಲ ಬ್ಯಾನರ್ ಗಲಾಟೆ ವಿಚಾರಕ್ಕೆ ಇದು ಸಮಾವೇಶ, ಪಾದಯಾತ್ರೆ ಅಲ್ಲ, ಕಲ್ಯಾಣ ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಭ್ರಷ್ಟಾಚಾರ ತಾಂಡವಾಡುತ್ತಿದೆ, ನಮ್ಮ ಮೇಲೂ ಸುಳ್ಳು ಕೇಸ್ ಗಳನ್ನು ಹಾಕಲಾಗುತ್ತಿದೆ, ನಮ್ಮ ಶಾಸಕರ ಮೇಲೆ ವಿನಾಕಾರಣ ದೌರ್ಜನ್ಯ ನಡೆಯುತ್ತಿದೆ. ಕಲಬುರ್ಗಿಯಲ್ಲಿ ನಮ್ಮ ಚಲುವಾದಿ ನಾರಾಯಣ ಸ್ವಾಮಿ ಅವರ ಮೇಲೆ ಕಲ್ಲು ತೂರಾಟ, ದೌರ್ಜನ್ಯ, ಹಲ್ಲೆ ನಡೆದಿದೆ, ರಿಪಬ್ಲಿಕ್ ಆಫ್ ಕಲಬುರ್ಗಿ ಆಗಿದೆ, ಈ ಹಿನ್ನೆಲೆ ಸರ್ಕಾರದ ಕ್ರಮ ಖಂಡಿಸಿ ಜ.17 ರಂದು ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸಚಿವರಾದ ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ವಿರೋಧ ಪಕ್ಷದ ನಾಯಕ ಅಶೋಕ್, ಚಲುವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ, ಸಮಾವೇಶದ ದಿನದ ಅದೇ ಸ್ಥಳದಿಂದಲೇ ಬೆಂಗಳೂರಿಗೆ ಪಾದಯಾತ್ರೆ ಪ್ರಾರಂಭಿಸುವ ತೀರ್ಮಾನ ಮಾಡಲಾಗಿದೆ, ಇದಕ್ಕೆ ಅಧ್ಯಕ್ಷರ ಅನುಮತಿಗಾಗಿ ಕಾಯುತ್ತಿದ್ದೇವೆ ಎಂದರು.

ಬ್ಯಾನರ್ ಗಲಾಟೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ, ನಾವು ಸಿಬಿಐ ಅಥವಾ ಸೀಟಿಂಗ್ ಜಡ್ಜ್ ಅವರ ಮೂಲಕ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದೆವು. ಆದರೆ, ಸರ್ಕಾರ ಸಿಐಡಿಗೆ ವಹಿಸಿದೆ, ಘಟನೆ ನಡೆದು 24 ಗಂಟೆಯೊಳಗೆ ತನಿಖೆಯಾಗಬೇಕು, ಘಟನಾ ಸ್ಥಳದಲ್ಲಿ ಯಾರು ತಿರುಗಾಡದಂತೆ ನೋಡಿಕೊಳ್ಳಬೇಕು, 5 ದಿನದ ಬಳಿಕ ಮಹಜರು ಮಾಡಿದ್ರೆ ಏನು ಸಿಗುತ್ತೆ, ಹಾರಿಸಿದ ಗುಂಡುಗಳು ಇಷ್ಟು ದಿನದ ಬಳಿಕ ಸಿಗಲಿವೆಯೇ, ಶಾಸಕರ ಮೇಲೆ ಗುಂಡು ಹರಿಸ್ತಾರೆ, ಅಂದ್ರೆ, ಹೇಗೆ, ನಾವೇನಾದರೂ ತಪ್ಪು ಮಾಡಿದ್ರೆ ಇಷ್ಟೊತ್ತು ಬಿಡ್ತಿದ್ರಾ, ಇಲ್ಲಿವರೆಗೆ ಶಾಸಕ ಭರತ್ ರೆಡ್ಡಿ, ಸತೀಶ್ ರೆಡ್ಡಿ ಅವರನ್ನು ಬಂಧಿಸಿಲ್ಲ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಗಂಗಾವತಿ ಶಾಸಕ ಗಾಲಿ ಜನಾರ್ಧನ್ ರೆಡ್ಡಿ, ಮಾಜಿ ಸಂಸದ ಸಣ್ಣ ಫಕೀರಪ್ಪ, ಮಾಜಿ ಶಾಸಕ ಸುರೇಶ್ ಬಾಬು, ಓಬಳೇಶ್, ಗುರುಲಿಂಗನ ಗೌಡ ಇತರರು ಇದ್ದರು.

# ಕನಿಷ್ಠ ಬೆಂಬಲ: ಬಿಳಿ ಜೋಳ ಖರೀದಿ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025-26 ನೇ ಸಾಲಿನ ಮುಂಗಾರು ಋತುವಿನ ಬಿಳಿ ಜೋಳವನ್ನು ರೈತರಿಂದ ನೇರವಾಗಿ ಖರೀದಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ಬೆಂಬಲ ಬೆಲೆ ಯೋಜನೆಯಡಿ ಜೋಳವನ್ನು ಮಾರಾಟ ಮಾಡಲು ರೈತರು ಮೊದಲು ಕೃಷಿ ಇಲಾಖೆಯಲ್ಲಿ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನಂತರ ಆಯಾ ತಾಲ್ಲೂಕುಗಳ ಕೃಷಿ ಉತ್ಪನ್ನ ಮಾರುಕಟ್ಟೆ, ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ತಾಲ್ಲೂಕು ಕೇಂದ್ರ ಕಚೇರಿಗಳಲ್ಲಿ ತೆರೆಯಲಾಗುವ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟ ಮಾಡಲು ನೋಂದಾಯಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ 2025-26 ನೇ ಸಾಲಿನ ಮುಂಗಾರು ಋತುವಿನ ಬಿಳಿಜೋಳ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಬೆಂಬಲ ಬೆಲೆ: ಬಿಳಿ ಜೋಳ-ಹೈಬ್ರೀಡ್ : ರೂ.3,699 (ಪ್ರತಿ ಕ್ವಿಂ)

ಬಿಳಿ ಜೋಳ-ಮಾಲ್ದಂಡಿ: ರೂ.3,749 (ಪ್ರತಿ ಕ್ವಿಂ)

ಖರೀದಿ ಕೇಂದ್ರಗಳ ವಿವರ: ಬಳ್ಳಾರಿ ತಾಲ್ಲೂಕಿನ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘ, ಬಳ್ಳಾರಿ ಮತ್ತು ಮೋಕಾ, ಅಸುಂಡಿ, ರೂಪನಗುಡಿ, ಅಮರಾಪುರ ಗ್ರಾಮಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ.

ಕುರುಗೋಡು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ.

ಸಿರುಗುಪ್ಪ ತಾಲ್ಲೂಕಿನ ಕೆ.ಬೆಳಗಲ್ಲು, ಕರೂರು, ಹಚ್ಚೊಳ್ಳಿ, ಬೂದುಗುಪ್ಪ, ಬಿ.ಎಂ.ಸೂಗೂರು, ತಾಳೂರು, ಮುದ್ದಟನೂರು, ಅರಳಿಗನೂರು, ಸಿರಿಗೇರಿ ಗ್ರಾಮಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ.

ಕಂಪ್ಲಿ ತಾಲ್ಲೂಕಿನ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘ, ಕಂಪ್ಲಿ ಮತ್ತು ಎಮ್ಮಿಗನೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ.

ರೈತರು ಮೇಲ್ಕಂಡ ಖರೀದಿ

ಕೇಂದ್ರಗಳಿಗೆ ಭೇಟಿ ನೀಡಿ ಕೃಷಿ ಇಲಾಖೆಯಿಂದ ಪಡೆದಿರುವ ಫ್ರೂಟ್ಸ್ ಐ.ಡಿ ಮತ್ತು ಆಧಾರ್ ನೊಂದಿಗೆ ನೋಂದಣಿ ಮಾಡಿಕೊಳ್ಳಬೇಕು. ಬಿಳಿಜೋಳ /ಬೀಜೋತ್ಪಾದನೆ ಬೆಳೆಗಳನ್ನು ಬೆಳೆದಿದ್ದು, ಜೋಳವೆಂದು ನಮೂದಿಸಿಕೊಂಡು

ಜೋಳ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿದಲ್ಲಿ ಅಥವಾ ಅಕ್ರಮ ಜೋಳ ನೋಂದಣಿ ಮಾಡಿದಲ್ಲಿ ಸೂಕ್ತ ಕಾನೂನು ಕ್ರಮ

ಜರುಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕುಗಳ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.18 ಚಾಲುಕ್ಯ ನಡಿಗೆ ಪ್ರಚಾರ ಸಾಮಗ್ರಿ ಬಿಡುಗಡೆ



- **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಚಾಲುಕ್ಯ ಉತ್ಸವ-2026ರ ಅಂಗವಾಗಿ ಜನವರಿ 18 ರಂದು ಬೆಳಿಗ್ಗೆ 7 ಗಂಟೆಗೆ ಹಮ್ಮಿಕೊಂಡ ಚಾಲುಕ್ಯ ನಡಿಗೆ ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳನ್ನು ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಬುಧವಾರ ಬಿಡುಗಡೆಗೊಳಿಸಿದರು. 'ಚಾಲುಕ್ಯ ನಡಿಗೆ ಸ್ಮಾರಕದ ಕಡೆಗೆ' ಕಾರ್ಯಕ್ರಮಕ್ಕೆ ಟೀಶರ್ಟಗಳನ್ನು ರಾಜ್ಯ ಸರಕಾರಿ ನೌಕರರ ಸಂಘದ ಬಾದಾಮಿ ತಾಲೂಕಾ ಘಟಕ ಹಾಗೂ ಭಾರತೀಯ ವೈದ್ಯಕೀಯ ಸಂಘದ ತಾಲೂಕಾ ಘಟಕ ಇವರು ಜಂಟಿಯಾಗಿ ನೀಡಿದರು. ಇದರ ಜೊತೆಗೆ ಕಾರ್ಯಕ್ರಮದ ಪೋಸ್ಟರಗಳನ್ನು ಸಹ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ತಹಶೀಲದಾರ ಎಸ್.ಬಿ.ಬೊಮ್ಮನ್ನವರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸತೀಶ ಮಾಕೊಂಡ, ಮಲ್ಲಿಕಾರ್ಜುನ ಬಡಿಗೇರ, ತಾಲೂಕಾ ನೌಕರರ ಸಂಘದ ಅಧ್ಯಕ್ಷ ಡಾ.ಎಂ.ಎನ್.ಸಿದ್ದಲಿಂಗಪ್ಪನವರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ, ಘಟಕ ವ್ಯವಸ್ಥಾಪಕ ಅಶೋಕ ಕೋರಿ, ನಿವೃತ್ತ ಪ್ರಾಚಾರ್ಯ ಆರ್.ಬಿ.ಸಂಕದಾಳ, ಹನಮಂತ ಅಪ್ಪನ್ನವರ ಸೇರಿದಂತೆ ಬಾದಾಮಿ ತಾಲೂಕಾ ಆಡಳಿತದ ಎಲ್ಲ ಸರಕಾರಿ ನೌಕರರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕಲಬುರಗಿ**

ಸಂಖ್ಯೆ:ಡಿ.ಎಚ್.ಒ/ಕಲಬುರಗಿ/64/2025-26 ದಿನಾಂಕ :14.01.2026

**ಟೆಂಡರ್ ಅಧಿಸೂಚನೆ**

ಟೆಂಡರಿನ ಸಂಖ್ಯೆ: RD/2025-26/PREQUAL_TENDER_NUMBER_6/Call-2

ಕಾಮಗಾರಿಯ ಹೆಸರು : ನಿರ್ಗತಿಕ ಮಾನಸಿಕ ಅಸ್ವಸ್ಥರಿಗಾಗಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರವನ್ನು ಮತ್ತು ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲು ಕಲಬುರಗಿಯಲ್ಲಿ EMERGENCY CARE AND RECOVERY CENTRE (ECRC) FOR HOMELESS PERSONS WITH MENTALLY ILLNESS (ECRC) ಕೇಂದ್ರ ಸ್ಥಾಪಿಸಲು NGO's ರವರಿಂದ Online ಮೂಲಕ KPP Portal ನಿಂದ ಮರು ಟೆಂಡರ್ (Re-call) (Calling for Expression of Interest) ಅರ್ಜಿ ಆಹ್ವಾನಿಸಿದೆ. 2) ಟೆಂಡರ್‌ನ ಅಂದಾಜು ಮೊತ್ತ **ರೂ.20,07,060/-** Calling for Expression of Interest) 4) ದೂರು ಮತ್ತು ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ: **01.02.2026 05.30 pm** 5) ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಸಲ್ಲಿಸಲು ಅಂತಿಮ ದಿನಾಂಕ : 03.02.2026 ರ ವರೆಗೆ ಸಮಯ 05.30 pm. 6) ಟೆಂಡರ್ ತೆರೆಯುವ ದಿನಾಂಕ: **05.02.2026 ಬೆಳಿಗ್ಗೆ 11.00 ಗಂಟೆಗೆ,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ದೂರವಾಣಿ ಸಂಖ್ಯೆ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕಲಬುರಗಿ ಮತ್ತು ದೂರವಾಣಿ ಸಂಖ್ಯೆ 08472-278619.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/970/ದೇಶಪಾಂಡೆ ಪಬ್ಲಿಸಿಟಿ/2025-26/


# ವಿವಿಧ ಬೇಡಿಕೆ ಈಡೇರಿಕೆಗೆ ಲಾರಿ ಚಾಲಕರು ಒತ್ತಾಯ

- **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**



ಕಾನೂನು ಬಾಹಿರವಾಗಿ ಲೋಡಿಂಗ್ ಅನ್‌ಲೋಡಿಂಗ್ ವಾರ್ನಿ ಮಾಮೂಲಿ ಹೆಸರಿನಲ್ಲಿ ಲಾರಿ ಮಾಲೀಕರಿಗೆ ಆಗುತ್ತಿರುವ ಅನ್ಯಾಯ ತಡೆ ಹಿಡಿಯಬೇಕು ಎಂದು ಲಾರಿ ಓನರ್ ವೆಲ್‌ಫೇರ್ ಅಸೋಸಿಯೇಶನ್ ಮುಖಂಡರು ಸಂಬಂಧಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ವರ್ತಕರು ಹಾಗೂ ಕೈಗಾರಿಕಾದವರು ಆಗಲಿ ತಮ್ಮ ಸರಕನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಸಾಗಾಣಿಕ ಮಾಡಲು ಲಾರಿಗಳನ್ನು ಬಾಡಿಗೆಗೆ ಪಡೆದುಕೊಳ್ಳುತ್ತಾರೆ. ಆದರೆ ಅವರ ಸರಕನ್ನು ಲೋಡ್ ಅಥವಾ ಅನ್‌ಲೋಡ್ ಮಾಡಲು ಕೊಡಬೇಕಾದ ಮಾಮೂಲಿ ವಾರ್ನಿ ವೆಚ್ಚವನ್ನು ತಾವೇ ಪಾವತಿಸುವುದನ್ನು ಬಿಟ್ಟು ಲೋಡಿಂಗ್ ಅನ್ ಲೋಡಿಂಗ್ ವಾರ್ನಿ ಮಾಮೂಲಿ ಎಂದು ಲಾರಿಯವರಿಂದ ವಸೂಲಿ ಮಾಡಿ ಲಾರಿ ಮಾಲೀಕರಿಗೆ ಅನ್ಯಾಯ ಮಾಡುತ್ತಿದ್ದಾರೆ ಇದು ಕಾನೂನು ಬಾಹಿರ ಆಗಿರುತ್ತದೆ. ಲಾರಿಯವರು ಇದಕ್ಕೆ ಒಪ್ಪದಿದ್ದಾಗ ವರ್ತಕರಾಗಲಿ ಅಥವಾ ಕೈಗಾರಿಕದವರಾಗಲಿ ಲಾರಿಗಳನ್ನು ಲೋಡ್ ಅಥವಾ ಅನ್‌ಲೋಡ್ ಮಾಡದೆ ಹಾಗೆ ನಿಲ್ಲಿಸಿ ಲಾರಿ ಚಾಲಕರಿಗೆ ಅಥವಾ ಮಾಲೀಕರಿಗೆ ಕಿರುಕುಳ ನೀಡುತ್ತಿದ್ದಾರೆ. ಕಾರಣ ಲೋಡಿಂಗ್, ಅನ್‌ಲೋಡಿಂಗ್, ವಾರ್ನಿ ಮಾಮೂಲಿ, ಟಾಪಲ್ ಮತ್ತು ವೇ ಬ್ರಿಡ್ಜ್ ಹಣವನ್ನು ಲಾರಿ ಮಾಲೀಕರು ಕೊಡುವುದಿಲ್ಲವೆಂದು ಹಾಗೂ ತೂಕದ ಪ್ರಕಾರ ಲಾರಿ ಬಾಡಿಗೆ ಕಡಿತಗೊಳಿಸುವ ನಿಯಮವನ್ನು ತೆಗೆದು ಹಾಕಬೇಕು ಎಂದು ತೀರ್ಮಾನಿಸಿದ್ದೇವೆ. ಅದರಂತೆ ನಮ್ಮ ಸಂಘದ ವತಿಯಿಂದ ರಾಯಚೂರು ಜಿಲ್ಲೆಯ ಎಲ್ಲಾ ಲಾರಿ ಮಾಲೀಕರ ಸಭೆಯನ್ನು ಕರೆದು ಈ ವಿಷಯವನ್ನು ಚರ್ಚಿಸಿ ಲೋಡಿಂಗ್, ಅನ್ ಲೋಡಿಂಗ್ ವಾರ್ನಿ ಮಾಮೂಲಿ ಲಾರಿ ಮಾಲೀಕರು ಕೊಡುವುದಿಲ್ಲವೆಂದು ನಮ್ಮ ಸಂಘದ ವತಿಯಿಂದ ತೀರ್ಮಾನಿಸಲಾಗಿದೆ. ಡೀಸೆಲ್, ಟೋಲ್‌ರ, ಇನ್ಸೂರೆನ್ಸ್, ಟೈರ್, ಲಾರಿಯ ಬಿಡಿ ಭಾಗಗಳ ದರ ಹೆಚ್ಚಳವಾಗಿದ್ದು, ಲಾರಿ ಮಾಲೀಕರ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿದ್ದು ಲಾರಿ ಮಾಲೀಕರ ಕುಟುಂಬವನ್ನು ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿರುತ್ತದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣೀಸಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಂಡು ಲಾರಿ ಮಾಲೀಕರಿಕರಿಗೆ ಆಗುತ್ತಿರುವ ಅನ್ಯಾಯವನ್ನು ಪರಿಹರಿಸಿ ಲಾರಿ ಮಾಲೀಕರಿಗೆ ನ್ಯಾಯವನ್ನು ಒದಗಿಸಬೇಕೆಂದು ಮಾ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಕಾಯಿತು ಮತ್ತು ಒಂದು ವಾರದೊಳಗೆ ಲಾರಿ ಮಾಲಿಜಿ ಬೆಡಿಕೆಗಳು ಈಡೇರಿಸದಿದ್ದರೆ ಜ. 22ರಂದು ಜಿಲ್ಲಾದ್ಯಂತ ಲಾರಿ ಮುಷ್ಕರ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಶಿವ ಶರಣಪ್ಪ, ಕಾರ್ಯದರ್ಶಿ ಮಹಮ್ಮದ್ ಇಕ್ಬಾಲ್, ಖಜಂಚಿ ಮೊಹಮ್ಮದ್ ಜಾವಿದ್ ಹುಸೇನ್, ಸಹ ಕಾರ್ಯದರ್ಶಿ ಸತ್ಯ ರೆಡ್ಡಿ ಸೇರಿದಂತೆ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಶತಾಯಷಿ ಡಾ। ಭೀಮಣ್ಣ ಖಂಡ್ರೆ ಆರೋಗ್ಯದಲ್ಲಿ ಮತ್ತಷ್ಟು ಚೇತರಿಕೆ



- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಮಾಜಿ ಸಚಿವರು, ಶತಾಯಷಿ ಡಾ। ಭೀಮಣ್ಣ ಖಂಡ್ರೆ(102) ಅವರ ಆರೋಗ್ಯದಲ್ಲಿ ಬುಧವಾರವೂ ಸ್ವಲ್ಪ ಮಟ್ಟಿನ ಚೇತರಿಕೆ ಕಂಡು ಬಂದಿದೆ.

ಪಟ್ಟಣದ ಮನೆಯಲ್ಲಿಯೇ ಚಿಕಿತ್ಸೆ ಮುಂದುವರಿಸಲಾಗುತ್ತಿದ್ದು, ಕಳೆದ ಎರಡ್ಮೂರು ದಿನಗಳಿಗೆ ಹೋಲಿಸಿದರೆ ಡಾ। ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಮತ್ತಷ್ಟು ಚೇತರಿಕೆ ಕಂಡು ಬಂದಿದೆ. ಉಸಿರಾಟದ ಮಟ್ಟ ಏರಿಕೆಯಾಗಿದೆ, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ನಾನಾ ಶ್ರೀಗಳು ಭೇಟಿ:

ನಾನಾ ಮಠಾಧೀಶರು, ಗಣ್ಯರು ಖಂಡ್ರೆ ನಿವಾಸಕ್ಕೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಚಿದಂಬರಾಶ್ರಮ ಬೀದರಿನ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಶ್ರೀ ಗಣೇಶಾನಂದ ಮಹಾರಾಜರು, ಗದಗ ಜಿಲ್ಲೆಯ ಬಾಳೆ ಹೊಸೂರ,ಮಠದ ದಿಂಗಾಲೇಶ್ವರ ಸ್ವಾಮೀಜಿ, ಹಾರಕೂಡದ ಚೆನ್ನವೀರ ಶಿವಾಚಾರ್ಯರು,

ಮುಗುಳಖೋಡ ಶ್ರೀಗಳು, ಹುಡುಗಿ ಶ್ರೀಗಳು, ಹಣೆನಾಗಾಂವ ಶ್ರೀಗಳು, ಹಳ್ಳಿಖೇಡ(ಬಿ) ಚಿಕ್ಕಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು, ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು ಸೇರಿ,

ಅಫಜಲಪೂರ ಶಾಸಕ ಎಮ್.ವಾಯ್.ಪಾಟೀಲ, ಹಿರಿಯ ಮುಖಂಡ ಗುರುನಾಥ ಕೊಳ್ಳುರು, ಡಿ.ಕೆ.ಸಿದ್ರಾಮ, ವಿಜಯಸಿಂಗ್, ನಿವೃತ್ತ ಎ.ಸಿ ಮಲ್ಲಿಕಾರ್ಜುನ ಮಠ್, ಸಹಜಾನಂದ ಕಂದಗೂಳ ಸೇರಿದಂತೆ ಮುಂತಾದವರು ಭೇಟಿ ನೀಡಿ ಡಾ। ಭೀಮಣ್ಣ ಖಂಡ್ರೆ ಅವರ ಆರೋಗ್ಯ ವಿಚಾರಿಸಿ ಶೀಘ್ರ ಗುಣಮುಖ ಹೊಂದಲಿ ಎಂದು ಪ್ರಾರ್ಥಿಸಿದರು.

**ಸುಳ್ಳು ವದಂತಿಗಳಿಗೆ ಯಾರು ಕಿವಿಗೂಡಬಾರದು**

ನಮ್ಮ ತಂದೆ ಶತಾಯಷಿ ಡಾ। ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ದಿನೇ, ದಿನೇ ಚೇತರಿಸಿಕೊಳ್ಳುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಯಾರು ಕಿವಿಗೂಡಬಾರದು. ಕಾರ್ಯಕರ್ತರು, ಅಭಿಮನಿಗಳು, ಹಿತೈಷಿಗಳು ನಮ್ಮ ತಂದೆಯ ಆರೋಗ್ಯ ಸುಧಾರಣೆಗೆ ಪ್ರಾರ್ಥಿಸಬೇಕು.

**ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

**ಖಂಡ್ರೆಯವರು ಬೆಳೆದು ಬಂದ ದಾರಿ ನಮ್ಮೆಲ್ಲರಿಗೂ ಸ್ಪೂರ್ತಿ**

ಮಾಜಿ ಸಚಿವ ಡಾ। ಭೀಮಣ್ಣ ಖಂಡ್ರೆಯವರು ಮುತ್ಸದ್ದಿ ನಾಯಕರು, ಅವರು ಬೆಳೆದು ಬಂದ ದಾರಿ ನಮ್ಮೆಲ್ಲರಿಗೂ ಸ್ಪೂರ್ತಿಯಾಗಿದೆ. ನನಗೆ ಬೀದರನಲ್ಲಿ ಮೊದಲು ಸ್ಥಾನ ನೀಡಿದ ವ್ಯಕ್ತಿ ಅವರಾಗಿದ್ದಾರೆ. ಅವರ ಆರೋಗ್ಯ ಸುಧಾರಿಸಿ, ಬೇಗ ಚೇತರಿಸಿಕೊಳ್ಳಲೆಂದು ಸದ್ಗುರುಗಳಲ್ಲಿ ಪ್ರಾರ್ಥಿಸುತ್ತೇನ.

**ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಚಿದಂಬರಾಶ್ರಮ ಬೀದರ.**

# ಪುಟಾಣಿ ಮಕ್ಕಳು ಸಂಭ್ರಮದ ಸಂಕ್ರಾಂತಿ ಹಬ್ಬ ಆಚರಣೆ

- **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**



ತಾಲೂಕಿನಲ್ಲಿ ಸಂಭ್ರಮ ಸಡಗರದಿಂದ ಸಂಕ್ರಾಂತಿ ಹಬ್ಬದ ಆಚರಣೆ ಮಾಡಲಾಯಿತು. ಪುಟಾಣಿ ಮಕ್ಕಳು, ಮಹಿಳೆಯರು, ಹಿರಿಯರು ಎಲ್ಲರೂ ಪರಸ್ಪರ ಎಳ್ಳು ಸಕ್ಕರೆ ವಿನಿಮಯ ಮಾಡಿ ಸಂಭ್ರಮಿಸಿದರು.

ಹಬ್ಬದ ನಿಮಿತ್ಯ ಸೂರ್ಯ, ಗಣೇಶ, ಆದಿಶಕ್ತಿ ಮತ್ತು ಇತರ ದೇವತೆಗಳನ್ನು ಪೂಜಿಸಿ, ಜಪ ಮತ್ತು ಧ್ಯಾನ, ಉಪವಾಸ ಮಾಡುವುದು ವಿಶೇಷ ಫಲ ನೀಡುತ್ತದೆ ಎಂಬ ನಂಬಿಕೆ ಇದೆ. ಪರಿವಾರ ಬಂದು ಬಳಗ, ಸ್ನೇಹಿತರಿಗೆ, ಎಲ್ಲರಿಗೆ ಶುಭ ಕೋರಿ ಎಳ್ಳು ಸಕ್ಕರೆ ಕೊಟ್ಟರು, ಕೆಲವರು ಮನೆ ಬಂದ ಮಹಿಳೆಯರಿಗೆ ಉಡಿ ತುಂಬಿ ಪ್ರೀತಿ ಕಾಣಿಕೆ ನೀಡಿ ಶುಭ ಕೋರಿದರು.

# ಬಾಲಕ ಕಾಣೆ ಪತ್ತೆಗೆ ಸಹಕರಿಸಲು ಮನವಿ

- **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**



ನಗರದ ಗವಿಮಠದ ಹಾಸ್ಟೆಲ್‌ನಲ್ಲಿ ವಾಸವಿದ್ದು ಗವಿಮಠದಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಪಟ್ಟಣದ ಸಂತೋಷ ತಂ. ರುದ್ರಪ್ಪ ಮದ್ದಿನ ಎಂಬ 15 ವರ್ಷ 11 ತಿಂಗಳ ವಯಸ್ಸಿನ ಬಾಲಕ ಕಾಣೆಯಾಗಿದ್ದು, ಈ ಕುರಿತು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.86/2025 ಕಲಂ:137(2) ಬಿ.ಎನ್.ಎಸ್. ನೇದ್ದರಡಿ ಪ್ರಕರಣ ದಾಖಲಾಗಿದೆ.

ಈ ಬಾಲಕನು ಓದುವುದಿಲ್ಲ ಎಂದು ಹೇಳಿದ ಕಾರಣ ಬಾಲಕನ ತಾಯಿ ಕಮಲಮ್ಮ ರುದ್ರಪ್ಪ ಮದ್ದಿನ ಅವರು ಆತನನ್ನು ಡಿಸೆಂಬರ್ 8 ರಂದು ಮಧ್ಯಾಹ್ನ 12.30 ಗಂಟೆಯ ಸುಮಾರಿಗೆ ವಾಪಸ್ ತಮ್ಮ ಊರಿಗೆ ಕರೆದುಕೊಂಡು ಹೋಗುವಾಗ ಕೊಪ್ಪಳ ಎಪಿಎಂಸಿ ಹತ್ತಿರದಿಂದ ಬಾಲಕನು ಕಾಣೆಯಾಗಿದ್ದು, ಬಾಲಕನನ್ನು ಯಾರೋ ಅಪಹರಣ ಮಾಡಿದ್ದಾರೆ ಎಂದು ಶಂಕಿಸಿ, ದೂರು ದಾಖಲಿಸಲಾಗಿದೆ.

ಬಾಲಕನ ಚಹರೆ ವಿವರ: ಬಾಲಕನು 4.5 ಅಡಿ ಎತ್ತರವಿದ್ದು, ಸಾದಗಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾದ ದಿನ ತಿಳಿ ಹಸಿರು ಬಣ್ಣದ ಡಿಜೈನ್ ಇರುವ ಶರ್ಟ್ ಮತ್ತು ಕಂದು ಬಣ್ಣದ ಪ್ಯಾಂಟ್ ಧರಿಸಿದ್ದನು.

ಮೇಲ್ಕಂಡ ಚಹರೆಯ ಬಾಲಕನ ಕುರಿತು ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಮಹಿಳಾ ಪೊಲೀಸ್ ಠಾಣೆ ದೂ.ಸಂ: 08539-221233, ಮಹಿಳಾ ಪೊಲೀಸ್ ಠಾಣೆ ಪಿಐ ಮೊ.ಸಂ: 8073476715, ತನಿಖಾಧಿಕಾರಿ ಶಶಿಕಲಾ ಮ.ಹೆಚ್.ಸಿ.138 ಮೊ.ಸಂ: 8217391502, ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಂ.ಸಂ: 9480803700 ಇಲ್ಲಿಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಮಹಿಳಾ ಪೊಲೀಸ್ ಠಾಣೆಯ ಪ್ರಕಟಣೆ ತಿಳಿಸಿದೆ.

# ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ದಿಢೀರ್ ಭೇಟಿ ಪರಿಶೀಲನೆ

- **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**



ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಸೋಮವಾರ ದಿಢೀರ್ ಭೇಟಿ ನೀಡಿ ಆಸ್ಪತ್ರೆಯಲ್ಲಿನ ಸ್ಥಿತಿಗತಿಗಳ ಪರಿಶೀಲಿಸಿ, ಆಸ್ಪತ್ರೆಯ ವೈದ್ಯರ ಮತ್ತು ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲನೆ ನಡೆಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಆಸ್ಪತ್ರೆಯಲ್ಲಿ ಸ್ವಚ್ಚತೆ ಕಾಪಾಡಬೇಕು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಸರತಿ ಸಾಲಿನಲ್ಲಿ ನಿಂತು ಚೀಟಿ ಪಡೆಯುವವರಿಗೆ ತೊಂದರೆ-ಯಾಗದಂತೆ ನೋಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಬೇಗನೆ ಚೀಟಿಯನ್ನು ನೀಡಲು ಇನ್ನೂ ಹೆಚ್ಚಿನ ಕೌಂಟರ್‌ಗಳನ್ನು ತೆಗೆದು, ಹೆಚ್ಚು ಸಿಬ್ಬಂದಿಗಳನ್ನು ನಿಯೋಜಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸಂಬಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಸ್ಪತ್ರೆಯ ಸೈಕಿಯಾಟ್ರ ವಿಭಾಗದಲ್ಲಿ ರೋಗಿಗಳ ಉಪಚಾರಕ್ಕೆ ಪ್ರತ್ಯೇಕ ವ್ಯವಸ್ಥೆ ಇದೆಯೆ. ಡ್ರಗ್ ಅಡಿಕ್ಟ್ ಆದವರಿಗೆ ದುಶ್ಚಟಗಳನ್ನು ಬಿಡಿಸಲು ಅವರಿಗೆ ಕೌನ್ಸಿಲಿಂಗ್ ಯಾವ ರೀತಿಯಲ್ಲಿ ಮಾಡುತ್ತಿರಾ. ಡ್ರಗ್ ಅಡಿಕ್ಟನಂತಹ ದುಶ್ಚಟಗಳಿಗೆ ಜನರು ಬಲಿಯಾಗದಂತೆ ಹೆಚ್ಚಿನ ಜಾಗೃತಿ ಮೂಡಿಸಲು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ಇದೇ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.



ಚಿಟಗುಪ್ಪ: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಯುವಕರು, ಮುದ್ದು ಮಕ್ಕಳು ಗಾಳಿಪಟ ಹರಿಸುತ್ತಿರುವುದರ ಮೂಲಕ ಸಡಗರದಿಂದ ಸಂಕ್ರಾಂತಿ ಹಬ್ಬ ಆಚರಿಸಿದರು. ಈ ಸಂದರ್ಭದಲ್ಲಿ ಪತ್ರಕರ್ತ ರಾಜಕುಮಾರ ಆರ್. ಹಡಪದ, ನರೇಂದ್ರರೆಡ್ಡಿ ರಾಂಪುರ, ದತ್ತಾತ್ರೇಯ ಪೂಜಾರಿ, ಸುನೀಲರೆಡ್ಡಿ ಇಟಗಾ, ಆಶೋಕ ಹೊಸಳ್ಳಿ, ವೀರಪ್ಪ ಗೋಣಗಿ ಸೈಯದ್ ಮೌಲಾ, ಮಹಮ್ಮದ್ ಅತಿಕ್ ಸೇರಿದಂತೆ ಇತರರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ವಾಹನಗಳಿಗೂ ರಾಷ್ಟ್ರಧ್ವಜ ಅಳವಡಿಸಿ ಸಂಭ್ರಮಿಸಿ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಗಣರಾಜ್ಯೋತ್ಸವದ ಅಂಗವಾಗಿ ವಾಹನಗಳಿಗೂ ಕೂಡ ಧ್ವಜಸಂಹಿತೆ ಪಾಲಿಸಿಕೊಂಡು, ರಾಷ್ಟ್ರ ಧ್ವಜವನ್ನು ಅಳವಡಿಸಿ, ಸಂಭ್ರಮಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸ್ಪಷ್ಟನೆ ನೀಡಿದ್ದಾರೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ವಾಹನಗಳಿಗೆ ರಾಷ್ಟ್ರ ಧ್ವಜ ಕಟ್ಟಲು ನಿರ್ಬಂಧಿಸಲಾಗಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿ ಪ್ರಕಟಗೊಂಡಿದ್ದು, ವಾಹನಗಳಿಗೆ ರಾಷ್ಟ್ರ ಧ್ವಜ ಕಟ್ಟಲು ಯಾವುದೇ ನಿರ್ಬಂಧ ವಿಧಿಸಿಲ್ಲ. ಆದರೆ ಧ್ವಜ ಸಂಹಿತೆ ಪಾಲಿಸದೆ ರಾಷ್ಟ್ರ ಧ್ವಜಕ್ಕೆ ಅವಮಾನವಾಗುವ ರೀತಿಯಲ್ಲಿ ಯಾರೂ ಕೂಡ ರಾಷ್ಟ್ರ ಧ್ವಜ ಬಳಸಬಾರದು. ರಾಷ್ಟ್ರದ ತ್ರಿವರ್ಣ ಧ್ವಜಗಳನ್ನು ಬಳಸುವಲ್ಲಿ, ಧ್ವಜ ಸಂಹಿತೆ ಪಾಲಿಸಿಕೊಂಡು, ಸಾರ್ವಜನಿಕರು ರಾಷ್ಟ್ರ ಧ್ವಜ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ, ವಾಹನಗಳಲ್ಲಿಯೂ ರಾಷ್ಟ್ರ ಧ್ವಜವನ್ನು ಅಳವಡಿಸಿ, ಗಣರಾಜ್ಯೋತ್ಸವವನ್ನು ಸಂಭ್ರಮಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸ್ಪಷಪಡಿಸಿದ್ದಾರೆ.

# ಪಟಾಕಿಯ ಕಿಡಿ: ಗಡಿಯಾರ ಕಂಬದಲ್ಲಿ ಬೆಂಕಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಗಡಿಗಿ ಚೆನ್ನಪ್ಪ ವೃತ್ತದ ಗಡಿಯಾರ ಕಂಬದಲ್ಲಿ ಬೆಂಕಿ ಆಕಸ್ಮಿಕ ನಡೆದಿದೆ, ಇಂದು ಮಧ್ಯಾಹ್ನ 11:00 ಸಮಯದಲ್ಲಿ ಸಿದ್ದರಾಮೇಶ್ವರ ಜಯಂತಿಯ ಮೆರವಣಿಗೆ ಸಂದರ್ಭದಲ್ಲಿ ಪಟಾಕಿಯ ಕಿಡಿ ಒಂದು ಗೋಪುರದ ರಕ್ಷಾ ಕವಚಕ್ಕೆ ತಾಗಿ ಬೆಂಕಿ ಹತ್ತಿಕೊಂಡಿದೆ ನಂತರ ಅದು ಗಡಿಯಾರ ಗೋಪುರದ ತುದಿಯವರೆಗೂ ಸಾಗಿ ತುದಿಯಲ್ಲಿದ್ದ ಗಡಿಯಾರ ಬೆಂಕಿಗೆ ಅಹುತಿಯಾಗಿದೆ. ಸುದ್ದಿ ತಿಳಿದ ತಕ್ಷಣ ಅಗ್ನಿಶಾಮಕ ದಳ ಆಗಮಿಸಿ ಬೆಂಕಿಯನ್ನು ನಂದಿಸಿ ಬಾರಿ ಅವಘಡ ಒಂದನ್ನು ಪಾರು ಮಾಡಿದ್ದಾರೆ. ಯಾವುದೇ ಜೀವ ಹಾನಿಯಾಗಲಿ ಅನಾಹುತವಾಗಲಿ ನಡೆದಿಲ್ಲ ಎಂದು ತಿಳಿದುಬಂದಿದೆ.

# ನರೇಗಾ ಬಚಾವೋ ಸಂಗ್ರಾಮ್: ಜಿಲ್ಲೆ ತಾಲೂಕು ಮಟ್ಟದಲ್ಲಿ ಹೋರಾಟಕ್ಕೆ ತೀರ್ಮಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ನರೇಗಾ)ಸಂಬಂಧಿಸಿದಂತೆ ಕೇಂದ್ರ ಬಿಜೆಪಿ ಸರ್ಕಾರದ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್,ಈಯೋಜನೆಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿನಡೆದಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2006ರಲ್ಲಿ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಡವರ ಬದುಕಿಗೆ ಆಸರೆಯಾಗುವ ಉದ್ದೇಶದಿಂದ ನರೇಗಾ ಯೋಜನೆಯನ್ನುಜಾರಿಗೆ ತಂದಿತ್ತು. ಆದರೆ ಈಗಿನ ಕೇಂದ್ರ ಬಿಜೆಪಿ ಸರ್ಕಾರ ಈ ಯೋಜನೆಯನ್ನು ಹಂತಹಂತವಾಗಿ ತೆಗೆದು ಹಾಕುವ ಸಿದ್ಧತೆ ನಡೆಸುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಗಾಂಧಿ ಹೆಸರು ತೆಗೆದು ಹಾಕಿದ್ದು ಬೇಸರದ ಸಂಗತಿ ನರೇಗಾ ಯೋಜನೆಯ ಹೆಸರಿನಿಂದ ಮಹಾತ್ಮ ಗಾಂಧಿ ಅವರ ಹೆಸರನ್ನು ತೆಗೆದು ಹಾಕಿರುವುದನ್ನು ಕಾಂಗ್ರೆಸ್ ಪಕ್ಷ ತೀವ್ರವಾಗಿ ಖಂಡಿಸುತ್ತದೆ ಎಂದು ಸಚಿವ ಜಮೀರ್ ಹೇಳಿದರು. “ಜೀ ರಾಮ್ ಜಿ ಎಂದು ಹೆಸರು ಬದಲಾವಣೆ ಮಾಡಿರುವುದು ಕೇವಲ ರಾಜಕೀಯ ಉದ್ದೇಶದಿಂದಲೇ ಮಾಡಲಾಗಿದೆ. ಇದು ಮಹಾತ್ಮ ಗಾಂಧಿ ಅವರಿಗೆ ಮಾಡಿದ ಅಪಮಾನ. ಇದೇ ರೀತಿ ಮುಂದುವರಿದರೆ,ಮುಂದಿನ ದಿನಗಳಲ್ಲಿ ನೋಟುಗಳಿಂದಲೂ ಗಾಂಧಿ ಅವರ ಹೆಸರು ಹಾಗೂ ಚಿತ್ರವನ್ನು ತೆಗೆದು ಹಾಕುವ ಸಾಧ್ಯತೆ ಇದೆ” ಎಂದು ಆತಂಕ ವ್ಯಕ್ತಪಡಿಸಿದರು.

ಬಡವರಿಗೆ ನರೇಗಾ ಜೀವಾಳ ನರೇಗಾ ಯೋಜನೆ ಗ್ರಾಮೀಣ ಬಡವರಿಗೆ ಉದ್ಯೋಗ, ಆಹಾರ ಭದ್ರತೆ ಮತ್ತು ಬದುಕಿನ ಗೌರವ ನೀಡಿರುವ ಯೋಜನೆ ಎಂದು ವಿವರಿಸಿದ ಸಚಿವರು, ಕೇಂದ್ರ ಸರ್ಕಾರದ ಈ ನಡೆ ಖಂಡನೀಯವಾಗಿದ್ದು, ಜನ ವಿರೋಧಿ ನೀತಿಯ ಪ್ರತಿಬಿಂಬವಾಗಿದೆ ಎಂದರು.

ಈ ವಿಚಾರವಾಗಿ ಇಂದು ತುರ್ತು ರಾಜ್ಯ ಸಚಿವ ಸಂಪುಟ (ಕ್ಯಾಬಿನೆಟ್) ಸಭೆ ನಡೆಯಲಿದ್ದು, ನರೇಗಾ ಬಚಾವೋ ಸಂಗ್ರಾಮ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಿ ಹೋರಾಟದ ರೂಪರೇಷೆ ತೀರ್ಮಾನಿಸಲಾಗುತ್ತದೆ ಎಂದು ತಿಳಿಸಿದರು. ಜಿಲ್ಲೆ ತಾಲೂಕು ಮಟ್ಟದಲ್ಲಿ ಹೋರಾಟ ಕಾಂಗ್ರೆಸ್ ಪಕ್ಷ ರಾಜ್ಯದ ಎಲ್ಲಾ ಜಿಲ್ಲೆಗಳು ಹಾಗೂ ತಾಲೂಕು ಮಟ್ಟದಲ್ಲಿ ಜನಪ್ರತಿನಿಧಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರೊಂದಿಗೆ ಸೇರಿ ಹೋರಾಟ ನಡೆಸಲಿದೆ. ನರೇಗಾ ಯೋಜನೆಯನ್ನು ರಕ್ಷಿಸಲು ಬೀದಿಗಿಳಿಯುವ ಅಗತ್ಯ ಬಂದರೂ ಹಿಂದೆ ಸರಿಯುವುದಿಲ್ಲ ಎಂದು ಸಚಿವ ಜಮೀರ್ ಸ್ಪಷ್ಟಪಡಿಸಿದರು.

42 ಸಾವಿರಕ್ಕೂ ಹೆಚ್ಚು ಮನೆ ವಿತರಣೆ ಸರ್ಕಾರದ ಜನಪರ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದ ಅವರು, ಇದೇ ತಿಂಗಳ 24ರಂದು ಹುಬ್ಬಳ್ಳಿಯಲ್ಲಿ 42 ಸಾವಿರಕ್ಕೂ ಅಧಿಕ ಮನೆಗಳನ್ನು ವಿತರಣೆ ಮಾಡಲಾಗುತ್ತದೆ ಎಂದು ಘೋಷಿಸಿದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮನೆಗಳು ಸಿದ್ಧವಾಗಿದ್ದು, ಹಂತ ಹಂತವಾಗಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುತ್ತದೆ ಎಂದರು. ಸಿಎಂ ಡಿಸಿಎಂ ಪ್ರತ್ಯೇಕ ಮಾತುಕತೆ ವಿಚಾರಕ್ಕೆ ಸ್ಪಷ್ಟನೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ನಡುವಿನ ಪ್ರತ್ಯೇಕ ಮಾತುಕತೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವ ಜಮೀರ್, “ಇದು ಸಹಜ ರಾಜಕೀಯ ಮಾತುಕತೆ. ಇದರಲ್ಲಿ ಯಾವುದೇ ಗೊಂದಲ ಅಥವಾ ಬದಲಾವಣೆ ಇಲ್ಲ. ನೋ ಕ್ರಾಂತಿ, ನೋ ಬ್ರಾಂತಿ. ನವೆಂಬರ್ ಇರಲಿ ಅಥವಾ ಸಂಕ್ರಾಂತಿ ಇರಲಿ ಐದು ವರ್ಷಗಳ ಕಾಲ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತಾರೆ.ಮುಖ್ಯಮಂತ್ರಿ ಬದಲಾವಣೆ ಎಂಬ ಪ್ರಶ್ನೆಯೇ ಇಲ್ಲ” ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಪಾದಯಾತ್ರೆ ಬಗ್ಗೆ ವ್ಯಂಗ್ಯ ಬಿಜೆಪಿಯ ಪಾದಯಾತ್ರೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, “ಅದು ಅವರ ಪಕ್ಷದ ವಿಚಾರ. ಅವರಿಗೆ ಏನು ಬೇಕಾದರೂ ಮಾಡಿಕೊಳ್ಳಲಿ. ಪಾದಯಾತ್ರೆಗೆ ಅನುಮತಿ ನೀಡುವ ವಿಚಾರವನ್ನು ಪೊಲೀಸರು ನೋಡಿಕೊಳ್ಳುತ್ತಾರೆ. ಬಿಜೆಪಿಯವರಿಗೆ ಮಾಡಲು ಕೆಲಸವಿಲ್ಲದಿದ್ದರೆ ಪಾದಯಾತ್ರೆ ಮಾಡಲಿ” ಎಂದು ವ್ಯಂಗ್ಯವಾಡಿದರು.

ನರೇಗಾ ಯೋಜನೆ, ಗಾಂಧಿ ಹೆಸರು, ಕೇಂದ್ರ ಸರ್ಕಾರದ ನೀತಿಗಳು ಹಾಗೂ ರಾಜ್ಯ ರಾಜಕೀಯದ ಚರ್ಚೆಗಳ ನಡುವೆ, ಸಚಿವ ಜಮೀರ್ ಅಹಮದ್ ಖಾನ್ ಅವರ ಹೇಳಿಕೆಗಳು ರಾಜ್ಯ ರಾಜಕಾರಣದಲ್ಲಿ ಹೊಸ ಚರ್ಚೆಗೆ ಕಾರಣವಾಗಿವೆ. ಮುಂದಿನ ದಿನಗಳಲ್ಲಿ ಕ್ಯಾಬಿನೆಟ್ ತೀರ್ಮಾನ ಹಾಗೂ ಕಾಂಗ್ರೆಸ್ ಪಕ್ಷದ ಹೋರಾಟದ ರೂಪು ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದರ ಮೇಲೆ ಎಲ್ಲರ ಗಮನ ಕೇಂದ್ರೀಕೃತವಾಗಿದೆ.

ಈ ಸಂದರ್ಭದಲ್ಲಿ ಸಂಸದ ಈ.ತುಕಾರಾಂ, ಶಾಸಕರಾದ ಜೆ.ಎನ್. ಗಣೇಶ್, ನಾರಾ ಭರತ್ ರೆಡ್ಡಿ, ಮೇಯರ್ ಪಿ.ಗಾದೆಪ್ಪ, ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಗೋನಾಳ ನಾಗಭೂಷಣ ಗೌಡ, ಕಾಂಗ್ರೆಸ್ ಮುಖಂಡರಾದ ಡಿ.ಆಯಾಜ್ ಅಹ್ಮದ್, ಎ.ಮಾನಯ್ಯ, ವಿಷ್ಣು ಬೋಯಪಾಟಿ, ಅಲ್ಲಬಕಾಶ್, ಡಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಈರನಗೌಡ, ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ (ವಾಸಪ್ಪ), ಕಂಪ್ಲಿ ಎಪಿಎಂಸಿ ಅಧ್ಯಕ್ಷ ಹಬೀಬ್ ರಹೆಮಾನ್, ಪಾಲಿಕೆ ಸದಸ್ಯ ಅಸೀಫ್, ಕುಬೇರ, ನೂರ್ ಮೊಹ್ಮದ್, ಸಂಗನಕಲ್ಲು ವಿಜಯ್ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ರೇಡಿಯೋ ಪಾರ್ಕ್ ಸರಗಯ ನಾಗರಾಜ್, ಕಣೇಕಲ್ಲು ಮಹೆಬೂಬ್ ಸಾಬ್, ಬಿ.ಎಂ.ಪಾಟೀಲ್, ಪಿ.ಜಗನ್, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಡಾ| ಕೆ.ಆರ್.ರವಿಕುಮಾರಗೆ ಭಾರತ ಸೇವಾ ರತ್ನ ಪ್ರಶಸ್ತಿ ಪ್ರಧಾನ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕರ್ನಾಟಕ ಪ್ರೆಸ್ ಕ್ಲಬ್ ಪ್ರತಿ ವರ್ಷವು ನಾಡಿನ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಸನ್ಮಾನಿಸಿ ಪ್ರಶಸ್ತಿ ನೀಡುತ್ತಾ ಬಂದಿರುತ್ತದೆ. 2025ನೇ ಸಾಲಿನ ಸಾಧಕರ ಸಮಾಗಮ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾಲಯದ ಕಲಾಗ್ರಾಮದಲ್ಲಿ ನಿನ್ನೆ ನಡೆಯಿತು. ಈ ಕಾರ್ಯಕ್ರಮದಲ್ಲಿ ನಾಡಿನ 11 ಸಾಧಕರಿಗೆ ಭಾರತ ಸೇವಾ ರತ್ನ ಪ್ರಶಸ್ತಿಯನ್ನು ಪವಾಡ ಶ್ರೀ ಬಸವಣ್ಣ ದೇವರ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮಿಜಿಯವರ ದಿವ್ಯ ಸಾನಿಧ್ಯದಲ್ಲಿ ವಿತರಿಸಲಾಯಿತು.

ಬಡ ಜನರಿಗೆ ಉಚಿತ ಮತ್ತು ಕಡಿಮೆ ಧರದಲ್ಲಿ ವೈದ್ಯಕೀಯ ಸೇವೆಯನ್ನು ಮಾಡುತ್ತ ನಗರದ ಟಿ.ಬಿ ಸೇಂಟೋರಿಯಂ ಭಾಗದ ರಾಮಾಂಜಿನೇಯ ನಗರದಲ್ಲಿ ತನ್ನದೆ ಅದ ಕ್ಲೀನಿಕ್ ಸ್ಥಾಪಿಸಿ ಎಷ್ಟೋ ವರ್ಷಗಳಿಂದ ಬಡವರಿಗೆ, ನೊಂದವರಿಗೆ ಚಿಕಿತ್ಸೆ ಮಾಡುತ್ತ.ರಾಜ್ಯದ ಸಾಧಕ ರತ್ನಗಳಲ್ಲಿ ಒಬ್ಬರಾದ ಡಾ|ಕೆ.ಆರ್.ರವಿಕುಮಾರ ರವರಿಗೆ ನಿನ್ನೆ ಬೆಂಗಳೂರು ವಿಶ್ವವಿದ್ಯಾಲಯದ ಕಲಾಗ್ರಾಮದಲ್ಲಿ ನಡೆದ ಸಮಾಗಮ ಕಾರ್ಯಕ್ರಮದಲ್ಲಿ ಭಾರತ ಸೇವಾ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ರವಿಕುಮಾರ್ ಅವರು ಬಳ್ಳಾರಿಯಲ್ಲಿ 1978ರಲ್ಲಿ ಜನಿಸಿ, ಎಂ.ಬಿ.ಬಿ.ಎಸ್ (ಎ.ಎಮ್.) ವ್ಯಾಸಂಗ ಮುಗಿಸಿ ಕಲ್ಕತ್ತಾದಲ್ಲಿ ವಿಶೇಷ ಅಧ್ಯಯನ ಮಾಡಿ, ಬಳ್ಳಾರಿಯಲ್ಲಿ ಜನಸ್ನೇಹಿ ವೈದ್ಯರಾಗಿ ಸೇವೆ ಸಲ್ಲಿ ಪ್ರಖ್ಯಾತಗೊಂಡಿದ್ದು ಕೆಲ ಬಡವರಿಗೆ ಉಚಿತ ಹಾಗೂ ಇದ್ದಂತವರಿಂದ ಕಡಿಮೆ ವೆಚ್ಚದಲ್ಲಿ ಉತ್ತಮ ಚಿಕಿತ್ಸೆ ಮಾಡಿ.ಜನಪ್ರಿಯ ಗೊಂಡಿದ್ದಾರೆ. ರೋಗಿಗಳಿಂದ ಮೊದಲು ಹಣವನ್ನು ಅಪೇಕ್ಷ ಮಾಡದೆ ತನ್ನ ಸೇವೆಯನ್ನು ಕೊಟ್ಟು ರೋಗಿಗಳ ಚಲನವಲನ ಗಮನಿಸಿ ರವಿ ಡಾಕ್ಟರ್ ದು ಒಳ್ಳೆಯ ಕೈ ಗುಣಪ್ಪ ದೇವರು ಅವರನ್ನು ಚನ್ನಾಗಿ ಇಟ್ಟಿರಲಿ ಎಂದು ಹಾರೈಸಿ ಹೋದವರೆ ಸಾವಿರಾರು ಜನ.

ಆರೋಗ್ಯ ಶಿಬಿರಗಳು ಮತ್ತು ಬಡವರಿಗೆ ಉಚಿತ ಅಥವಾ ಕಡಿಮೆ ದರದಲ್ಲಿ ಅತ್ಯುತ್ತಮ ಚಿಕಿತ್ಸೆ ನೀಡುತ್ತ ಬಂದಿರುವ ಶ್ರೀಯುತರ ಆರೋಗ್ಯ ಕ್ಷೇತ್ರ ಮತ್ತು ಸಾಮಾಜಿಕ ಸೇವೆಗಾಗಿ ಕರ್ನಾಟಕ ಪ್ರೆಸ್ ಕ್ಲಬ್‌ನ ಭಾರತ ಸೇವಾ ರತ್ನ ಪ್ರಶಸ್ತಿ ನೀಡಿರುವುದು ಇವರ ಅಭಿಮಾನಿಗಳಿಗೆ ಎಲ್ಲಿಲ್ಲದ ಸಂತೋಷತಂದಿದೆ.

ರವಿ ಕುಮಾರ್ ಅವರ ಸೇವೆ ಬರಿ ನಗರದ ಜನರಿಗೆ ಸೀಮಿತ ವಾಗಿಲ್ಲ ಸುತ್ತಮುತ್ತಲಿನ ಹಳ್ಳಿಗಳಿಂದ ಬರುವ ರೋಗಿಗಳೆ ಹೆಚ್ಚು ಇವರು ಚಿಕಿತ್ಸೆ ಮಾಡುತ್ತಿದ್ದಾರೆ.

# ಸಂಭ್ರಮದ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯೋತ್ಸವ

## ಎಲ್ಲ ಸಮಾಜದ ಏಳ್ಗೆಗೆ ನಮ್ಮ ಸರ್ಕಾರ ಬದ್ಧ: ಜಮೀರ್ ಅಹ್ಮದ್ ಖಾನ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ರಾಜ್ಯದ ಪ್ರತಿ ಸಮಾಜ, ಸಮುದಾಯಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಶಿವಯೋಗಿ ಸಿದ್ದರಾಮೇಶ್ವರರ 854ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿನ ಎಲ್ಲಾ ಹಿಂದುಳಿದ ವರ್ಗಗಳು, ಬಡವರು ಅಭಿವೃದ್ಧಿ ಹೊಂದಬೇಕು ಎಂಬುದೇ ನಮ್ಮ ಸರ್ಕಾರದ ಮುಖ್ಯ ಆಶಯವಾಗಿದೆ ಎಂದು ಪ್ರತಿಪಾದಿಸಿದ ಸಚಿವರು, ಸಿದ್ದರಾಮೇಶ್ವರರು ಭಕ್ತಿ, ಯೋಗ ಮತ್ತು ಸೇವೆಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದು ತಿಳಿಸಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲ್ಲು ಹೊಡೆಯುವ ವೃತ್ತಿಯಿಂದಲೇ ತಮ್ಮ ಬದುಕು ಕಟ್ಟಿಕೊಂಡವರು ಭೋವಿ ಸಮಾಜದವರು. ಸಮಾಜದ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದು, ನಗರದಲ್ಲಿ ಭೋವಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಸುವರ್ಣ ಬಳ್ಳಾರಿ ನಗರ ಕಟ್ಟಲು ಶ್ರಮಿಸುವೆ ಎಂದು ಭರವಸೆ ನೀಡಿದರು.

ಸಂಸದ ಈ.ತುಕಾರಾಮ್ ಅವರು ಮಾತನಾಡಿ, ಶಿವಶರಣರ ಜೀವನ ಚರಿತ್ರೆ, ಆಚಾರ-ವಿಚಾರಗಳನ್ನು ಈಗಿನ ಪೀಳಿಗೆಗೆ ಮನದಟ್ಟು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಯಂತಿ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ. ಒಬ್ಬ ಮನುಷ್ಯ ನಿರ್ದಿಷ್ಟ ಗುರಿ ಇಟ್ಟುಕೊಂಡು ಸತ್ಯ, ನ್ಯಾಯ ಪಾಲಿಸಿಕೊಂಡು ವಿಜಯೋತ್ಸವದೆಡೆಗೆ ಸಾಗಬೇಕು ಎಂಬುದನ್ನು ಬಿಂಬಿಸುವುದೇ ಜಯಂತಿ ಕಾರ್ಯಕ್ರಮಗಳ ಆಚರಣೆಯ ಮುಖ್ಯ ಉದ್ದೇಶವಾಗಿವೆ ಎಂದು ಹೇಳಿದರು. ಸಾರ್ವಜನಿಕರು ಪ್ರಜ್ಞಾವಂತರಾಗಿ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಸಾಮಾಜಿಕ, ಆರ್ಥಿಕವಾಗಿ ಸಬಲರಾಗಬೇಕು. ಭೋವಿ ಸಮಾಜದವರು ಕಾಯಕಯೋಗಿಗಳು.




ಮನೆ ಕಟ್ಟುವವರಾದರೂ ಆರೋಗ್ಯವಂತ ಸಮಾಜ ಕಟ್ಟಲು ಸಹ ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿರುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಸಹ ಅನುಷ್ಠಾನಗೊಳಿಸುತ್ತಿದೆ. ಹೊಸ ವರ್ಷದ ಮಕರ ಸಂಕ್ರಾಂತಿ ಹಬ್ಬದೊಂದಿಗೆ ಹೊಸ ಹುರುಪಿನೊಂದಿಗೆ ಸಾಗೋಣ ಎಂದು ಆಶಯ ವ್ಯಕ್ತಪಡಿಸಿದರು.

ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ.ಎನ್. ಗಣೇಶ್ ಅವರು ಮಾತನಾಡಿ, ಶಿವಯೋಗಿ ಸಿದ್ಧರಾಮೇಶ್ವರರು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವಿಶ್ವಗುರು ಬಸವಣ್ಣನವರ ಕಾಲಘಟ್ಟದ ಅನುಭವ ಮಂಟಪದಲ್ಲಿ ಅಭಿವೃದ್ಧಿ ಕೆಲಸದಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಭೋವಿ ಸಮಾಜವು ಹಿಂದುಳಿದ ಸಮಾಜವಾಗಿದ್ದು, ರಾಜಕೀಯ, ಆರ್ಥಿಕವಾಗಿ ಅವರನ್ನು ಮುನ್ನೆಲೆಗೆ ತರುವ ಕೆಲಸ ನಮ್ಮ ಸರ್ಕಾರ ಮಾಡಲಿದೆ ಎಂದರು.

ಶಿಕ್ಷಣವೇ ಆಯುಧ. ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಮುಖ್ಯ ಗುರಿಯಾಗಿಸಬೇಕು. ಮಕ್ಕಳ ಭವಿಷ್ಯ ರೂಪಿಸುವ ಕೆಲಸ ಮಾಡಬೇಕು ಎಂದು ಹೇಳಿದ ಅವರು, ಕಂಪ್ಲಿ ಕ್ಷೇತ್ರದ ಕುರುಗೋಡು ಪಟ್ಟಣದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಭೋವಿ ಸಮಾಜದ ಸಮುದಾಯ ಭವನ ನಿರ್ಮಿಸಲಾಗುತ್ತಿದ್ದು, ಈಗಾಗಲೇ 50 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಬಳ್ಳಾರಿಯ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂ ಭಾಷಾ ಅವರು ವಿಶೇಷ ಉಪನ್ಯಾಸ ನೀಡಿ, ಅನೇಕ ಶರಣರ ವಚನ ಸಾಹಿತ್ಯದಿಂದ ಜೀವನ ಶೈಲಿಯೇ ಬದಲಾಯಿಸಿದ 12ನೇ ಶತಮಾನದ ಅದ್ವಿತೀಯ ಕಾಲದಲ್ಲಿದ್ದವರು ಶಿವಯೋಗಿ ಸಿದ್ಧರಾಮೇಶ್ವರರು. ನಮ್ಮನ್ನು ನಾವು ಅರಿತುಕೊಂಡಾಗ ಮಾತ್ರ ಶರಣರನ್ನು ಅರಿಯಲು ಸಾಧ್ಯವಾಗಲಿದೆ ಎಂದು ಹೇಳಿದರು.

ಶಿವಯೋಗಿ ಸಿದ್ಧರಾಮೇಶ್ವರರು ಒಬ್ಬ ಮಹಾನ್ ವಚನಕಾರ ಮತ್ತು ಕರ್ಮಯೋಗಿ. ಇವರು ಮಹಾರಾಷ್ಟ್ರದ ಸೊಲ್ಲಾಪುರ (ಸೊನ್ನಲಗಿ) ಜಿಲ್ಲೆಯ ಮುಧಗಿ ಎಂಬಲ್ಲಿ ಜನಿಸಿದರು. ಬಾಲ್ಯದಿಂದಲೇ ಭಕ್ತಿ, ಕಾಯಕ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಕೆರೆಗಳ ನಿರ್ಮಾಣ, ಲಿಂಗ ಪ್ರತಿಷ್ಠಾಪನೆ ಮತ್ತು ಅನುಭವ ಮಂಟಪದಲ್ಲಿ ಪಾಲ್ಗೊಂಡು ಶಿವಯೋಗ ಸಾಧಿಸಿ, ಸಾರ್ವಜನಿಕ ಸೇವೆಗಾಗಿ ತಮ್ಮನ್ನು ತಾವು ಅರ್ಪಿಸಿದ ಮಹಾತ್ಮರಾಗಿದ್ದವರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಂದ್ಯಾಳಿನ ಜಿ.ಪಿ.ಸಾಯಿಶೃತಿ ಅವರು ಭಕ್ತಿ ಸಂಗೀತ ಪ್ರಸ್ತುತಪಡಿಸಿದರು.

*ಅದ್ದೂರಿ ಮೆರವಣಿಗೆ:*

ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ಪುಷ್ಪಾರ್ಚನೆಗೈಯುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾದ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರ ಒಳಗೊಂಡ ಬೆಳ್ಳಿರಥದ ಮೆರವಣಿಗೆಯು ನಗರದ ಗಡಿಗಿ ಚೆನ್ನಪ್ಪ ವೃತ್ತ- ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ-ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಸಾಗಿಬಂದು ಸಂಪನ್ನಗೊಂಡಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಭೋವಿ (ವಡ್ಡರ) ಸಂಘದ ಅಧ್ಯಕ್ಷ ವಿ.ರಾಮಾಂಜನೇಯ, ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಸಮಾಜದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

# ಕನ್ನಡ ವಿರೋಧಿ ಸ್ಕೂಲ್ ಪರವಾನಿಗೆ ರದ್ದುಪಡಿಸಿ: ಹುಲುಗಪ್ಪ ವಿ. ಎಚ್




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಕುವೆಂಪು ನಗರದಲ್ಲಿರುವ ಜೈನ್ ಇಂಟರ್ನ್ಯಾಷನಲ್ ಸ್ಕೂಲ್ ನಲ್ಲಿ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ, ಸರ್ಕಾರದ ನಿಯಮನುಸಾರ ರಾಜ್ಯದಲ್ಲಿ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕು ಎನ್ನುವ ಆದೇಶವಿದೆ ಆದೇಶವನ್ನು ಈ ಶಾಲೆಗಳಲ್ಲಿ ಆಂಗ್ಲ ಭಾಷೆಯನ್ನು ಬಳಸುತ್ತಾ ಕನ್ನಡವನ್ನು ಕಡೆಗಣಿಸುತ್ತಿದ್ದಾರೆ, ಇದನ್ನು ನಮ್ಮ ವೇದಿಕೆಯಿಂದ ಪ್ರಶ್ನಿಸಿದಾಗ ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ತಿಳಿಸದೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿ ಎಂದು ಉದ್ಧಟತನದಿಂದ ಮಾತನಾಡುತ್ತಿದ್ದಾರೆ, ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವಭೌಮ ಎನ್ನುವ ಮಾತಿನಂತೆ ಆಡಳಿತ ಭಾಷೆಯಾಗಿ ಮತ್ತು ಪ್ರಥಮ ಭಾಷೆಯಾಗಿ ಬೋಧನಾ ಭಾಷೆಯನ್ನು ತಪ್ಪದೇ ಕನ್ನಡ ಭಾಷೆಯನ್ನು ಬಳಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಹುಲಗಪ್ಪ, ಬಳ್ಳಾರಿ ನಗರದಲ್ಲಿರುವ ಹಲವಾರು ಕನ್ನಡ ವಿರೋಧಿ ಶಾಲೆಗಳ ಪರವಾಗಿಯನ್ನು ರದ್ದುಪಡಿಸಬೇಕೆಂದು ಸಂಬಂಧಿಸಿದ ಇಲಾಖಾ ಅಧಿಕಾರಿಗಳನ್ನು ಒತ್ತಾಯಿಸಿದರು.

ಅದೇ ರೀತಿಯಲ್ಲಿ ರಾಷ್ಟ್ರೋತ್ಥಾನ ಶಾಲೆಯಲ್ಲಿಯೂ ಸಹ ಕನ್ನಡವನ್ನು ಕಡೆಗಣಿಸಿ ಆಂಗ್ಲ ಭಾಷೆಯನ್ನು ಬಳಸಲಾಗುತ್ತಿದೆ ಕೂಡಲೇ ಈ ಶಾಲೆಗಳ ಮೇಲೆ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಕ್ರಮ ಕೈಗೊಂಡು ಶಾಲೆಗಳ ಪರವಾನಿಗೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು. ಶಾಲೆ ಆರಂಭಿಸುವ ವೇಳೆ ಪರವಾನಿಗೆಯನ್ನು ಪಡೆದು ಕೊಂಡಾಗ ಸರ್ಕಾರದ ನೀತಿ ನಿಯಮಗಳನ್ನು ಸಹ ಗಾಳಿಗೆ ತೂರಿ ತಮ್ಮ ಇಷ್ಟಾನುಸಾರ ಶಾಲೆಗಳನ್ನು ವ್ಯವಹಾರಿಕ ಕೇಂದ್ರಗಳನ್ನಾಗಿ ಮಾಡಿಕೊಂಡಿದ್ದಾರೆ, ಕರ್ನಾಟಕ ರಾಜ್ಯದ ಎಲ್ಲಾ ಸೌಲಭ್ಯಗಳನ್ನು ಪಡೆದು-ಕೊಂಡು ಶಾಲೆಗಳನ್ನು ಆರಂಭಿಸಿ ಕನ್ನಡ ಭಾಷೆಗೆ ದ್ರೋಹ ಬಗೆಯುತ್ತಿರುವ ಇಂತಹ ಶಾಲೆಗಳ ಪರವಾಗಿಯನ್ನು ಕೂಡಲೇ ರದ್ದುಪಡಿಸಬೇಕೆಂದರು.

ವೇದಿಕೆಯ ರಾಜ್ಯ ಸಂಚಾಲಕ ಅದ್ದಿಗೇರಿ ರಾಮಣ್ಣ ಈ ಸಂದರ್ಭದಲ್ಲಿ ಮಾತನಾಡಿ, ಮುಂದಿನ ದಿನಗಳಲ್ಲಿ ಈ ಕನ್ನಡ ವಿರೋಧಿ ನೀತಿಯನ್ನು ಸರಿಪಡಿಸಿಕೊಳ್ಳದಿದ್ದಲ್ಲಿ ನಮ್ಮ ಸಂಘಟನೆಯ ನೂರಾರು ಕಾರ್ಯಕರ್ತರೊಂದಿಗೆ ಶಾಲೆಯ ಮುಖ್ಯ ಗೇಟ್ ಅನ್ನು ಬಂದ್ ಮಾಡಿ ಪ್ರತಿಭಟನ ಧರಣಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾ ಗೌರವ ಅಧ್ಯಕ್ಷ ದುರುಗಣ್ಣ ಹೆಚ್, ಜಿಲ್ಲಾ ಸಂಚಾಲಕ ಕಂಪ್ಲಿ ರಮೇಶ್, ತಾಲೂಕು ಅಧ್ಯಕ್ಷ ವೆಂಕಟರಮಣ, ಹನುಮೇಶ್, ಮಹಾದೇವ, ಶಂಕರಪ್ಪ, ಹನುಮೇಶ್, ಲೋಕೇಶ್, ಪವನ್, ವಾಸಿಂ, ಅಕ್ಬರ್ ಸೇರಿದಂತೆ ಹಲವಾರು ಜನ ರಕ್ಷಣಾ ವೇದಿಕೆಯ ಕಾರ್ಯಕರ್ತರಿದ್ದರು.

# ಸಂಕ್ರಾಂತಿ ನಾಡಿನ ಸಾಂಸ್ಕೃತಿಕ ಹಬ್ಬ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸಂಕ್ರಾಂತಿ ನಾಡಿನ ಸಾಂಸ್ಕೃತಿಕ ಹಬ್ಬವಾಗಿದ್ದು, ಆಧುನಿಕ ಕಾಲಘಟ್ಟದಲ್ಲಿ ದೇಶಿ ಸಂಸ್ಕೃತಿಯನ್ನು ಬಿಂಬಿಸುವ ಹಬ್ಬಗಳನ್ನು ಆಚರಿಸುವುದು ಅಗತ್ಯವಾಗಿದೆ. ಆ ಮೂಲಕ ಮಕ್ಕಳು ಮತ್ತು ಯುವಜನತೆಗೆ ನಾಡಿನ ಸಂಸ್ಕೃತಿಯನ್ನು ಪರಿಚಯಿಸಬೇಕಿದೆ ಎಂದು ಎಸ್.ಎನ್.ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ ಹೇಳಿದ್ದಾರೆ.



ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಂಕ್ರಾಂತಿ ಸಂಭ್ರಮದ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಯುವ ಜನಾಂಗ ದೇಶಿ ಸಂಸ್ಕೃತಿಯಿಂದ ದೂರವಾಗುತ್ತಿರುವುದು ಆತಂಕದ ಸಂಗತಿ. ಈ ದಿಸೆಯಲ್ಲಿ ನಾಡಿನ ಹಬ್ಬಗಳನ್ನು ಸಂಭ್ರಮದಿಂದ ಆಚರಿಸಬೇಕಿದೆ ಎಂದರು. ಸಮಾರಂಭದಲ್ಲಿ ಆಸ್ಪತ್ರೆಯ ಸಿಬ್ಬಂದಿ ದೇಶಿ ಉಡುಪನ್ನುಟ್ಟು ಸಾಂಸ್ಕೃತಿಕ ಕಲೆ ಸಾರುವ ಬಣ್ಣ ಬಣ್ಣದ ರಂಗೋಲಿಗಳನ್ನು ಚಿತ್ತಾಕರ್ಷಕವಾಗಿ ಬಿಡಿಸಿದ್ದರು. ಬಿಡಿಸಿದ ರಂಗೋಲಿಗಳು ವಿವಿಧ ಬಗೆಯ ಸಂಕ್ರಮಣದ ಶುಭಾಷಯಗಳನ್ನು ಕೋರುತ್ತಾ ಸಾಂಪ್ರದಾಯಿಕ ಸಂದೇಶ ಸಾರಿದವು.

ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪ್ರೊಜೆಕ್ಟ್ ಮ್ಯಾನೇಜರ್ ರಾಜೇಂದ್ರ ಹಿರೇಮಠ, ಸತ್ಯನಾರಾಯಣ ರೆಡ್ಡಿ, ಮಧುಮತಿ, ಶ್ರೇಯಾ, ನಿತೀಶ ಉಳ್ಳಾಗಡ್ಡಿ ಸಂಕ್ರಾಂತಿ ಉತ್ಸವದ ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಮೆಡಿಕಲ್ ಕಾಲೇಜಿನ ಉಪಪ್ರಾಚಾರ್ಯರಾದ ಡಾ.ಸಿ.ಎಸ್.ಹಿರೇಮಠ, ವೈದ್ಯಕೀಯ ಅಧೀಕ್ಷಕರಾದ ಡಾ.ಶ್ರೀರಾಮ ಕೋರಾ, ಸುಪರ್ ಸ್ಪೆಷಾಲಿಟಿ ತಜ್ಞವೈದ್ಯರಾದ ಡಾ.ದೇವರೆಡ್ಡಿ, ಡಾ.ಅಮರೇಶ ದೇಗನಾಳ, ಡಾ.ಅನೀಲ್ ಸತ್ಯರಡ್ಡಿ ಹಾಗೂ ಇನ್ನಿತರ ವೈದ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಜ.16 ರಂದು ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಯಲ್ಲಿ ವಿದ್ಯುತ್ ಲೈನ್ ಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ಜ.16 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯ ವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು:**

ಎಫ್-7 ವ್ಯಾಪ್ತಿಯ ಸಂಗನಕಲ್ಲು ರಸ್ತೆ, ಎಸ್.ಎನ್.ಪೇಟ್ 3ನೇ ಕ್ರಾಸ್, ಜಿಲ್ಲಾ ಆಸ್ಪತ್ರೆ, ರಾಘವ ಕಲಾ ಮಂದಿರ, ಅನಂತಪುರ ರಸ್ತೆ, ವಡ್ಡರ ಬಂಡೆ, ಅಗಡಿ ಮಾರೆಪ್ಪ ಕಾಂಪೌಂಡ್, ರೂಪನಗುಡಿ ರಸ್ತೆ, ಮುಬಾರಕ್ ಟಾಕೀಸ್, ಬಾಲಾಜಿರಾವ್ ರಸ್ತೆ, ಕೆ.ಸಿ.ರೋಡ್, ಮೀನಾಕ್ಷಿ ಸರ್ಕಲ್, ಬೆಂಗಳೂರು ರಸ್ತೆ, ದುಗ್ಗಪ್ಪ ಬೀದಿ, ರೆಡ್ಡಿ ಬೀದಿ, ಅಲ್ಲಂ ಬೀದಿ, ಮುಲ್ಲಂಗಿ ಸಂಜೀವಪ್ಪ ಬೀದಿ, ರೂಪನಗುಡಿ ನರಸಪ್ಪ ಬೀದಿ, ತಾಯಮ್ಮ ಕಟ್ಟೆ.

ಎಫ್-23 ವ್ಯಾಪ್ತಿಯ ಹೆಚ್.ಗವಿಯಪ್ಪ ವೃತ್ತ, ಕಾರ್ ಸ್ಟ್ರೀಟ್, ಬ್ರಾಹ್ಮಿಣ್ ಸ್ಟ್ರೀಟ್, ಮಾರುತಿ ಕಾಲೋನಿ, ಜೈನ್ ಮಾರ್ಕೆಟ್ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಯಂತಿ ಅದ್ದೂರಿ ಮೆರವಣಿಗೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ಪುಷ್ಪಾರ್ಚನೆಗೈಯುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾದ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರ ಒಳಗೊಂಡ ಬೆಳ್ಳಿರಥದ ಮೆರವಣಿಗೆಯು ನಗರದ ಗಡಿಗಿ ಚೆನ್ನಪ್ಪ ವೃತ್ತ- ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ-ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಸಾಗಿಬಂದು ಸಂಪನ್ನಗೊಂಡಿತು.

# ಹಾನಗಲ್ ಕುಮಾರಸ್ವಾಮಿಗಳ ಪುರಾಣ ಫೆ.6ರಿಂದ 8 ಟೀಕಿನಮಠದದ ಶ್ರೀಗಳ ಚರಪಟ್ಟಾಧಿಕಾರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಯುಗಪುರುಷಲಿಂ.ಕುಮಾರಸ್ವಾಮಿಗಳ 159ನೇಜಯಂತಿ,ಬಾಗಲಕೋಟೆಯ ಟೀಕಿನಮಠದ ಶತಾಯುಷಿ ಲಿಂ.ಮಲ್ಲಿಕಾರ್ಜುನಮಹಾಸ್ವಾಮಿಗಳ ರಜತಪುಣ್ಯಸ್ಮರಣೆ,ಲಿಂ.ರೇವಣಸಿದ್ಧ ಮಹಾಸ್ವಾಮಿಗಳದಶಮಪುಣ್ಯಸ್ಮರಣೆ ಮತ್ತು ಮಲ್ಲಿಕಾರ್ಜುನ ದೇಶಿಕರ ನಿರಂಜನಪಟ್ಟಾಧಿಕಾರಕಾರ್ಯಕ್ರಮಗಳು ಫೆಬ್ರುವರಿ 6,7 ಹಾಗೂ 8 ರಂದು ಜರುಗಲಿವೆ ಎಂದು ಟೀಕಿಮಮಠದ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಸಮಿತಿಯಕಾರ್ಯಾಧ್ಯಕ್ಷಡಾ.ವೀರಣ್ಣ ಚರಂತಿಮಠ ತಿಳಿಸಿದರು.

ನಗರದ ಟೀಕಿನಮಠದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರುವರಿ 8 ರಂದು ನಿರಂಜನ ಪಟ್ಟಾಧಿಕಾರ ಕಾರ್ಯಕ್ರಮವನ್ನು ನೆರವೇರಿಸಲು ಗುರು ಹಿರಿಯರು ನಿರ್ಧರಿಸಿದ್ದು, ಶ್ರೀ ಮಲ್ಲಿಕಾರ್ಜುನ ದೇಶಿಕರ ನಿರಂಜನ ಪಟ್ಟಾಧಿಕಾರಮಹೋತ್ಸವದಅಂಗವಾಗಿ ಜನವರಿ 16 ಗುರುವಾರದಿಂದ ಫೆಬ್ರುವರಿ 5ರ ವರೆಗೆ 21 ದಿನಗಳ ಕಾಲ ಚರಂತಿಮಠದ ಶಿವಾನಂದ ಮಂಟಪದಲ್ಲಿಪ್ರತಿ ದಿನ ಸಾಯಂಕಾಲ 6–30ಕ್ಕೆ ಹಾನಗಲ್ ಕುಮಾರ ಮಹಾಸ್ವಾಮಿಗಳವರ ಪುರಾಣ ಪ್ರವಚನ ನಡೆಯಲಿದೆ ಎಂದು ಹೇಳಿದರು.ಎಲ್ಲಕಾರ್ಯಕ್ರಮಗಳನ್ನು ಅದ್ದೂರಿಯಾಗಿನಡೆಸಲುಮಹೋತ್ಸವ ಸಮಿತಿಯನ್ನು ರಚಿಸಿಲಾಗಿದೆ. ಚರಂತಿಮಠ ಪ್ರಭುಸ್ವಾಮಿಗಳು ಗೌರವಾಧ್ಯಕ್ಷರಾಗಿದ್ದು, ಗೌರವ ಉಪಾಧ್ಯಕ್ಷರುಗಳಾಗಿ ಕೋಟೆಕಲ್ ಕಮತಗಿಯ ಶ್ರೀ ಹೊಳೆಹುಚ್ಚೇಶ್ವರ ಸ್ವಾಮಿಗಳು, ಅಮೀನಗಡದ ಶಂಕರರಾಜೇಂದ್ರಸ್ವಾಮಿಗಳು, ಗುಳೆದಗುಡ್ಡದ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು,ಕೆರೂರಿನಡಾ.ಶಿವಕುಮಾರ ಶಿವಾಚಾರ್ಯಸ್ವಾಮಿಗಳು,ಬಿಳಗಿಯ ಗುರುಪಾದ ಶಿವಾಚಾರ್ಯ ಸ್ವಾಮಿಗಳು, ಗುಳೆದಗುಡ್ಡದ ಶ್ರೀ ನೀಲಕಂಠಶಿವಾಚಾರ್ಯಸ್ವಾಮಿಗಳು ಗೌರವಉಪಾಧ್ಯಕ್ಷರುಗಳಾಗಿರುತ್ತಾರೆ.

ಪಟ್ಟಾಧಿಕಾರ ಮಹೋತ್ಸವ ಸಮಿತಿಗೆ ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಅಧ್ಯಕ್ಷರಾಗಿದ್ದು, ರಾಜ್ಯಸಭಾ ಸದಸ್ಯನಾರಾಯಣಸಾ ಭಾಂಡಗೆ, ಮಾಜಿ ಸಚಿವ ಎಸ್. ಆರ್.ಪಾಟೀಲ,ಅಜಯಕುಮಾರ ಸರನಾಯಕ, ವಿಧಾನ ಪರಿಷತ್ ಸದಸ್ಯಪಿ.ಎಚ್.ಪೂಜಾರ,ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಉಪಾಧ್ಯಕ್ಷರುಗಳಾಗಿದ್ದಾರೆ.

ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಕಾರ್ಯಾಧ್ಯಕ್ಷರಾಗಿದ್ದು, ಮಹೇಶ ಅಥಣಿ,ಬಸವಪ್ರಭು ಸರನಾಡಗೌಡ ಉಪಾಧ್ಯಕ್ಷರು, ವಿಜಯಕುಮಾರ ಅಂಗಡಿ ಕೋಶಾಧ್ಯಕ್ಷ, ಅಖಿಲಭಾರತ ವೀರಶೈವಲಿಂಗಾಯತಮಹಾಸಭಾ ಜಿಲ್ಲಾಧ್ಯಕ್ಷಜಿ.ಎನ್.ಪಾಟೀಲಪ್ರಧಾನ ಕಾರ್ಯದರ್ಶಿ, ಚಂದ್ರಶೇಖರ ಶೆಟ್ಟರ, ಬಸವರಾಜ ಭಗವತಿ, ಎ.ಎಸ್.ಪಾವಟೆ, ಬಸವರಾಜ ಮುಕ್ಕುಪ್ಪಿ ಕಾರ್ಯದರ್ಶಿಗಳಾಗಿದ್ದಾರೆ.

ಕಾರ್ಯಕ್ರಮದ ಯಶಸ್ವಿಗೆ ವಿವಿಧಸಮಿತಿಗಳನ್ನುರಚಿಸಲಾಗಿದ್ದು ಅದರಲ್ಲಿ ಹಣಕಾಸು ಸಮಿತಿಗೆ ವಿಜಯಕುಮಾರಅಂಗಡಿ,ದಾಸೋಹ ಸಮೀತಿಗೆಕುಮಾರಸ್ವಾಮಿ ಹಿರೇಮಠ, ಪ್ರವಚನ ಸೇವಾ ಸಮಿತಿಗೆ ಪ್ರಕಾಶ ರೇವಡಿಗಾರ, ಪ್ರಚಾರ ಸಮಿತಿಗೆ ಮಹಾಂತೇಶ ಶೆಟ್ಟರ. ಪೂಜ್ಯಶ್ರೀಗಳ ವ್ಯವಸ್ಥಾಪಕ ಸಮಿತಿಗೆ ಪ್ರಭಯ್ಯಾ ಸರಗಣಾಚಾರಿ, ಸಾಂಸ್ಕೃತಿಕ ಹಾಗೂ ಸ್ವಯಂ ಸೇವಾ ಸಮಿತಿಗೆ ಗುರುಬಸಯ್ಯಾಸೂಳಿಬಾವಿ,ವೇದಿಕೆ, ಅತಿಥಿ ಸತ್ಕಾರ ಸಮಿತಿಗೆ ಅಶೋಕ ಸಜ್ಜನ,ಉತ್ಸವ(ಮೆರವಣಿಗೆ)ಸಮಿತಿಗೆ ಮಲ್ಲಿಕಾರ್ಜುನಸಾಸನೂರ,ಮಹಿಳಾ ಸಮಿತಿಗೆ ನಿರ್ಮಲಾ ಹಲಕುರ್ಕಿ ಅವರು ಮುಖ್ಯಸ್ಥರಾಗಿರುತ್ತಾರೆ.

ಪ್ರವಚನ: ಜ.16 ಶುಕ್ರವಾರ ಪುರಾಣಪ್ರವಚನದಪ್ರಾರಂಭೋತ್ಸವ ಜರುಗಲಿದ್ದು ಸಮಾರಂಭದ ದಿವ್ಯ ಸಾನಿದ್ಯವನ್ನು ಚರಂತಿಮಠದ ಪ್ರಭುಸ್ವಾಮಿಗಳು ವಹಿಸಲಿದ್ದಾರೆ. ಹಾವೇರಿ ಹುಕ್ಕೇರಿಮಠದ ಸದಾಶಿವ ಮಹಾಸ್ವಾಮಿಗಳು ನೇತೃತ್ವವಹಿಸಿ ಪ್ರವಚನಕ್ಕೆ ಚಾಲನೆ ನೀಡುವರು. 21ದಿನಗಳ ಕಾಲ ಹಾವೇರಿಯ ಅಕ್ಕಿಮಠದ ಗುರುಲಿಂಗ ಮಹಾ ಸ್ವಾಮಿಗಳು ಪ್ರವಚನ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮತಿಯಕಾರ್ಯಾದ್ಯಕ್ಷಡಾ.ವೀರಣ್ಣ ಚರಂತಿಮಠ ವಹಿಸಲಿದ್ದಾರೆ.

ಇದೇಸಂದರ್ಭದಲ್ಲಿಅಮೀನಗಡದ ಸಾಹಿತಿಎಚ್.ಬಿ.ರಂಗಾಪುರರಚನೆಯ ಬಾಗಲಕೋಟೆಯ ಟೀಕಿನಮಠ–ಟೆಂಗಿನಮಠ ಪರಂಪರೆ ಎಂಬ ನೂತನ ಕೃತಿಯನ್ನುಗುಳೆದಗುಡ್ಡದ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಬಿಡುಗಡೆಗೊಳಿಸಲಿದ್ದಾರೆ.ಬಸವೇಶ್ವರ ಕಲಾಮಹಾವಿದ್ಯಾಲಯದಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಕೃತಿ ಪರಿಚಯ ಮಾಡಲಿದ್ದಾರೆ. ಗ್ರಂಥದಾನಿಗಳಾದ ಶ್ರೀಮತಿ ಪಾರ್ವತಮ್ಮ ಬಳೂಲಮಠ, ಶಶಿಕಲಾ ಬಳೂಲಮಠ, ಲೇಖಕ ಎಚ.ಟಿ.ರಂಗಾಪುರಉಪಸ್ಥಿತರಿರುತ್ತಾರೆ.

21 ದಿನಗಳ ಪ್ರವಚನ ಸಂದರ್ಭದಲ್ಲಿ ಎರಕಿಹಾಳದ ದೇವರಾಜ ಗವಾಯಿಗಳು ಹಾರ್ಮೋನಿಯಮ್ ಹಾಗೂ ಗಾಯನ ಮತ್ತು ಕೊಡೆಕಲ್‌ನ ಸುರೇಶಕುಮಾರ ಹೂಗಾರ ತಬಲಾ ಸಾಥ ನೀಡಲಿದ್ದಾರೆ. ಪೂಜ್ಯ ಸಾಮಿಗಳ ನೇತೃತ್ವದಲ್ಲಿ ಹಿರಿಯರು–ಕಿರಿಯರು ಒಡಗೂಡಿ ಜ.16 ರಿಂದ ಪೆಬ್ರುವರಿ 5 ರವರೆಗೆ ದಿನಾಲೂ ಪ್ರಾತ;ಕಾಲ 6–30 ರಿಂದ 8 ಗಂಟೆವರೆಗೆ ಪ್ರಭಾತ ಸಂಚಲನ ಜರುಗಲಿದ್ದು, 7 ದಿನ ಬಾಗಲಕೋಟೆಯಹಳೆಪ್ರದೇಶಗಳಲ್ಲಿ, 7 ದಿನ ವಿದ್ಯಾಗಿರಿ ಹಾಗೂ ಇನ್ನು 7 ದಿನ ನವನಗರ ಪ್ರದೇಶಗಳಲ್ಲಿ ಪ್ರಭಾತ ಸಂಚಲನ ಜರುಗಲಿದೆ ಎಂದು ವೀರಣ್ಣ ಚರಂತಿಮಠ ತಿಳಿಸಿದರು.ಪತ್ರಿಕಾಗೋಷ್ಠಿಯಲ್ಲಿ ಕೋಟೆಕಲ್–ಕಮತಗಿಯ ಹೊಳೆ ಹುಚ್ಚೇಶ್ವರಸ್ವಾಮಿಗಳು,ಗುಳೇದಗುಡ್ಡದ ಅಭಿನವ ಒಪ್ಪತ್ತೇಶ್ವರಸ್ವಾಮಿಗಳು. ಬೆಳಗಾವಿಕಾರಂಜಿಮಠದಶಿವಯೋಗಿ ದೇವರು,ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಜಿ.ಎನ್.ಪಾಟೀಲ, ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಇದ್ದರು.

# ಕರ ವಸೂಲಿ ಪೂರ್ಣಗೊಳಿಸಲು ಸೂಚನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬರುವ ಫೆಬ್ರುವರಿ ಮಾಹೆ ಅಂತ್ಯದೊಳಗೆಕರವಸೂಲಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಕರ ವಸೂಲಿಗಾರರಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ ನೂತನ ಸಭಾಂಗಣದಲ್ಲಿ ಜರುಗಿದ ಕರ ವಸೂಲಾತಿ 2025–26ನೇ ಸಾಲಿನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ಗ್ರಾಮ ಪಂಚಾಯಿತಿವಾರು ಪ್ರತಿ ದಿನ ನಿರಂತರವಾಗಿ ಮನೆ ಭೇಟಿ ಮಾಡುವ ಮೂಲಕ ಕರ ವಸೂಲಿ ಮಾಡಿ ಪ್ರತಿಶತ ಪ್ರಗತಿ ಸಾಧಿಸಬೇಕು ಎಂದು ತಿಳಿಸಿದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ತೆರಿಗೆಸಂಗ್ರಹಣೆಯಲ್ಲಿಗಮನಾರ್ಹ ಪ್ರಗತಿ ಸಾಧಿಸಬೇಕು. ಇದು ಜಿಲ್ಲೆಯ ಪಂಚಾಯತ ರಾಜ್ ಹಾಗೂ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಪರಿಣಾಮಕಾರಿ ಕಾರ್ಯನಿರ್ವಹಣೆ ಹಾಗೂ ನಾಗರಿಕರ ಸಹಕಾರ ಅಗತ್ಯವಾಗಿದೆ. ಗ್ರಾಮ ಪಂಚಾಯತ, ತಾಲೂಕಾ ಪಂಚಾಯತ ಹಾಗೂ ಜಿಲ್ಲಾ ಪಂಚಾಯತ ಮಟ್ಟದಲ್ಲಿ ತೆರಿಗೆ ಸಂಗ್ರಹಣೆಗೆ ವಿಶೇಷ ಒತ್ತು ನೀಡಿ, ಗುರಿಆಧಾರಿತಕಾರ್ಯಯೋಜನೆಯ ಮೂಲಕ ಉತ್ತಮ ಫಲಿತಾಂಶ ಪಡೆಯಲಾಗಿದೆ ಎಂದು ಕರೇರ ಹೇಳಿದರು.

ಆನ್‌ಲೈನ್ ಪಾವತಿ ವ್ಯವಸ್ಥೆ ಹಾಗೂ ಡಿಜಿಟಲ್ ಸೇವೆಗಳ ಅನುಷ್ಠಾನದಿಂದ ತೆರಿಗೆ ಪಾವತಿ ಸುಲಭವಾಗಿ ಸಮಯಕ್ಕೆ ಸರಿಯಾಗಿ ನಡೆಯಬೇಕು. ತೆರಿಗೆ ಬಾಕಿದಾರರ ಕುರಿತು ಜಾಗೃತಿ ಅಭಿಯಾನ, ಮನೆ ಮನೆಗೆ ಭೇಟಿ ಹಾಗೂ ಸಭೆಗಳ ಮೂಲಕ ಸಾರ್ವಜನಿಕರಲ್ಲಿ ತೆರಿಗೆ ಪಾವತಿಯ ಮಹತ್ವದ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಬಾಗಲಕೋಟೆ ಮತ್ತು ಜಮಖಂಡಿ ಉಪ ವಿಭಾಗದ ಪಂಚಾಯತರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್–1 ಸೆಕ್ರೆಟರಿಗಳಿಗೆ ಹಾಗೂ ಕರ ವಸೂಲಾತಿಗಾರರಿಗೆ ಮತ್ತು ಸಹಾಯಕನಿರ್ದೇಶಕರುಗಳಿಗೆಪ್ರಗತಿ ಪರಿಶೀಲನಾ ಸಭೆಹಮ್ಮಿಕೊಳ್ಳಲಾಗಿದೆ ಎಂದರು.ಜಮಖಂಡಿ ಉಪವಿಭಾಗ ಮಟ್ಟದಲ್ಲಿ ಬರುವ ಮುಧೋಳ, ಬೀಳಗಿ, ಜಮಖಂಡಿ ಹಾಗೂ ರಬಕವಿ–ಬನಹಟ್ಟಿತಾಲೂಕಾ ಪೈಕಿ ಮುಧೋಳ ಶೇ.56.5, ಜಮಖಂಡಿ ಶೇ.57.2, ಬೀಳಗಿ 57.5 ಹಾಗೂ ರಬಕವಿ ಬನಹಟ್ಟಿ 67.9 ರಷ್ಟು ಕಡಿಮೆ ಪ್ರಗತಿ ಸಾಧಿಸಿರುವ ತಾಲೂಕುಗಳಾಗಿವೆ. ಇನ್ನುಳಿದ ಎರಡು ತಿಂಗಳಲ್ಲಿ ಶೇ.100 ರಷ್ಟು ತೆರಿಗೆ ವಸೂಲಾತಿ ಮಾಡಿ ಪ್ರಗತಿ ಸಾಧಿಸಲು ಕುರೇರ ಸೂಚಿಸಿದರು.

ಜಿಲ್ಲೆಯ ಬಾಗಲಕೋಟೆ ಉಪವಿಭಾಗದಲ್ಲಿ ಬರುವ ಹುನಗುಂದ ಶೇ.42, ಇಳಕಲ್ಲ ಶೇ.48, ಬಾದಾಮಿ ಶೇ.73.2, ಬಾಗಲಕೋಟೆ ಶೇ.64.6 ಮತ್ತು ಗುಳೇದಗುಡ್ಡ ತಾಲೂಕಿನಲ್ಲಿ ಶೇ.76.6 ರಷ್ಟು ಪ್ರಗತಿ ಸಾಧಿಸಿದ್ದು, ಪ್ರತಿಯೊಂದುತಾಲೂಕಿಗೆಸಂಬಂಧಿಸಿದ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್–1 ಸೆಕ್ರೆಟರಿಗಳಿಗೆ ಮತ್ತು ಕರ ವಸೂಲಾತಿಗಾರರಿಗೆ ಸೂಚನೆ ನೀಡಿದರು.ಕಡಿಮೆ ಪ್ರಗತಿ ಸಾಧಿಸಿರುವ ಗ್ರಾಮ ಪಂಚಾಯತಗಳ ಸೆಕ್ರೆಟರಿ ಹಾಗೂ ಕರ ವಸೂಲಾತಿಗಾರರಿಗೆ ಶಶಿಧರ ಕುರೇರ ಕಟ್ಟುನಿಟ್ಟಿನ ಸೂಚನೆ ನೀಡಿ, ಪ್ರಸಕ್ತ ಆರ್ಥಿಕ ವರ್ಷದ ಮುಕ್ತಾಯಕ್ಕೆ ಪೂರ್ವ ಶೇ.100 ರಷ್ಟು ಪ್ರಗತಿ ಸಾಧಿಸುವಂತೆ ತಿಳಿಸಿದರು.

ಸಭೆಯಲ್ಲಿಜಿ.ಪಂಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಸಹಾಯಕ ನಿರ್ದೇಶಕರುಗಳು ಉಪಸ್ಥಿತರಿದ್ದರು.

# ಚಾಲುಕ್ಯ ಉತ್ಸವ: ಪ್ರದರ್ಶನ ಮಳಿಗೆಗೆ ಅರ್ಜಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲಾಡಳಿತದಿಂದ ಜನವರಿ 19, 20 ಮತ್ತು 21 ರಂದು ಆಚರಿಸಲ್ಪಡುವ ಚಾಲುಕ್ಯ ಉತ್ಸವದಲ್ಲಿ ವಸ್ತು ಪ್ರದರ್ಶನ ಮೇಳವನ್ನು ಏರ್ಪಡಿಸಲಾಗಿದೆ. ಒಟ್ಟು 40 ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಪ್ರದರ್ಶನಕ್ಕೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜವಳಿ ಆಧಾರಿತ ಉದ್ದಿಮೆದಾರರಿಗೆ, ಆಹಾರ ಉದ್ದಿಮೆದಾರರಿಗೆ, ಮಹಿಳಾ ಸ್ವ–ಸಹಾಯ ಸಂಘದ ಉತ್ಪಾದಕರಿಗೆ ತಲಾ 10 ಮಳಿಗೆ, ಇತರೆ ಉದ್ದಿಮೆದಾರರಿಗೆ, ಸರ್ಕಾರಿ ಇಲಾಖೆಗಳಿಗೆ ತಲಾ 5 ಮಳಿಗೆ ಸೇರಿ ವರ್ಗೀಕರಣ ಮಾಡಲಾಗಿದೆ. ಆಸಕ್ತ ಜವಳಿ ಉತ್ಪಾದಕರು, ಕರಕುಶಲಗಾರರು, ಖಾದಿ ವಸ್ತುಗಳ ಉತ್ಪಾದಕರು, ಆಹಾರ ಉತ್ಪಾದಕರಿಗೆ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶವಿದೆ.

ಅರ್ಜಿಯೊಂದಿಗೆ ಉದ್ಯಮ ನೋಂದಣಿ ಪ್ರಮಾಣ ಪತ್ರದೊಂದಿಗೆ ನಿಗದಿತ ನಮೂನೆಯಲ್ಲಿ ಈ ಮೊದಲು ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ ಪ್ರಮಾಣ ಪತ್ರ ಹಾಗೂ ಇತರೆ ಅವಶ್ಯಕ ದಾಖಲೆಗಳೊಂದಿಗೆ ಜನವರಿ 17 ರಂದು ಸಂಜೆ 5 ಗಂಟೆಯೊಳಗಾಗಿ ಅರ್ಜಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ನವನಗರ, ಬಾಗಲಕೋಟೆ, ಉಪನಿರ್ದೇಶಕರು,(ಗ್ರಾ.ಕೈ) ಜಿ.ಪಂ ಬಾಗಲಕೋಟೆ, ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ ಬಸ್ ನಿಲ್ದಾಣ ಎದುರಿಗೆ ಬಾದಾಮಿ ಇವರಿಗೆ ಸಲ್ಲಿಸುವಂತೆ ಚಾಲುಕ್ಯ ಉತ್ಸವದ ವಸ್ತು ಪ್ರದರ್ಶನ ಸಮಿತಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆ ಕಾಣೆ: ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಮಹಿಳಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡಿ.ವಿಶಾಲಾಕ್ಷಿ ಎನ್ನುವ 55 ವರ್ಷದ ಮಹಿಳೆ 2025ರ ನ.02 ರಂದು ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.

**ಮಹಿಳೆಯ ಚಹರೆ:**

ಎತ್ತರ ಸುಮಾರು 5.2 ಅಡಿ, ದೃಢವಾದ ಮೈಕಟ್ಟು, ಗೋಧಿ ಮೈ ಬಣ್ಣ, ದುಂಡು ಮುಖ ಹೊಂದಿದ್ದು, ಮಹಿಳೆ ಕಾಣೆಯಾದ ಸಂದರ್ಭದಲ್ಲಿ ಹಸಿರು ಬಣ್ಣದ ಸೀರೆ ಧರಿಸಿರುತ್ತಾಳೆ. ಕನ್ನಡ, ತೆಲುಗು, ಭಾಷೆ ಮಾತನಾಡುತ್ತಾಳೆ.

ಕಾಣೆಯಾದ ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಅಥವಾ 100, ಎಸ್.ಪಿ ಕಚೇರಿ ದೂ.08392–258400, ಬಳ್ಳಾರಿ ನಗರ ಡಿ.ಎಸ್.ಪಿ ಕಚೇರಿ ದೂ.08392–27232, ಮೊ.9480803020, ಮಹಿಳಾ ಪೊಲೀಸ್ ಠಾಣೆಯ ದೂ.08392–268108 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಾಮಧೇಯ ಮಹಿಳೆಯ ವಾರಸುದಾರರ ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕುಡುತಿನಿ ಪೊಲೀಸ್ ಠಾಣೆ ವ್ಯಾಪ್ತಿಯ ತಿಮ್ಮಲಾಪುರ ಗ್ರಾಮದಲ್ಲಿ ಸುಮಾರು 40 ವರ್ಷದ ಅನಾಮಧೇಯ ಅಸ್ವಸ್ಥ ಮಹಿಳೆಯು ಜ.08 ರಂದು ಕಂಡುಬಂದಿದ್ದು, ಬಿಎಂಸಿ ಆರ್‌ಸಿ ಯಲ್ಲಿ ಚಿಕಿತ್ಸೆ ದೊರಕಿಸಿ, ನಗರದ ಕಂಟೋನ್ ಮೆಂಟ್ ಪ್ರದೇಶದ ಸ್ತ್ರೀ ಸೇವಾ ನಿಕೇತನದಲ್ಲಿ ಜ.10 ರಂದು ದಾಖಲಿಸಲಾಗಿತ್ತು.

ಪುನಃ ಅನಾಮಧೇಯ ಮಹಿಳೆಯು ಹೊಟ್ಟೆ ನೋವು ಮತ್ತು ಉಸಿರಾಟ ತೊಂದರೆಯಿಂದಾಗಿ ಅಸ್ವಸ್ಥಳಾಗಿದ್ದು, ನಂತರ ಬಿಎಂಸಿ ಆರ್‌ಸಿ ಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾಳೆ. ಮೃತಳ ವಾರಸುದಾರರ ಬಗ್ಗೆ ಮಾಹಿತಿ ಇರುವುದಿಲ್ಲ. ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಉಪನಿರೀಕ್ಷಕರು ಮನವಿ ಮಾಡಿದ್ದಾರೆ.

**ಚಹರೆ:** ಎತ್ತರ ಅಂದಾಜು 4.9 ಅಡಿ, ಸಾಧಾರಣ ಮೈಕಟ್ಟು, ಸಾಧಾರಣ ಕಪ್ಪು ಮೈ ಬಣ್ಣ, ಕೋಲು ಮುಖ ಹೊಂದಿರುತ್ತಾಳೆ. ವಾರಸುದಾರರ ಬಗ್ಗೆ ಮಾಹಿತಿ ಇದ್ದಲ್ಲಿ ಕುಡುತಿನಿ ಪೊಲೀಸ್ ಠಾಣೆಯ ದೂ.08392–248100, ಪಿ.ಎಸ್.ಐ ಮೊ.9480803078, ಕುರುಗೋಡು ಸಿ.ಪಿ.ಐ ಮೊ.9480803039, ಬಳ್ಳಾರಿ ಕಂಟ್ರೋಲ್ ರೂಂ ದೂ.08392–279100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸಮಾನತೆಯ ಸಂದೇಶ ಸಾರಿದ ಸಿದ್ಧರಾಮೇಶ್ವರರು



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಾತೀಯತೆ, ಆಚಾರ–ವಿಚಾರ ಎಂಬ ಮನೋಭಾವ ಬಿಟ್ಟು ನಾವೆಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರಿದವರು ಕಾಯ ಕಯೋಗಿ ಶಿವಯೋಗಿ ಸಿದ್ದರಾಮೇಶ್ವರರು ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನವನಗರದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಸಹಯೋಗದಲ್ಲಿಹಮ್ಮಿಕೊಂಡ ಶಿವಯೋಗಿ ಸಿದ್ದರಾಮೇಶ್ವರರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಡಿನ ಸಾಧು ಸಂತರು, ಶರಣ–ರು, ಮಹಾಪುರುಷರು ಒಗ್ಗಟ್ಟಿನ ಸಂದೇಶವನ್ನು ಸಾರಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗವನ್ನು ನಾವೆಲ್ಲರೂ ಅನುಸರಿಸುವ ಅಗತ್ಯವಿದೆ ಎಂದು ತಿಳಿಸಿದರು.

ಕಾಯಕಯೋಗಿಗಳು,ಮಹಾಪುರಷರನ್ನು ಇಂದು ನಾವು ಒಂದೊಂದು ಸಮಾಜಕ್ಕೆ ಸೀಮಿತ ಮಾಡುತ್ತಿದ್ದೇವೆ. ಸಮಾಜ ವಿಭಜಿಸುವ ಕಾರ್ಯ ಮಾಡದೇ ಸಮಾಜದಲ್ಲಿರುವ ಅಂಕು ಡೊಂಕುಗಳನ್ನು ತಿದ್ದಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡುವ ಕಾರ್ಯ ಮಾಡಬೇಕಿದೆ ಎಂದು ಭಾಂಡಗೆ ಹೇಳಿದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಶಿವಯೋಗಿ ಸಿದ್ದರಾಮೇಶ್ವರರು ತಮ್ಮ ವಚನಗಳ ಮೂಲಕ ಜಗತ್ತಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಬದುಕಿನ ಆದರ್ಶ, ಗುರಿಗಳನ್ನು ತಿಳಿಸಿಕೊಟ್ಟಿದ್ದಾರೆ. ಶರಣರ ವಚನಗಳ ಅಧ್ಯಯನದಿಂದ ಸನ್ಮಾರ್ಗವನ್ನು ಅನುಸರಿಸಬೇಕಿದೆ. ಅಂದಾಗ ಮಾತ್ರ ಸಮಾಜದಲ್ಲಿ ಶಾಂತಿ, ಸಮೃದ್ದಿ, ನೆಮ್ಮದಿ ಬರಲು ಸಾಧ್ಯವಾಗುತ್ತದೆ. ಶಿವಯೋಗಿಗಳು ಕಾಯಕದಲ್ಲಿ ನಿರತರಾಗಿ ಬದುಕು ಕಟ್ಟಿಕೊಂಡವರು. ಅವರು ಹಾಕಿದ ಮಾರ್ಗದಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕಿದೆ ಎಂದು ತಿಳಿಸಿದರು.ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾಪುರುಷರ ಜಯಂತಿ ಆಚರಣೆಯಿಂದ ಸಮುದಾಯದವರು ಸಂಘಟಿತರಾಗಬೇಕು ಎಂದು ಹೇಳಿದರು. ಉಪನ್ಯಾಸಕರಾಗಿ ಆಗಮಿಸಿದ್ದ ಬಾದಾಮಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾದ್ಯಾಪಕ ಪ್ರೊ.ಚಂದ್ರೇಶಖರ ಹೆಗಡೆ ಮಾತನಾಡಿ, ಸಿದ್ದರಾಮೇಶ್ವರರು ಕೆರೆ, ಕಾಲುವೆ, ದೇವಸ್ಥಾನ ಕಟ್ಟಿಸುವ ಮೂಲಕ ಕರ್ಮ ಮಾರ್ಗದಲ್ಲಿ ಸಾಗಿ ಮಾನವ ಜನ್ಮ ಸಾರ್ಥಕ ಎಂದು ನಿರೂಪಿಸಿದರು. ಬಸವಣ್ಣ ಮತ್ತು ಅನೇಕ ಶರಣರ ಭೇಟಿಯಿಂದ ಜ್ಞಾನ ಮಾರ್ಗದಲ್ಲಿ ಸಾಗಿ, ಸಕಲ ಜೀವಾತ್ಮಗಳಿಗೆ ಒಳಿತನ್ನು ಬಯಸಿದ್ದಾರೆ ಎಂದು ಹೇಳಿದರು.

ಸಮುದಾಯದ ಮುಖಂಡರಾದ ಅಶೋಕ ನಿಂಬಾವಳಿ ಮಾತನಾಡಿ, ಸಮಾಜದಲ್ಲಿರುವ ಅನಿಷ್ಠ ಪದ್ದತಿಗಳನ್ನು ದೂರ ಮಾಡಿ, ಸಮಾಜಕ್ಕೆ ಸಂಸ್ಕಾರ ಕೊಡುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಸಮುದಾಯದವರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕೊಟ್ಟು ಸಂಘಟಿತರಾಗಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಅಕ್ಷಯ ಕಲ್ಲಕುಟಗರಗೆ 10,001 ರೂ. ನಗದು ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಪಂಚಾಯತ ಸಹಾಯಕ ನಿರ್ದೇಶಕ ಎಸ್.ಎಂ.ಕಾಂಬಳೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಸಮುದಾಯದ ಮುಖಂಡರಾದ ಲಕ್ಕಪ್ಪ ಬಂಡಿವಡ್ಡರ, ಯಲ್ಲಪ್ಪ ಕೋಟಿಕಲ್ಲ, ಯಮನಪ್ಪ ಕಲ್ಲಕುಟಗರ, ಪಾತ್ರೋಟ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಭಾವಚಿತ್ರದ ಮೆರವಣಿಗೆ

ಕಾರ್ಯಕ್ರಮ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ಅಂಬೇಡ್ಕರ ಭವನಕ್ಕೆ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಪೂರ್ಣಕುಂಬ ಹೊತ್ತ ಮಹಿಳೆಯರು ಆಕರ್ಷಣೆಯ ಕೇಂದ್ರ ಬಿಂದು ಆಗಿದ್ದರು.

# ಮಹಿಳೆ ಕಾಣೆ: ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಮಹಿಳಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಿದ್ದಮ್ಮ ಎನ್ನುವ 61 ವರ್ಷದ ಮಹಿಳೆ 2025ರ ಸೆ.02 ರಂದು ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.ಮಹಿಳೆಯ ಚಹರೆ:ಎತ್ತರ ಸುಮಾರು 4.9 ಅಡಿ, ದೃಢವಾದ ಮೈಕಟ್ಟು, ಗೋಧಿ ಮೈ ಬಣ್ಣ, ದುಂಡು ಮುಖ ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಮೆರೂನ್ ರೆಡ್ ಕಲರ್ ಸೀರೆ ಧರಿಸಿರುತ್ತಾಳೆ. ಕನ್ನಡ ಭಾಷೆ ಮಾತನಾಡುತ್ತಾಳೆ.ಕಾಣೆ–ಯಾದ ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಅಥವಾ 100, ಎಸ್.ಪಿ ಕಚೇರಿ ದೂ.08392–258400, ಬಳ್ಳಾರಿ ನಗರ ಡಿ.ಎಸ್.ಪಿ ಕಚೇರಿ ದೂ.08392–27232, ಮೊ.9480803020, ಮಹಿಳಾ ಪೊಲೀಸ್ ಠಾಣೆಯ ದೂ.08392–268108 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃದ್ದೆ ಕಾಣೆ: ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಮಹಿಳಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗಿರಿಜಮ್ಮ ಎನ್ನುವ 78 ವರ್ಷದ ವೃದ್ಧೆ 2025ರ ಡಿ.29 ರಂದು ಮನೆಯಿಂದ ಹೇರ್ ಡ್ರೈ ತರುತ್ತೇನೆ ಎಂದು ಅಂಗಡಿಗೆ ಹೋಗಿದ್ದು, ಮನೆಗೆ ವಾಪಸ್ಸು ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.

ಕಾಣೆಯಾದ ಮಹಿಳೆಯ ಚಹರೆ:ಎತ್ತರ ಸುಮಾರು 4.5 ಅಡಿ, ದಪ್ಪನೆಯ ಮೈಕಟ್ಟು ಗೋಧಿ ಮೈಬಣ್ಣ, ದುಂಡನೆಯ ಮುಖ, ಬಲಗಣ್ಣಿನ ಕೆಳಗಡೆ ಮಚ್ಚೆ ಗುರುತು ಇರುತ್ತದೆ. ಕಾಣೆ–ಯಾದ ಸಂದರ್ಭದಲ್ಲಿ, ಹಸಿರು ಬಣ್ಣದ ಸೀರೆ ಹಾಗೂ ಕಪ್ಪು ಬಣ್ಣದ ಕುಪ್ಪಸ ಧರಿಸಿರುತ್ತಾಳೆ. ಕನ್ನಡ, ತೆಲುಗು ಭಾಷೆ ಮಾತನಾಡುತ್ತಾಳೆ.ಕಾಣೆ–ಯಾದ ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಅಥವಾ 100, ಎಸ್.ಪಿ ಕಚೇರಿ ದೂ.08392–258400, ಬಳ್ಳಾರಿ ನಗರ ಡಿ.ಎಸ್.ಪಿ ಕಚೇರಿ ದೂ.08392–27232, ಮೊ.9480803020, ಮಹಿಳಾ ಪೊಲೀಸ್ ಠಾಣೆಯ ದೂ.08392–268108 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವಜಾತ ಶಿಶು ಎಸೆದು ಹೋಗಿದ್ದ ಆರೋಪಿ ಮಹಿಳೆಗೆ ಜೈಲು ಶಿಕ್ಷೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೊಟೆ:**

ಅನೈತಿಕ ಸಂಬಂಧ ಹೊಂದಿ ಗರ್ಭಿಣಿಯಾಗಿ ಹೆತ್ತ ಶಿಶುವನ್ನು ಮುಳ್ಳಿನ ಕಂಟಿಯಲ್ಲಿ ಎಸೆದು ಸಾರ್ವಜನಿಕರ ಕೈಗೆ ಸಿಕ್ಕು ಬಿದ್ದಿದ್ದ ಮಹಿಳೆಗೆ ನಗರದ ಜೆ.ಎಂ.ಎಫ್.ಸಿ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ. ಆರೋಪಿತಳಾದ ಸಿದ್ದವ್ವ ಹನಮಂತ ಸಂಗೊಂದಿ(35) ಶಿಕ್ಷೆಗೊಳಗಾಗಿದ್ದು, 2023 ರ ಆಗಷ್ಟ 6 ರಂದು ಬಾಗಲಕೋಟೆ ಗ್ರಾಮೀಣ ಪೋಲಿಸ್ ಠಾಣಾ ವ್ಯಾಪ್ತಿಯ ಬೆನಕಟ್ಟಿ–ಕಮತಗಿ ಮಾರ್ಗದಲ್ಲಿ ಬೆನಕಟ್ಟಿ ಸಮೀಪದ ಅರಣ್ಯದಲ್ಲಿ ತಾನೇ ಹೆತ್ತ ನವಜಾತ ಶಿಶುವನ್ನು ಮುಳ್ಳಿನ ಕಂಟಿಯಲ್ಲಿ ಎಸೆದು ಹೋಗುತ್ತಿರುವಾಗ ಕುರಿಗಾಯಿಗಳು ನೋಡಿ ಪರಾರಿಯಾಗುತ್ತಿದ್ದ ಸಿದ್ದವ್ವಳನ್ನು ತಡೆದು ಪೋಲಿಸರಿಗೆ ದೂರು ನೀಡಿದ್ದರು.

ಸಿದ್ದವ್ವ ಅನೈತಿಕವಾಗಿ ಗರ್ಭಿಣಿಯಾಗಿ ತನ್ನ ತಾಯಿ ಹಾಗೂ ಸಹೋದರನೊಂದಿಗೆ ಮೋಟಾರ ಸೈಕಲ್ ಮೇಲೆ ಹೋಗುತ್ತಿರುವಾಗ ಬೆನಕಟ್ಟಿ ಸಮೀಪ ಹೆರಿಗೆ ನೋವು ಕಾಣಿಸಿಕೊಂಡು ಬಹಿರ್ದೆಸೆಯ ನೆಪದಲ್ಲಿ ಅರಣ್ಯ ಪ್ರದೇಶಕ್ಕೆ ತೆರಳಿ ಶಿಶು ಹೆತ್ತು ಅಲ್ಲಿಯೇ ಮುಳ್ಳಿನ ಪೊದೆಯಲ್ಲಿ ಎಸೆದಿದ್ದಳು.

ಈ ಬಗ್ಗೆ ಬಾಗಲಕೋಟೆ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಂದಿನ ಪಿಎಸ್‌ಐ ಶರಣಬಸಪ್ಪ ಸಂಗಳದ ಆರೋಪಿ ಮಹಿಳೆಯ ವಿರುದ್ಧ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಬಾಗಲಕೋಟೆಯ 1 ನೇ ಅಧಿಕ ಸಿಜೆ/ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಸಂದೀಪ ನಾಯಕ ಅವರು ಈ ಸಂಬಂಧ ಹಾಜರುಪಡಿಸಿದ ಎಲ್ಲ ಸಾಕ್ಷ್ಯ, ಪುರಾವೆಗಳನ್ನು ಅವಲೋಕಿಸಿ, ಅಭಿಯೋಜನೆಯು ಆರೋಪಿ ಸಿದ್ದವ್ವ ಹನಮಂತ ಸಂಗೊಂದಿ ಅವಳ ಮೇಲಿನ ಆಪಾದನೆಯನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿದೆ ಎಂದು ತೀರ್ಮಾನಿಸಿ ಅರೋಪಿತಳಿಗೆ ಒಂದು ವರ್ಷ ಸಾದಾ ಜೈಲು ಶಿಕ್ಷೆ ಮತ್ತು 1 ಸಾವಿರ ದಂಡ ವಿಧಿಸಿ ಜ.14 ರಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಾದ ಶಾರದಾ ಎ.ಬದಾಮಿ ಪ್ರಕರಣದ ವಾದ ಮಂಡಿಸಿದ್ದರು.

# ಸಂಕ್ರಾಂತಿಯ ಸಂಭ್ರಮ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೊಟೆ:**

ನಗರದ ಬಿವಿವಿಎಸ್ ಸಂಸ್ಥೆಯ ಆಯುರ್ವೇದ ಕಾಲೇಜಿನಲ್ಲಿ ಬುಧವಾರ ಸಂಭ್ರಮದ ಸಂಕ್ರಾಂತಿ ಜರುಗಿತು.

ವಿದ್ಯಾರ್ಥಿಗಳು ದೇಶಿ ಉಡುಪುಗಳನ್ನು ಧರಿಸಿ, ಸಾಂಸ್ಕೃತಿಕ ಕಲೆ ಸಾರುವ ಬಣ್ಣ ಬಣ್ಣದ ರಂಗೋಲಿಯನ್ನು ಬಿಡಿಸಿ, ಗಾಳಿಯಲ್ಲಿ ಚೆಂದ ಚೆಂದದ ಬಣ್ಣ ಬಣ್ಣದ ಪಟಗಳನ್ನು ಹಾರಿಸುವ ಮೂಲಕ ಸಂಭ್ರಸಿದರು.

ಕೃಷಿ ಮತ್ತು ಸಮದ್ಧಿಯ ಸಂಕೇತ ಪೂಜೆಯೊಂದಿಗೆ ಮಕರ ಸಂಕ್ರಮಣದ ಸಂಭ್ರಮ ಜೋರಾಗಿ ನಡೆಯಿತು. ಸಂಕ್ರಮಣದ ಆಚರಣೆ ಹಾಗೂ ಮಹತ್ವ ಪರಿಚಯಿಸುವ ನಿಮಿತ್ಯ ವಿದ್ಯಾರ್ಥಿಗಳಿಗಾಗಿ ಸಾಂಪ್ರದಾಯಿಕ ರಂಗೋಲಿ ಬಿಡಿಸುವ, ವೇಷಭೂಷಣ ಮತ್ತು ಗಾಳಿಪಟ ತಯಾರಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ವಿದ್ಯಾರ್ಥಿಗಳು ಎಲ್ಲ ಸ್ಪರ್ಧೆಗಳಲ್ಲೂ ಅತೀ ಉತ್ಸಹಾದಿಂದ ಪಾಲ್ಗೊಂಡು ಸಂಕ್ರಾಂತಿ ಹಬ್ಬವನ್ನು ಸಡಗರದಿಂದ ಆಚರಿಸಿದರು. ಇದೇ ಸಂದರ್ಭದಲ್ಲಿ ದನ್ವಂತರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಜ್ಜನ, ಪ್ರಾಚಾರ್ಯ ಮಲ್ಲಿಕಾರ್ಜುನ ಹಿರೇಮಠ ಸೇರಿದಂತೆ ಉಪನ್ಯಾಸಕರುಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಚಿಟಗುಪ್ಪ; ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ರವರ ಸಮ್ಮುಖದಲ್ಲಿ 2026ನೇ ಸಾಲಿನ ಮಲ್ಲಮ್ಮ ನುಡಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಪತ್ರಕರ್ತ ರಾಜಕುಮಾರ ಆರ್. ಹಡಪದ, ಎನ್.ಆರ್.ಎಲ್.ಎಂ. ಸಂಪನ್ಮೂಲ ವ್ಯಕ್ತಿ ರಜಿಯಾ ಬಳಬಟಿ, ಅಕ್ಕ ಪಡೆ ಸಿಬ್ಬಂದಿಗಳಾದ ಶ್ರದ್ಧಾ ಹಡಪದ, ಶೈಲಾ, ಎನ್.ಆರ್.ಎಲ್.ಎಂ. ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕ ಗಣಪತಿ ಭಾಗ್ಯನಗರ, ಚಂದ್ರಶೇಖರ್ ಪಾಟೀಲ್ ಬನ್ನಳ್ಳಿ ಉಪಸ್ಥಿತರಿದ್ದರು.





ಕೆಂಭಾವಿ: ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೊ.ಪಾಟೀಲ್ ಮೆಮೊರಿಯಲ್ ಸರಕಾರಿ ಪದವಿ ಕಾಲೇಜು, ರಡ್ಡೇರ ಪತ್ತಿನ ಸೌಹಾರ್ದ, ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಬ್ಯಾಂಕ ಸೇರಿದಂತೆ ಇಲ್ಲಿ ಪ್ರಮುಖ ವರ್ತಕರಿಂದ ಮಲ್ಲಮ್ಮ ನುಡಿ ಕ್ಯಾಲೆಂಡರ್ ಅನಾವರಣಗೊಂಡ ಚಿತ್ರಗಳು

## ರೈತ ಕುಟುಂಬಕ್ಕೆ ಚೆಕ್ ವಿತರಣೆ



**ಚಿಟ್ಟಾ:** ಗ್ರಾಮದ ರೈತ ಪ್ರಭುರಾವ ಅವರು ತಮ್ಮ ಜಮೀನಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ಜಮೀನಿನಲ್ಲಿ ವಿದ್ಯುತ್ ತಂತಿ ಕಡಿದು ಬಿದ್ದ ಪರಿಣಾಮ ಸಂಭವಿಸಿದ ವಿದ್ಯುತಾಘಾತದಿಂದ ಸ್ಥಳದಲ್ಲೇ ದುರ್ಘಟನಾತ್ಮಕವಾಗಿ ಮೃತಪಟ್ಟಿದ್ದರು.

ಈ ದುರ್ಘಟನೆಯ ಸುದ್ದಿ ತಿಳಿದ ಕೂಡಲೇ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಸಂತ್ರಸ್ತ ಕುಟುಂಬದ ಮನೆಗೆ ಭೇಟಿ ನೀಡಿ ಸಂತಾಪ ಸೂಚಿಸಿ, ಜೆಸ್ಕಾಂ ವತಿಯಿಂದ ಶೀಘ್ರ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದ್ದರು. ತಮ್ಮ ಭರವಸೆಯಂತೆ ಇಂದು ಜೆಸ್ಕಾಂ ವತಿಯಿಂದ ₹5 ಲಕ್ಷ ಪರಿಹಾರ ಧನದ ಚೆಕ್ ಅನ್ನು ಮೃತ ರೈತ ಪ್ರಭುರಾವ ಅವರ ಕುಟುಂಬಕ್ಕೆ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು, "ಈ ಪರಿಹಾರ ಧನವು ಸಂತ್ರಸ್ತ ಕುಟುಂಬದ ಸಂಕಷ್ಟದ ಸಮಯದಲ್ಲಿ ಸ್ವಲ್ಪ ಮಟ್ಟಿಗಾದರೂ ಆಸರೆಯಾಗಲಿ" ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಜೆಸ್ಕಾಂ ಅಧಿಕಾರಿಗಳಾದ ಪ್ರೇಮಕುಮಾರ, ಅಬ್ದುಲ್ ಸೈಯದ್, ಹಾಗೂ ಮುಖಂಡರಾದ ರಾಜಕುಮಾರ ಪಾಟೀಲ, ವಿದ್ಯಾಸಾಗರ ಸ್ವಾಮಿ, ಆನಂದ ಪಾಟೀಲ, ಶಿವಕುಮಾರ ಪಾಟೀಲ, ಶರಣು ಸ್ವಾಮಿ, ಶಿವಕುಮಾರ ಕೆ., ಶಿವರಾಜ ಪಾಟೀಲ, ಸೋಮು ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕಾಮಗಾರಿಗಳಿಗೆ ರಾಯರೆಡ್ಡಿ ಚಾಲನೆ



**ಕುಕನೂರ:** ತಾಲೂಕಿನ ಮಂಡಲಗೇರಿ, ಇಟಗಿಯಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಜನ ಸಂಪರ್ಕ ಸಭೆಯನ್ನು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಚಾಲನೆ ನೀಡಿದರು.

ತಾಲೂಕಿನ ಮಂಡಲಗೇರಿ , ಇಟಗಿ ಗ್ರಾಮಗಳಲ್ಲಿ ಬುದ್ಧ ಬಸವ ಅಂಬೇಡ್ಕರ್ ಭವನ ಹಾಗೂ ಬಸ್ ನಿಲ್ದಾಣ ಹಾಗೂ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಲಾಯಿತು.

ಜನಸಂಪರ್ಕ ಸಭೆ, ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಭೆಯಲ್ಲಿ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ

ಬಸವರಾಜ ರಾಯರೆಡ್ಡಿ ಮಾತನಾಡುತ್ತಾ ಸಿದ್ದರಾಮಯ್ಯನವರು ನೀಡಿರುವ ಶಕ್ತಿ ಯೋಜನೆಯ ವಿಶ್ವ ದಾಖಲೆಯೊಂದಿಗೆ ದಾಖಲಾಗಿದ್ದು ಎರಡು ವರ್ಷಗಳ ಅವಧಿಯೊಳಗೆ 680 ಕೋಟಿ ಮಹಿಳೆಯರು ಈ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಮಂಡಲಗೇರಿ ಗ್ರಾಮದ ಶ್ರೀ ತೋಂಟದ ಸಿದ್ದಲಿಂಗ ಸ್ವಾಮಿಗಳು ಸಾರ್ವಜನಿಕ ಸಮುದಾಯ ಭವನಕ್ಕೆ ಶ್ರೀಗಳು ಜಮೀನು ದಾನ ಮಾಡಿದ್ದು ಅವರ ಜನಪರ ಕಾರ್ಯದಿಂದ ಬೃಹತ್ ಪ್ರಮಾಣದಲ್ಲಿ ಬುದ್ಧ ಬಸವ ಅಂಬೇಡ್ಕರ್ ಭವನವನ್ನು ಸುಸಜ್ಜಿತ ಹಾಗೂ ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಭವನ ನಿರ್ಮಿಸಲಾಗುವುದು ಇದರಿಂದ ಬಡ ಜನತೆಯ ಮದುವೆ ಆಗು ಇತರೆ ಶುಭ ಸಮಾರಂಭಕ್ಕೆ ಅನುಕೂಲಕರವಾಗಲಿದೆ ಎಂದರು.

# ಸಿದ್ಧರಾಮೇಶ್ವರ ಜಯಂತಿ, ಬಸವಣ್ಣನವರ ಮೂರ್ತಿ ಅನಾವರಣ

- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಶಿವಯೋಗಿ ಸಿದ್ಧರಾಮೇಶ್ವರರು ಬಸವಾದಿ ಶರಣರಲ್ಲಿ ಪ್ರಮುಖ ಶರಣರಾಗಿದ್ದರು. ಸಿದ್ಧರಾಮೇಶ್ವರರು ಬಸವಣ್ಣನವರನ್ನು ಪರಮ ಗುರುವಾಗಿ ಕಂಡರು, ಬಸವಣ್ಣನವರ ಮಾರ್ಗದರ್ಶನದಿಂದ ಸಿದ್ಧರಾಮೇಶ್ವರರು ಶಿವಯೋಗಿಯಾದರು ಎಂದು ಇಳಕಲ್‌ನ ವಿಜಯಮಹಾಂತೇಶ್ವರ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ಬುಧವಾರ ಆಯೋಜಿಸಿದ್ದ ಸಿದ್ಧರಾಮೇಶ್ವರ ಜಯಂತಿ ಮತ್ತು ವಿಶ್ವಗುರು ಬಸವಣ್ಣನವರ ಮೂರ್ತಿ ಅನಾವರಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸಿದ್ಧರಾಮೇಶ್ವರರು ಲಿಂಗಭೇದ ನಿವಾರಿಸಿ ಸಮಾನತೆಯ ಸಂದೇಶ ನೀಡಿದರು, ಕೆರೆ, ಬಾವಿ, ದೇವಾಲಯಗಳ ನಿರ್ಮಾಣ ಮಾಡಿ ಜನಕಲ್ಯಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡರು ಮತ್ತು ಸೊಲ್ಲಾಪುರವನ್ನು ಭೂಕೈಲಾಸವನ್ನಾಗಿ ಪರಿವರ್ತಿಸಿದರು. ಅಂತಹ ಶರಣರ ಆದರ್ಶಗಳು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು



ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಸಿದ್ಧರಾಮೇಶ್ವರರು ಕೇವಲ ದಾರ್ಶನಿಕರಾಗಿರದೆ, ತಮ್ಮ ಕಾಯಕ ಮತ್ತು ಚಿಂತನೆಗಳ ಮೂಲಕ ಸಮಾಜದ ಓರೆಕೋರೆಗಳನ್ನು ಸರಿಪಡಿಸಲು ಶ್ರಮಿಸಿದರು ಎಂದು ತಿಳಿಸಿದರು.

ಮದನೂರಿನ ಯುವ ಮುಖಂಡ ಗುಂಡಪ್ಪ ಬೆಲ್ಲೆ ಅವರು ಬಸವಣ್ಣನವರ ಮೂರ್ತಿಗೆ ಪೂಜೆ ನೆರವೇರಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಹಿರೇಮಠ ಸಂಸ್ಥಾನದ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

### ಮಕ್ಕಳಿಗೆ ಸಂಕ್ರಾಂತಿ ವಿಶ್

ಸಂಕ್ರಾಂತಿ ಹಬ್ಬದ ನಿಮಿತ್ತ ಮಕ್ಕಳಿಗೆ ಇಳಕಲ್, ಭಾಲ್ಕಿ ಶ್ರೀಗಳು ಮಕ್ಕಳಿಗೆ ಸಂಕ್ರಾಂತಿ ಹಬ್ಬದ ಶುಭ ಕೋರಿದರು. ಚನ್ನಬಸವೇಶ್ವರ ಗುರುಕುಲದಲ್ಲಿ ವ್ಯಾಸಂಗ ಮಾಡುತ್ತಿರುವ ಸಾವಿರಾರು ಮಕ್ಕಳಿಗೆ ಉಭಯ ಪೂಜ್ಯರು ಎಳ್ಳು, ಬೆಲ್ಲ ವಿತರಿಸಿ ಆಶೀರ್ವದಿಸಿದರು.

ಸಾಮಾಜಿಕ ಕ್ರಾಂತಿ ಹಾಗೂ ವಚನ ಸಾಹಿತ್ಯಕ್ಕೆ ಶಿವಯೋಗಿ ಸಿದ್ಧರಾಮೇಶ್ವರರ ಕೊಡುಗೆ ಅಪಾರ. ಅವರು ಶಿವಯೋಗಿ ಮಾತ್ರವಲ್ಲದೇ ಕಾಯಕ ಯೋಗಿ ಆಗಿದ್ದರು.

–ಗುರುಬಸವ ಪಟ್ಟದ್ದೇವರು
ಹಿರೇಮಠ ಸಂಸ್ಥಾನ ಭಾಲ್ಕಿ

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ಸಂಸ್ಥೆಯ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪಪ್ರಾಚಾರ್ಯ ಸಿದ್ರಾಮ ಗೊಗ್ಗಾ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಕಚೇರಿಯಲ್ಲಿ ಸಂಕ್ರಾಂತಿ ಹಬ್ಬದ ಸಡಗರ

- ಮಲ್ಲಮ್ಮ ನುಡಿ ವಾರ್ತೆ ಬೀದರ್

ನಗರದ ಪ್ರತಾಪ ನಗರದಲ್ಲಿರುವ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಕಚೇರಿಯಲ್ಲಿ ಸಂಕ್ರಾಂತಿ ಹಬ್ಬವನ್ನು ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಸಹಕಾರ, ಸೌಹಾರ್ದತೆ ಹಾಗೂ ಸಂಸ್ಕೃತಿಯ ಮಹತ್ವವನ್ನು ಸಾರುವ ಈ ಹಬ್ಬದ ಸಂದರ್ಭದಲ್ಲಿ ಶಾಸಕರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಿಹಿ ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು, ಹೊಸ ಬೆಳಕು, ಹೊಸ ಆಶಯಗಳೊಂದಿಗೆ ಸಂಕ್ರಾಂತಿ ಹಬ್ಬವು ಎಲ್ಲರ ಜೀವನದಲ್ಲಿ ಸಮೃದ್ಧಿ, ಶಾಂತಿ ಹಾಗೂ ಯಶಸ್ಸು ತರಲಿ ಎಂದು ಹಾರೈಸಿದರು.

ಈ ವೇಳೆ ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಸಾಮರಸ್ಯ ಸಾರುವ ಹಬ್ಬ ಸಂಕ್ರಾಂತಿ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಭೇದ–ಭಾವಗಳನ್ನು ಮರೆತು ಸ್ನೇಹ, ಪ್ರೀತಿ, ಮಧುರತೆ ಮತ್ತು ಭ್ರಾತೃತ್ವದ ಭಾವನೆಗಳಿಗೆ ಹೆಚ್ಚಿನ ಮಹತ್ವ ನೀಡುವ ಮೂಲಕ ಭಾಂದವ್ಯ ಸಾಮರಸ್ಯ ಬೆಳೆಸಿಕೊಳ್ಳುವ ಹಬ್ಬ ಸಂಕ್ರಾಂತಿ ಹಾಗಾಗಿ ಎಲ್ಲರ ಬಾಳಲ್ಲಿ ಬೆಳಕು ತುಂಬಲಿ ಎಂದು ಅರ್ ಅರ್ ನಗರ ಕಾಂಗ್ರೆಸ್ ಯುವ ನಾಯಕಿ ಹೆಚ್ ಕುಸುಮಾ ಹನುಮಂತರಾಯಪ್ಪ ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಲಗ್ಗರೆ ವಾರ್ಡ್ನ ವಿಧಾನಸೌಧ ಲೇಔಟ್ ಹಾಗೂ ಲಗ್ಗರೆ ಆಲದ ಮರ ಸರ್ಕಲ್ ಬಳಿ ಸುಮಾರು15 ಸಾವಿರ ಕುಟುಂಬಗಳಿಗೆ ಜಿಬಿಎ ಅಕಾಂಕ್ಷಿ ಕಾಂಗ್ರೆಸ್ ಮುಖಂಡ ರಮೇಶ್ ಗೌಡ್ರು ಅಯೋಜಿಸಿದ್ದ ಸಂಕ್ರಾಂತಿ ಉಡುಗೊರೆಯಾಗಿ ಕಬ್ಬು ವಿತರಣೆ ಕಾರ್ಯಕ್ರಮದಲ್ಲಿ ಜನತೆಗೆ ಕಬ್ಬು ವಿತರಿಸಿ ಮಾತನಾಡಿದರು.

ಜಿಬಿಎ ಚುನಾವಣಾ ಅಕಾಂಕ್ಷಿ ಕಾಂಗ್ರೆಸ್ ಮುಖಂಡ ರಮೇಶ್ ಗೌಡ್ರು ಮಾತನಾಡಿ ಕಬ್ಬು ಸಮೃದ್ಧಿಯ ಸಂಕೇತವಾಗಿದ್ದು ಸಂಕ್ರಾಂತಿ ಹಬ್ಬವು ನಮಗೆ ಹಾಗೂ ಪ್ರಕೃತಿ, ನಡುವಿನ ಸಂಬಂಧಗಳನ್ನು



ಮಹತ್ವವನ್ನು ನೆನಪಿಸುವ ಹಬ್ಬವಾಗಿದ್ದು ವಾರ್ಡ್ ಜನತೆಗೆ ಕಬ್ಬು ವಿತರಿಸಲಾಗಿದೆ ಹಾಗಾಗಿ ಅವರ ಕುಟುಂಬದ ಬಾಳಲ್ಲಿ ಹೊಸ ವರ್ಷದ ಮೊದಲನೆ ಹಿಂದೂ ಹಬ್ಬ ಸಂಕ್ರಾಂತಿ ಸಂತೋಷ ಸಮೃದ್ಧಿ ತರಲಿ ಎಂದು ಹಾರೈಸುತ್ತೇನೆ ಎಂದರು.

ಈ ಸಂಧರ್ಭದಲ್ಲಿ ಲಗ್ಗರೆ ವಾರ್ಡ್ ಅಧ್ಯಕ್ಷ

ಹನುಮೇಗೌಡ, ಲಗ್ಗರೆ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಜೀವಿತ್ ಮಂಜುನಾಥಗೌಡ, ಪ್ರಜಾ ಸೇವಾ ಮಾರ್ಗ ಟ್ರಸ್ಟ್ ಅಧ್ಯಕ್ಷ

ಯೋಗೀಶ್ ಗೌಡ, ಮುಖಂಡರಾದ ಕೃಷ್ಣ ಶ್ರೀಕಾಂತ್, ನಿತಿನ್, ಪವನ್, ಬಿಪಿ ಮಂಜುನಾಥ್, ಅಶೋಕ್, ಮಹಿಳಾ ಮುಖಂಡರಾದ ಉಮಾದೇವಿ, ಮಂಜುಳಾ, ವಿಮಲ, ಸೋನಿ, ಮತ್ತಿತರರು ಇದ್ದರು.

# ಭಾರತದ ಆತ್ಮ ವಿವೇಕಾನಂದರು: ಡಾ. ಶಿವರಂಜನ್ ಸತ್ಯಂಪೇಟೆ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಧರ್ಮವು ಅದ್ಯಾತ್ಮದ ತಳಹದಿಯ ಮೇಲೆ ನಿಂತಿರಬೇಕು ಎಂದು ಹೇಳಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಭಾರತದ ಆತ್ಮವಿದ್ದಂತೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ. ಶಿವರಂಜನ ಸತ್ಯಂಪೇಟೆ ಅಭಿಪ್ರಾಯಪಟ್ಟರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕಲಬುರಗಿ ಪ್ರಾದೇಶಿಕ ಕೇಂದ್ರ, ಯುವ ರೆಡ್ ಕ್ರಾಸ್ ಮತ್ತು ಎನ್ ಎಸ್ ಎಸ್ ಘಟಕ ಇವುಗಳ ಸಂಯುಕ್ತಾಶ್ರಯದಲ್ಲಿ ಪ್ರಾದೇಶಿಕ ಕೇಂದ್ರದ ಸೆಮಿನಾರ್ ಹಾಲ್ ನಲ್ಲಿ ಜರುಗಿದ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿವೇಕಾನಂದರು ಹಿಂದೂ ಧರ್ಮ, ದೇಶದ




ಸಂಸ್ಕೃತಿಯ ಶ್ರೇಷ್ಠತೆಯ ಜೊತೆಗೆ ಭಾರತದ ರಾಷ್ಟ್ರೀಯತೆ ಮತ್ತು ಬಹುತ್ವವನ್ನು ಪ್ರತಿಪಾದಿಸಿದ ಮಹಾನ್ ಸಂತ ಎಂದು ತಿಳಿಸಿದರು.

ಯುವಕರು ಈ ದೇಶದ ಸಂಪತ್ತು. ಅವರು ಮನಸ್ಸು ಮಾಡಿದರೆ ಏನೆಲ್ಲ ಬದಲಾವಣೆ ಮಾಡಲು ಸಾಧ್ಯ. ದೇವರ ಪೂಜೆಗಿಂತ ಬಡವರ ಸೇವೆ ಬಹಳ ಮುಖ್ಯವಾಗಿದ್ದು, ದೀನ, ವಿಧವೆ, ರೋಗಿಗಳಲ್ಲಿ ದೇವರನ್ನು ಕಾಣಿರಿ ಎಂಬುದು ಅವರ ಸಂದೇಶವಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿಟಿಯು ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಡಾ. ಶುಭಾಂಗಿ ಡಿ.ಸಿ. ಮಾತನಾಡಿ, ದಯೆ ಎಲ್ಲ ಧರ್ಮಗಳ ಮೂಲ. ಮಾನವೀಯತೆ, ಕ್ರೀಯಾಶೀಲ ಗುಣಗಳನ್ನು ಯುವಕರು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿಶ್ವನಾಥರೆಡ್ಡಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಸವರಾಜ ಮಠಪತಿ ವಿಶೇಷ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಸಭಾಪತಿ ಅರುಣಕುಮಾರ ಲೋಯಾ, ಉಪಸಭಾಪತಿ ಭಾಗ್ಯಲಕ್ಷ್ಮೀ ಎಂ. ಗೌರವ ಕಾರ್ಯದರ್ಶಿ ರವೀಂದ್ರ ಶಾಬಾದಿ ಮಾತನಾಡಿದರು.

ಖಜಾಂಚಿ ಜಿ.ಎಸ್. ಪದ್ಮಾಜಿ, ಯುವ ರೆಡ್ ಕ್ರಾಸ್ ಸಂಚಾಲಕ ಡಾ. ಪದ್ಮರಾಜ ರಾಸಣಗಿ ವೇದಿಕೆಯಲ್ಲಿದ್ದರು.

ವಿಟಿಯು ಯುವ ರೆಡ್ ಕ್ರಾಸ್ ಸಂಸ್ಥೆಯ ಡಾ. ಶರಣಗೌಡ ಬಿರಾದಾರ ಸ್ವಾಗತಿಸಿದರು. ವಿಟಿಯು ಎನ್ ಎಸ್ ಎಸ್ ಘಟಕದ ಕಾರ್ಯಕ್ರಮ ಅಧಿಕಾರಿ ಪ್ರೊ. ಸಂಜಯ ಪಟ್ಟಣಶೆಟ್ಟಿ ವಂದಿಸಿದರು. ದೀಪಿಕಾ ನಿರೂಪಿಸಿದರು.

# ಸಂಕ್ರಾಂತಿ ಸಮ್ಮಿಲನ ಆಹಾರ ಮೇಳ ಸೀಸನ್ 3 ಸಂಭ್ರಮ





- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಂದೆ–ತಾಯಂದಿರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ನಿರಂತರವಾಗಿರಬೇಕು ವರಿತು ಮೊಬೈಲ್ ಫೋನ್ ಬಳಕೆ ಮಾಡದಂತೆ ನಿಗಾವಹಿಸಬೇಕು ಹಾಗೂ ಮಕ್ಕಳಿಗಾಗಿ ಸಲ್ಪ ಸಮಯವನ್ನು ತಾಯಂದಿರು ಮೀಸಲಾಡಬೇಕೆಂದು ಎಂದು ಮಕ್ಕಳ ಕುರಿತು ಬಂಗಾರಿ ಕ್ಯಾಂಪ್ ಶ್ರೀ ಸದಾನಂದ ಸ್ವಾಮೀಜಿ ಶರಣರು ನುಡಿಗಳನ್ನು ಹೇಳಿದರು.

ತಾಲೂಕಿನ ಹೊಸಹಳ್ಳಿ ಇ.ಜೆ ಹೊರವಲಯದಲ್ಲಿ ಇರುವ ಐಕ್ಯೂ ಇಂಟರ್ನ್ಯಾಷನಲ್ ಸ್ಕೂಲಿನಲ್ಲಿ ಸಂಕ್ರಾಂತಿ ಸಮ್ಮಿಲನ ಹಾಗೂ ಮಕ್ಕಳಿಂದ ವಿವಿಧ ರೀತಿಯ ಆಹಾರದ ಮೇಳ ಸೀಸನ್ –3 ಸುಗ್ಗಿ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ ಸದಾನಂದ ಶರಣರು ವೆಂಕಟಗಿರಿ ಕ್ಯಾಂಪ್, ಶಾಲೆಯ ಅಧ್ಯಕ್ಷರಾದ ಶ್ರೀರಾಮಚಂದ್ರ ರಾವ್, ಖಜಾಂಜಿಯಾದ ಸುಗಣ, ಯೋಗ ಗುರುಗಳಾದ ಜಿ. ಅರುಣಾ, ಡಾ. ಯೂನಿಸ್ ಪ್ರಾಚಾರ್ಯರಾದ ಜಿ.ರಾಜಶೇಖರ್, ಉಪ ಪ್ರಾಚಾರ್ಯರಾದ ಬಸವರಾಜ ಅಮರಾಪುರ ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮುಖಾಂತರ ಉದ್ಘಾಟಿಸಿದರು.

ಈ ವರ್ಷವೂ ನಡೆಸಲಾದ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಖ–ಖಇಖ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಮಕ್ಕಳಿಗೆ 10 ಸಾವಿರ ರೂಪಾಯಿ ಚೆಕ್, ದ್ವಿತೀಯ ಸ್ಥಾನ ಗಳಿಸಿದ ಮಕ್ಕಳಿಗೆ 6 ಸಾವಿರ ರೂಪಾಯಿ ಚೆಕ್ ಹಾಗೂ ತೃತೀಯಾ ಸ್ಥಾನ ಗಳಿಸಿದ ಮಕ್ಕಳಿಗೆ 3 ಸಾವಿರ ರೂಪಾಯಿ ಬ್ಯಾಂಕ್ ಚೆಕ್ ವಿತರಿಸುವುದರ ಮೂಲಕ ಶ್ರೀ ಸದಾನಂದ ಶರಣರು ವಿದ್ಯಾರ್ಥಿಗಳನ್ನು ಕುರಿತು ತಮ್ಮ ಹಿತ ನುಡಿಗಳನ್ನು ಹೇಳುವುದರ ನಂತರ ಈ ಕಾರ್ಯಕ್ರಮಕ್ಕೆ ಬಂದ ಅನೇಕ ಪೋಷಕರು ಈ ಕಾರ್ಯಕ್ರಮವನ್ನು ಕುರಿತು ತಮ್ಮ ಅನಿಸಿಕೆಗಳನ್ನು ಕೂಡ ವ್ಯಕ್ತಪಡಿಸಿದರು. ಈ ಕಾರ್ಯಕ್ರಮವು ಯಶಸ್ಸುಗೊಳ್ಳಲು ಕಾರಣೀಭೂತರಾದ ಪೋಷಕರಿಗೂ ಶಾಲೆಯ ಶಿಕ್ಷಕವೃಂದ ಹಾಗೂ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿಯವರು ಅಭಿನಂದನೆಯನ್ನು ತಿಳಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)